بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّی عَلٰی رَسُوْلِهِ الْكَرِيْمِ    وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 35

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

01 ಸೆಪ್ಟೆಂಬರ್ 2022, 01 ತಬೂಕ್ 1401 ಹಿಜರಿ ಶಮ್‌ಸಿ,
04 ಸಫರ್ 1444 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

قَالَ مُوْسٰى لِقَوْمِهِ اسْتَعِيْنُوْا بِاللّٰهِ
وَاصْبِرُوْا ۚ اِنَّ الْاَرْضَ لِلّٰهِ ۙ يُوْرِثُهَا
مَنْ يَّشَآءُ مِنْ عِبَادِهٖ ؕ وَالْعَاقِبَةُ
لِلْمُتَّقِيْنَ ○ (اعراف:129)

**(ಅಲ್ ಅಅ್‌ರಾಫ್ : 129)**

ಅಂದರೆ: ಮೂಸಾ ತನ್ನ ಜನರೊಡನೆ ಹೇಳಿದರು: 'ನೀವು ಅಲ್ಲಾಹನ ಸಹಾಯವನ್ನು ಯಾಚಿಸಿರಿ ಮತ್ತು ಸಹನೆಯನ್ನು ಕೈಗೊಳ್ಳಿರಿ. ಖಂಡಿತವಾಗಿಯೂ ಭೂಮಿ ಅಲ್ಲಾಹನದ್ದಾಗಿದೆ. ಅವನ ದಾಸರ ಪೈಕಿ ತಾನು ಇಷ್ಟಪಡುವವರಿಗೆ ಅವನು ಅದನ್ನು ವಾರಸು ಹಕ್ಕಾಗಿ ನೀಡುತ್ತಾನೆ. ಅಂತಿಮ ವಿಜಯ ಭಯಭಕ್ತಿಯನ್ನು ಕೈಗೊಳ್ಳುವವರಿಗೆ.'

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಪ್ರವಾದಿ(ಸ) ರವರು ಮದ್ಯದ ವ್ಯಾಪಾರವನ್ನೂ ನಿಷೇಧಿಸಿದ್ದಾರೆ

(2083) ಹಝ್‌ರತ್ ಅಬು ಹುರೈರಾ(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ಹೇಳಿದರು: ಖಂಡಿತವಾಗಿಯು ಜನರ ಮೇಲೆ ಎಂತಹ ಕಾಲ ಬರುವುದೆಂದರೆ ಒಬ್ಬ ವ್ಯಕ್ತಿಯು ಸಂಪತ್ತುಗಳಿಸುವಾಗ ಹಲಾಲ್ ಅಥವಾ ಹರಾಮ್ ಎಂದು ಚಿಂತಿಸುವುದಿಲ್ಲ.

(2084) ಹಝ್‌ರತ್ ಆಯಿಷಾ(ರ) ವರದಿ ಮಾಡುತ್ತಾರೆ ಅವರು ಹೇಳಿದರು: ಸೂರಃ ಬಕರದ ಕೊನೆಯ ಆಯತ್‌ಗಳು ಅವತರಿಸಿದಾಗ ಪ್ರವಾದಿ(ಸ) ರವರು ಅವುಗಳನ್ನು ಮಸೀದಿಯಲ್ಲಿ ಪಠಿಸಿದರು ಮತ್ತು ಅವರು ಮದ್ಯ ಮಾರಾಟವನ್ನು ಸಹ ನಿಷೇಧಿಸಿದರು.

### ಹಝ್‌ರತ್ ಖಬಾಬ್(ರ) ಅವರ ನಂಬಿಕೆ ಮತ್ತು ಅವರ ದೃಢತೆ

(2091) ಹಝ್‌ರತ್ ಖಬ್ಬಾಬ್(ರ) (ಬಿನ್ ಅರ್ಥ್) ವರದಿ ಮಾಡುತ್ತಾರೆ ನಾನು ಜಾಹಿಲಿಯ ಕಾಲದಲ್ಲಿ ಕಮ್ಮಾರನಾಗಿ ಕೆಲಸ ಮಾಡುತ್ತಿದ್ದೆ ಮತ್ತು ನನಗೆ ಆಸ್ ಬಿನ್ ವೈಲ್ ಸಾಲವನ್ನು ಹಿಂದಿರುಗಿಸಬೇಕಾಗಿತ್ತು. ನಾನು ಅವರ ಬಳಿ ಸಾಲವನ್ನು ಕೇಳಲು ಹೋದೆ, ಅವನು ಹೇಳಿದನು, ನೀನು ಮುಹಮ್ಮದ್(ಸ) ಅವರನ್ನು ನಿರಾಕರಿಸುವವರೆಗೆ ನಾನು ಅದನ್ನು ನಿನಗೆ ಕೊಡುವುದಿಲ್ಲ. ಅದಕ್ಕೆ ನಾನು ಹೇಳಿದೆ: ಅಲ್ಲಾಹನು ನಿನಗೆ ಮರಣ ನೀಡಿ ಪುನಃ ನಿನ್ನನ್ನು ಬದುಕಿಸಿದರೂ ನಾನು ನಿರಾಕರಿಸುವುದಿಲ್ಲ. ಅವನು ಹೇಳಿದನು, "ಒಳ್ಳೆಯದು, ನಾನು ಸಾಯುವವರೆಗೂ ಉಳಿಯಲು ಅವಕಾಶ ಮಾಡಿಕೊಡಿ, ನಂತರ ನಾನು ಬದುಕಿದಾಗ ನನಗೆ ಸಿಗುವಂತಹ ಸಂಪತ್ತು ಮತ್ತು ಮಕ್ಕಳಲ್ಲಿ ನಾನು ನಿನ್ನ ಸಾಲವನ್ನು ತೀರಿಸುತ್ತೇನೆ.

**(ಸಹೀಹ್ ಬುಖಾರಿ, ಸಂಪುಟ-4, ಕಿತಾಬ್ ಅಲ್-ಬಯು, 2008 ರಲ್ಲಿ ಪ್ರಕಟಿತ, ಖಾದಿಯಾನ್)**

## ಯಾರು ತಮ್ಮ ಅಂತರಂಗ ಶುದ್ಧಿಗೊಳಿಸುತ್ತಾರೊ ಅವರೇ ಅಬ್ದಾಲ್ (ದೈವಭಕ್ತ) ಆಗಿರುವರು ಮತ್ತು ಈ ಬದಲಾವಣೆಯಿಂದಾಗಿ, ಅವರ ಹೃದಯಗಳು ಪಾಪದ ಕತ್ತಲೆ ಹಾಗೂ ತುಕ್ಕುಗಳಿಂದ ಶುದ್ಧವಾಗುತ್ತವೆ

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ನೋಡಿ! ಓರ್ವ ವ್ಯಕ್ತಿ ಬದಲಾದಷ್ಟೂ ಅವನು ಅಬ್ದಾಲ್‌ರ (ದೈವಭಕ್ತರ) ವರ್ಗಕ್ಕೆ ಸೇರುತ್ತಾನೆ. ಅವನು ಅಬ್ದಾಲ್‌ರ (ದೈವಭಕ್ತರ) ವರ್ಗಕ್ಕೆ ಪ್ರವೇಶಿಸುವವರೆಗೂ ಪವಿತ್ರ ಖುರ್‌ಆನ್‌ನ ನಿಜಸಂಗತಿಗಳು ಬಹಿರಂಗವಾಗುವುದಿಲ್ಲ. ಜನರು ಅಬ್ದಾಲ್‌ನ ಅರ್ಥವನ್ನು ತಿಳಿದುಕೊಳ್ಳುವುದರಲ್ಲಿ ತಪ್ಪು ಮಾಡಿದ್ದಾರೆ ಮತ್ತು ಸ್ವತಃ ತಮ್ಮ ಕಡೆಯಿಂದ ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ವಾಸ್ತವವೆಂದರೆ ಯಾರು ತಮ್ಮ ಅಂತರಂಗ ಶುದ್ಧೀಗೊಳಿಸುತ್ತಾರೊ ಮತ್ತು ಈ ಬದಲಾವಣೆಯಿಂದಾಗಿ ಅವರ ಹೃದಯಗಳು ಪಾಪಗಳ ಕತ್ತಲೆ ಹಾಗೂ ತುಕ್ಕುಗಳಿಂದ ಶುದ್ಧವಾಗುತ್ತವೆ ಅವರೇ ಅಬ್ದಾಲ್ (ದೈವಭಕ್ತ) ಆಗಿರುತ್ತಾರೆ. ಸೈತಾನನ ಆಡಳಿತವನ್ನು ಮುರಿದು ಸರ್ವಶಕ್ತನಾದ ಅಲ್ಲಾಹನ ಅನುಗ್ರಹವು ಅವರ ಹೃದಯದ ಮೇಲಿರುತ್ತದೆ. ತದನಂತರ ಅವರು ರೂಹುಲ್ ಖುದುಸ್‌ನಿಂದ (ಪವಿತ್ರಾತ್ಮದಿಂದ) ಬಲವನ್ನು ಪಡೆಯುತ್ತಾರೆ ಮತ್ತು ಸರ್ವಶಕ್ತನಾದ ಅಲ್ಲಾಹನಿಂದ ಅನುಗ್ರಹವನ್ನು ಪಡೆಯುತ್ತಾರೆ. ನಿಮ್ಮಲ್ಲಿ ಯಾರು ತಮ್ಮೊಳಗೆ ಬದಲಾವಣೆಯನ್ನು ಮಾಡುತ್ತಾರೊ ಅವರು ಅಬ್ದಲ್ ಎಂದು ನಾನು ನಿಮಗೆ ಶುಭವಾರ್ತೆಯನ್ನು ನೀಡುತ್ತೇನೆ. ಒಬ್ಬ ವ್ಯಕ್ತಿಯು ಅಲ್ಲಾಹನ ಕಡೆಗೆ ಹೆಜ್ಜೆ ಹಾಕಿದರೆ, ಸರ್ವಶಕ್ತನಾದ ಅಲ್ಲಾಹನು ಅವನನ್ನು ಹಿಡಿದುಕೊಳ್ಳುತ್ತಾನೆ. ಅದು ಸತ್ಯವಾಗಿದೆ ಮತ್ತು ನಾನು ನಿಮಗೆ ಹೇಳುತ್ತೇನೆ ಚತುರತೆಯಿಂದ ಪವಿತ್ರ ಖುರ್‌ಆನ್‌ನ ಜ್ಞಾನವು ಬರುವುದಿಲ್ಲ. ಬುದ್ಧಿಶಕ್ತಿ ಅಥವಾ ಬುದ್ಧಿಯ ಅಭಿವೃದ್ಧಿ ಪವಿತ್ರ ಖುರ್‌ಆನ್‌ನ ಜ್ಞಾನವನ್ನು ಗ್ರಹಿಸಲು ಏಕೈಕ ಕಾರಣವಾಗುವುದಿಲ್ಲ. ತಖ್ವ (ಧರ್ಮನಿಷ್ಠೆಯೇ) ಮುಖ್ಯವಾದ ಮಾರ್ಗವಾಗಿದೆ. ಧರ್ಮನಿಷ್ಠರಿಗೆ ಗುರು ಅಲ್ಲಾಹನಾಗಿದ್ದಾನೆ. ಪ್ರವಾದಿಗಳ ಮೇಲೆ ಉಮ್ಮೀಯತ್ (ಅನಕ್ಷರಸ್ತ) ಮೇಲುಗೈ ಸಾಧಿಸಲು ಇದೇ ಕಾರಣವಾಗಿದೆ. ನಮ್ಮ ಪ್ರವಾದಿ(ಸ) ಯವರು ಉಮ್ಮಿಯಾಗಿ (ಅನಕ್ಷರಸ್ತರಾಗಿ) ಕಳುಹಿಸಲ್ಪಟ್ಟರು. ಯಾವುದೇ ಶಾಲೆಯಲ್ಲಿ ಶಿಕ್ಷಣ ಪಡೆದಿಲ್ಲ ಮತ್ತು ಅವರ ಶಿಕ್ಷಕರಾಗಿ ಯಾರೂ ಇರಲಿಲ್ಲ. ಆದರೆ ಅವರು ಎಂತಹ ಜ್ಞಾನ ಹಾಗೂ ಸತ್ಯಸಂಗತಿಗಳನ್ನು ಲೋಕದ ಮುಂದೆ ವಿವರಿಸಿದರು ಎಂದರೆ ಅದು ಲೋಕೋಜ್ಞಾನದ ವಿದ್ವಾಂಸರನ್ನು ಬೆರಗುಗೊಳಿಸುತ್ತದೆ ಮತ್ತು ಆಶ್ಚರ್ಯಚಕಿತಗೊಳಿಸುತ್ತದೆ. ಪವಿತ್ರ ಖುರ್‌ಆನ್‌ನಂತಹ ಶುದ್ಧ ಮತ್ತು ಪರಿಪೂರ್ಣ ಗ್ರಂಥವು ಅವರ ತುಟಿಗಳ ಮೇಲೆ ಜಾರಿಗೊಳಿಸಲಾಯಿತು. ಅದರ ಆಳವಾದ ಜ್ಞಾನವು ಹಾಗೂ ವಾಕ್ಚಾತುರ್ಯವು ಎಲ್ಲಾ ಅರಬ್ಬರನ್ನು ಮೌನಗೊಳಿಸಿತು. ಪವಿತ್ರ ಪ್ರವಾದಿ(ಸ) ಜ್ಞಾನದಲ್ಲಿ ಶ್ರೇಷ್ಠರಾಗಲು ಕಾರಣವೇನು? ಅದು ಧರ್ಮನಿಷ್ಠೆಯೇ ಆಗಿತ್ತು. ಪೈಗಂಬರ್(ಸ) ರವರ ಪರಿಶುದ್ಧ ಜೀವನಕ್ಕೆ ಅವರು ಪವಿತ್ರ ಕುರಾನ್‌ನಂತಹ ಗ್ರಂಥವನ್ನು ತಂದರು ಎಂಬುದಕ್ಕಿಂತ ಹೆಚ್ಚಿನ ಪುರಾವೆ ಏನಿದೆ, ಅವರ ಜ್ಞಾನವು ಜಗತ್ತನ್ನು ಅಚ್ಚರಿಗೊಳಿಸಿದೆ.

ಅವರು ಉಮ್ಮಿ(ಅನಕ್ಷರಸ್ತ) ಆಗಿದ್ದರು ಎಂಬುವುದು ಪವಿತ್ರ ಖುರ್‌ಆನ್‌ನ ಜ್ಞಾನ ಅಥವಾ ದೈವಿಕ ಜ್ಞಾನಗಳಿಗೆ ತಖ್ವದ (ಧರ್ಮನಿಷ್ಠೆ) ಅಗತ್ಯವಿದೆಯೇ ಹೊರತು ಲೌಕಿಕ ತಂತ್ರಗಳಲ್ಲ ಎಂಬುದಕ್ಕೆ ಒಂದು ಉದಾಹರಣೆ ಮತ್ತು ಪುರಾವೆಯಾಗಿದೆ.

**(ಮಲ್‌ಫೂಝಾತ್, ಸಂಪುಟ-1, ಪುಟ-386, ಪ್ರಕಟಿತ ಖಾದಿಯಾನ್ 2018)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ۞ شَرُّ السُّمُوْمِ عَدَاوَةُ الصُّلَحَاءِ

**“ಖಸೀದ ಇಜಾಝಿಯ” ದ ಬದಲು ಪ್ರಸ್ತುತಪಡಿಸಿದ್ದಲ್ಲಿ ಮೌಲ್ವಿ ಸನಾವುಲ್ಲ ಅವರಿಗೆ ಹತ್ತು ಸಾವಿರ ರೂಪಾಯಿಗಳ ವೈಭವಯುತ ಬಹುಮಾನ”**

**ಇದೊಂದು ಮಹೋನ್ನತವಾದ ದೃಷ್ಟಾಂತವಾಗಿದೆ. ಆದುದರಿಂದ ಅದಕ್ಕಾಗಿ ಹತ್ತು ಸಾವಿರ ರೂಪಾಯಿ ಬಹುಮಾನದೊಂದಿಗೆ ಮೌಲ್ವಿ ಸನಾವುಲ್ಲಾ ಮತ್ತು ಅವರ ಸಹಾಯಕರ ಮುಂದೆ ಪ್ರಸ್ತುತಪಡಿಸುತ್ತೇನೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಉದ್(ಅ) ರವರ ಈ ವೈಭವಯುತ ಬಹುಮಾನದ ಸವಾಲು ನಾವು ಅವರ ಗ್ರಂಥ “ಇಜಾಝ್ ಅಹ್ಮದಿ ಅನುಬಂಧ ನುಝೂಲುಲ್ ಮಸೀಹ್” ರೂಹಾನಿ ಖಝಾಯನ್ ಸಂಪುಟ 19 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಖಾಲಿದ್ ಅಹ್ಮದಿಯತ್ ಹಝ್ರತ್ ಮೌಲಾನ ಜಲಾಲುದ್ದೀನ್ ಸಾಹಿಬ್ ಶಮ್ಸ್(ರ) ಇಜಾಝ್ ಅಹ್ಮದಿ ಗ್ರಂಥದ ಪರಿಚಯದಲ್ಲಿ ಹೇಳುತ್ತಾರೆ.

“ಅಮೃತ್ಸರ ಜಿಲ್ಲೆಯಲ್ಲಿ ಮುದ್ ಎಂಬ ಒಂದು ಊರಿದೆ. ಬಕಟ್ ಗಂಜ್ ಮರ್‌ದಾನ್ ಊರಿನಲ್ಲಿ ವಾಸಿಸುವವರಾಗಿದ್ದರು. ಮಿಯಾ ಮುಹಮ್ಮದ್ ಯೂಸುಫ್ ಸಾಹಿಬ್ ಅಹ್ಮದಿ ಅವರ ಬೇಡಿಕೆ, ಅವರ ಸಹೋದರ ಮಿಯಾ ಮುಹಮ್ಮದ್ ಯಾಕೂಬ್ ಸಾಹಿಬ್ ಅಹ್ಮದಿಯಾ ಸಂಘಟನೆಗೆ ಸೇರಿದರು. ಆಗ ಅವರ ಊರಿನವರು ಅವರನ್ನು ಕಠಿಣವಾಗಿ ವಿರೋಧಿಸಿದರು. ಮತ್ತು ಅವರಿಗೆ ಬಹಿಷ್ಕಾರ ಹಾಕಿದರು. ಅವರು ತಮ್ಮ ಸಹೋದರ ಮಿಯಾ ಮುಹಮ್ಮದ್ ಯುಸೂಫ್ ಸಾಹಿಬರನ್ನು ಮರ್‌ದನ್‌ನಿಂದ ಕರೆಯಿಸಿಕೊಂಡರು. ಅಂತಿಮವಾಗಿ ಊರಿನವರೊಂದಿಗೆ ಈ ನಿರ್ಣಯವಾಯಿತು. ಅಲ್ಲಿ 29, 30 ಅಕ್ಟೋಬರ್ 1902 ರಂದು ಚರ್ಚಾಕೂಟ ಏರ್ಪಟ್ಟಿತು. ಮಿಯಾ ಮುಹಮ್ಮದ್ ಯೂಸೂಫ್ ಸಾಹಿಬ್ ಅವರ ಒತ್ತಾಯದ ಮೇರೆಗೆ ಹಝ್ರತ್ ಮಸೀಹ್ ಮೌಊದ್ (ಅ) ಮೌಲ್ವಿ ಸಯ್ಯದ್ ಮುಹಮ್ಮದ್ ಸರ್‌ವರ್ ಶಾ ಸಾಹಿಬ್ ಮತ್ತು ಮೌಲ್ವಿ ಅಬ್ದುಲ್ಲ ಸಾಹಿಬ್ ಕಾಶ್ಮೀರಿ ಅವರನ್ನು ಅಲ್ಲಿ ಕಳುಹಿಸಿದರು. ಆ ಕಡೆಯಿಂದ ಮೌಲ್ವಿ ಸನಾವುಲ್ಲಾ ಸಾಹಿಬ್ ಅಮೃತ್ಸರಿ ಚರ್ಚೆಗಾರರಾಗಿ ನಿಯುಕ್ತಗೊಂಡರು. ಮುದ್‌ನ ಜನಸಂಖ್ಯೆ ಆ ಸಮಯ ಎರಡು ನೂರುಗಳ ಸಮೀಪವಿತ್ತು. ಆದರೆ ನೆರೆಯ ಹಳ್ಳಿಗಳಿಂದ ಸೇರುವ ಅಹ್ಮದಿಯೇತರ ಸಂಖ್ಯೆ ಆರು, ಏಳು ನೂರುವರೆಗೆ ತಲುಪಿತ್ತು. ಆದರೆ ಅಹ್ಮದಿ ಕೇವಲ ಮೂರು ನಾಲ್ಕು ಜನ ಮಾತ್ರ ಇದ್ದರು. ಚರ್ಚೆಯಾಯಿತು. ಚರ್ಚೆಯ ಎರಡು ದಿನಗಳ ನಂತರ ಸಾಹಿಬ್ ತಮ್ಮ ಗೆಳೆಯರೊಂದಿಗೆ 2 ನವೆಂಬರ್ 1902 ರಂದು ಖಾದಿಯಾನ್ ತಲುಪಿದರು ಮತ್ತು ಚರ್ಚೆಯ ಸಂಪೂರ್ಣ ವಿವರ ಹಝ್ರತ್ ಅಕ್‌ದಸ್(ಅ) ರವರಿಗೆ ನೀಡಿದರು. ಮೌಲವಿ ಸನಾವುಲ್ಲಾಹ್ ಸಾಹಿಬ್ ಚರ್ಚೆಯ ನಡುವೆ ಒಂದು ಆರೋಪ ಹೀಗೆ ಮಾಡಿದರು. ಮಿರ್ಝಾ ಸಾಹೇಬರ ಎಲ್ಲಾ ಭವಿಷ್ಯವಾಣಿಗಳು ಸುಳ್ಳಾಗಿವೆ. ಎರಡನೆಯದಾಗಿ ಹೇಳಿದರು. ನಾನು ಮಿರ್ಝಾ ಸಾಹೇಬರೊಂದಿಗೆ ಮುಬಾಹಲಕ್ಕಾಗಿ ಸಿದ್ಧನಿದ್ದೇನೆ. 3ನೇಯದಾಗಿ ಹಝ್ರತ್ ಮೌಲವಿ ಸರ್ವರ್ ಷಾಹ್ ಸಾಹೇಬ ಅವರು ಕೇಳಿದ ಮಾತಿಗೆ ಉತ್ತರವಾಗಿ ನೀವು ಹಝ್ರತ್ ಮಿರ್ಝಾ ಸಾಹೇಬರನ್ನು ಸುಳ್ಳುಗಾರನೆಂದು ಭಾವಿಸುವುದಾದರೆ ಈಜಾಝುಲ್ ಮಸೀಹ್ ಗ್ರಂಥಕ್ಕೆ ಉತ್ತರ ಏಕೆ ಬರೆಯಲಿಲ್ಲ. ಅದಕ್ಕೆ ಅವರು ಹೇಳಿದರು. ನಾನು ಬಯಸಿದರೆ ಸುಲಭವಾಗಿ ಅವರಿಗೆ ಉತ್ತರ ಬರೆಯಬಲ್ಲೆ. ಆದರೆ ಹಝ್ರತ್ ಅಕ್‌ದಸ್(ಅ) ಈ ಮಾತುಗಳಿಗೆ ಉತ್ತರ ನೀಡುವುದು ಉಚಿತ ಎಂದು ಭಾವಿಸಿದರು.

ಹಾಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ಮೌಲವಿ ಸನಾವುಲ್ಲಾ ಅಮೃತಸರ ಅವರ ಉತ್ತರಕ್ಕಾಗಿ “ಎಜಾಝ್ ಅಹ್ಮದಿ ಝಮೀಮ ನುಝೂಲುಲ್ ಮಸೀಹ್” ಗ್ರಂಥ ರಚಿಸಿದರು. ಅದರಲ್ಲಿ ಸನಾವುಲ್ಲಾ ಸಾಹೇಬರ ಎಲ್ಲಾ ಅಪಾದನೆಗಳಿಗೆ ಸೂಕ್ತವಾದ ಉತ್ತರವನ್ನು ನೀಡಿದರು. ಅವರು ಎಜಾಝ್ ಅಹ್ಮದಿ ಪತ್ರಿಕೆಯಲ್ಲಿ 3 ಬಹುಮಾನಗಳ ಸವಾಲು ಸಹ ಹಾಕಿದರು.

1) ಮೊದಲನೇ ಸವಾಲು ಅವರು ಕೊಟ್ಟಿದ್ದೇನೆಂದರೆ ಮೌಲವಿ ಸನಾವುಲ್ಲಾ ಅಥವಾ ಮೌಲವಿ ಮುಹಮ್ಮದ್ ಹುಸೇನ್ ಅಥವಾ ಯಾವುದೇ ಫಾದರಿ ಹಝ್ರತ್ ಮಸೀಹ್(ಅ) ಅವರ ಮೇಲೆ ಯಹೂದಿಯರು ಮಾಡಿದ ಆಪಾದನೆಗಳಿಗೆ ಉತ್ತರ ನೀಡಿದರೆ ಅವರಿಗೆ ಒಂದು ನೂರು ರೂಪಾಯಿ ನಗದು ಬಹುಮಾನ ನೀಡಲಾಗುವುದು.

2) ಮೌಲವಿ ಸನಾವುಲ್ಲಾ ಅವರು ಮುಘ್ಧದಲ್ಲಿ ಆದ ಚರ್ಚೆಯಲ್ಲಿ ಹೇಳಿದರು. ಹಝ್ರತ್ ಮಸೀಹ್ ಮೌಊದ್(ಅ) ಅವರ ಎಲ್ಲಾ ಭವಿಷ್ಯವಾಣಿಗಳು ಸುಳ್ಳಾಗಿವೆ. ಆಗ ಅವರು ಮೌಲವಿ ಸನಾವುಲ್ಲಾ ಅವರಿಗೆ ಸವಾಲು ಹಾಕಿದರು ಅವರು ನನ್ನ ಯಾವುದೆಲ್ಲಾ ಭವಿಷ್ಯವಾಣಿಗಳು ಸುಳ್ಳು ಎಂದು ಸಾಬೀತು ಮಾಡುವರೋ ಅಷ್ಟು ಭವಿಷ್ಯವಾಣಿಗಳಿಗೆ ಒಂದು ನೂರು ರೂಪಾಯಿ ಬಹುಮಾನ ನೀಡಲಾಗುವುದು.

3) ಅವರು ಈಜಾಝ್ ಅಹಮದಿಯಲ್ಲಿ 533 ಸಾಲುಗಳನ್ನೊಳಗೊಂಡ ಒಂದು ಸಾಹಿತ್ಯಪೂರ್ಣ ಅರಬಿ ಖಸೀದ ಬರೆದು ಪ್ರಕಟಿಸಿದರು. ಮತ್ತು ಅದರ ಬಗ್ಗೆ ಮೌಲವಿ ಸನಾವುಲ್ಲ ಅಮೃತಸರಿ ಅವರಿಗೆ ಸವಾಲು ಎಸೆದಿದ್ದರು. ಅವರು ಇದೇ ರೀತಿಯ ಖಸೀದ ಬರೆದರೆ ಅವರಿಗೆ 10,000 ರೂಪಾಯಿ ಬಹುಮಾನ ನೀಡಲಾಗುವುದು.

ಮೊದಲನೆಯ ಬಹುಮಾನದ ವಿವರವು ನಾವು ಈ ಮುಂಚೆ ನೀಡಿರುತ್ತೇವೆ. ಈ ಸಂಚಿಕೆಯಲ್ಲಿ ನಾವು 3ನೇಯ ಸವಾಲಿನ ವಿವರ ನೀಡುವೆವು. ಮೌಲವಿ ಸನಾವುಲ್ಲ ಅಮೃತಸರಿ ಹೇಳಿದರು. ನಾನು ಈಜಾಝುಲ್ ಮಸೀಹ್ ನಂತಹ ಪುಸ್ತಕ ಬರೆಯಬಲ್ಲೆ ಎಂದು. ಈಜಾಝುಲ್ ಮಸೀಹ್ ಹಝ್ರತ್ ಮಸೀಹ್ ಮೌವೂದ್(ಅ) ರವರ ಮೇರು ಕೃತಿಯಾಗಿವೆ. ಅದರಲ್ಲಿ ಅವರು ಸೂರ ಫಾತಿಹದ ವ್ಯಾಖ್ಯಾನ ಸಾಹಿತ್ಯ ಪೂರ್ಣ ಅರಬಿಯಲ್ಲಿ ಬರೆದಿದ್ದರು. ಮತ್ತು ಪೀರ್ ಮೆಹರ್ ಆಲಿ ಷಾ ಅವರಿಗೆ ವಿಶೇಷವಾಗಿ, ಮತ್ತು ಇತರ ಎಲ್ಲಾ ಮೌಲವಿಗಳಿಗೆ ಇಂತಹ ಗ್ರಂಥ ಬರೆದರೆ ರೂ. 10,000 ರೂಪಾಯಿ ಬಹುಮಾನ ನೀಡುವ ಸವಾಲು ಹಾಕಿದರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ನಾವು ಮೌಲವಿ ಸನಾವುಲ್ಲಾ ಅಮೃತಸರಿ ಅವರಿಂದ ಈಜಾಝುಲ್ ಮಸೀಹ್‌ನ ಪ್ರತಿರೂಪ ಬರೆಯಲು ಹೇಳುವುದಿಲ್ಲ. ಏಕೆಂದರೆ ಅವರಿಗೆ ನಾವು ಈಜಾಝುಲ್ ಮಸೀಹ್ ಪ್ರತಿರೂಪ ಬರೆಯಲು ಹೇಳಿದರೆ ಅವರು ಈ ನೆಪ ಮಾಡಬಹುದು. ಈ ಗ್ರಂಥವಂತೂ ನೀವು ಮೊದಲೇ ಬರೆದಾಗಿದೆ. ಹಾಗಾಗಿ ನಮಗೆ ಅದರ ಪುರವೆ ಒದಗಿಸುವುದು ಕಷ್ಟವಾಗಬಹುದು. ಆದುದರಿಂದ ಅವರು(ಅ) ಮೌಲವಿ ಸನಾವುಲ್ಲಾರವರ ಅರಬಿ ಸಾಹಿತ್ಯವನ್ನು ಪರೀಕ್ಷಿಸಲು ಬೇರೊಂದು ಉಪಾಯವನ್ನು ಹುಡುಕಿದರು. ಹಾಗೆ ಅವರು ಮುದ್ದು ಸ್ಥಳದಲ್ಲಿ ಆ ಚರ್ಚೆಯ ಆಧಾರವಾಗಿ ಒಂದು ಖಸೀದ ಅರಬಿಯಲ್ಲಿ ಬರೆದರು ಮತ್ತು ಅದರ ಪ್ರತಿ ಲಿಪಿ ತರಲು ಮೌಲವಿ ಸನಾವುಲ್ಲಾ ಅಮೃತಸರಿ ಅವರಿಗೆ ರೂ. 10,000 ರೂಪಾಯಿಯ ವೈಭವಯುತ ಬಹುಮಾನ ಮುಂದಿಟ್ಟರು. ಈಗ ಮೌಲವಿ ಸನಾವುಲ್ಲಾ ಯಾವುದೇ ನೆಪವನ್ನು ಮುಂದಿಡಲು ಸಾಧ್ಯವಿರಲಿಲ್ಲ. ಈ ಖಸೀದ ಮೊದಲೇ ಬರೆಯಲಾಗಿದ್ದು ಮತ್ತು ಅದರ ಮೇಲೆ ದೀರ್ಘ ಸಮಯ ತೆಗೆದುಕೊಂಡಿದ್ದರು. ಮತ್ತು ನಮಗೆ ಕಡಿಮೆ ಸಮಯ ನೀಡಿದ್ದಾರೆ ಎಂದು ಈ ವೈಭವಯುತ ಸವಾಲನ್ನು ನಾವು ಈ ಕೆಳಗೆ ಸಯ್ಯದ್‌ನ ಹಝ್ರತ್ ಮಸೀಹ್ ಮೌಊದ್(ಅ) ರವರ ಪದಗಳಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ.

**ಈ ಖಸೀದ ಅಲ್ಲಾಹನ ವತಿಯಿಂದ ನೀಡಲ್ಪಟ್ಟ ಒಂದು ಬಹುದೊಡ್ಡ ದೃಷ್ಟಾಂತವಾಗಿದೆ. ಅದು ವಿರೋಧಿಗಳಿಗೆ ನಾಚುವಂತೆ ಮಾಡುವುದು ಮತ್ತು ಉತ್ತರಹೀನವಾಗಿ ಮಾಡುವುದು. ಆದುದರಿಂದ ನಾನು ಈ ದೃಷ್ಟಾಂತವನ್ನು ರೂ. 10,000/– ರೂಪಾಯಿಯ ಬಹುಮಾನದೊಂದಿಗೆ ಪ್ರಸ್ತುತಪಡಿಸುತ್ತೇನೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ಈಗ ನೆನಪಿರಲಿ. ಅದಾಗ್ಯೂ ನಾನು ಇಲ್ಲಿಯವರೆಗೆ ಅರಬಿಯಲ್ಲಿ ಸುಮಾರು 17ರಷ್ಟು ಅದ್ವಿತೀಯ ಗ್ರಂಥಗಳನ್ನು ಪ್ರಕಟಿಸಿರುತ್ತೇನೆ. ಅದರ ಎದುರಿನಲ್ಲಿ ಈ ಹತ್ತು ವರ್ಷಗಳ ಅವಧಿಯಲ್ಲಿ ಒಂದು ಗ್ರಂಥ ಸಹ ವಿರೋಧಿಗಳು ಬರೆದು ಪ್ರಕಟಿಸಿಲ್ಲ. ಆದರೆ ಇಂದು ನನ್ನ ಭಾವನೆ ಏನೆಂದರೆ. ಆ ಗ್ರಂಥಗಳು ಕೇವಲ ಅರಬಿ ಸಾಹಿತ್ಯ ಮಾತ್ರವಲ್ಲ ಅದರಲ್ಲಿ ಬಹಳಷ್ಟು ಖುರ್‌ಆನ್‌ನ ಜ್ಞಾನ ಒಳಗೊಂಡಿವೆ. ಆದುದರಿಂದ ಅವರು ಈ ಉತ್ತರ ನೀಡಲು ಸಾಧ್ಯತೆ ಇತ್ತು. ನಾವು ಸಾಕ್ಷ್ಯಗಳ ಜ್ಞಾನದಿಂದ ತಿಳಿಯದವರಾಗಿದ್ದೇವೆ. ಕೇವಲ ಅರಬಿ ಸಾಹಿತ್ಯದಲ್ಲಿ ಕವನವಿರುತ್ತಿದ್ದರೆ, ಇತರ ಸಾಮಾನ್ಯ ಖಸೀದದಂತೆ ಇರುತ್ತಿದ್ದರೆ ನಿಸ್ಸಂಶಯವಾಗಿ ಅವರ ಪ್ರತಿರೂಪ ಬರೆಯಬಹುದಾಗಿತ್ತು. ಮತ್ತು ಹೀಗೂ ನನ್ನ ಮನಸ್ಸಿಗೆ ಬಂತು. ಮೌಲವಿ ಸನಾವುಲ್ಲಾ ಸಾಹೇಬ ಅವರಿಂದ ಕೇವಲ ಈಜಾಝುಲ್ ಮಸೀಹ್ ಗ್ರಂಥದ ಪ್ರತಿರೂಪ ಬಯಸಿದರೆ ಅವರು ಅವಶ್ಯಕವಾಗಿ ಹೇಳುವರು. ನೀವು 70 ದಿನಗಳ ಒಳಗೆ ಈ ಗ್ರಂಥ ರಚಿಸಿದ್ದೀರಿ ಎಂದು ಹೇಗೆ ನಂಬುವುದು? ಅವರು ಈ ರೀತಿಯ ನೆಪ ಮುಂದು ಮಾಡಿದರೆ ಈ ಗ್ರಂಥ 2 ವರ್ಷಗಳಲ್ಲಿ ಬರೆಯಲಾಗಿದೆ. ನಮಗೂ ಸಹ 2 ವರ್ಷಗಳ ಅವಕಾಶ ಕೊಡಿ ಅಂದರೆ

*(ಪುಟ 11 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಯಾವುದೇ ಸೇನಾಧಿಪತಿಯು ತನ್ನ ದೃಢವಿಶ್ವಾಸ, ಏಕಾಗ್ರತೆ, ವಿಧೇಯತೆ ಮತ್ತು ನಿಷ್ಠೆಯನ್ನು ದೇಶವನ್ನಾಳುವ ದೊರೆಯ ವೈಯಕ್ತಿಕ ಉತ್ತಮ ಗುಣಗಳು ಮತ್ತು ಉನ್ನತ ಶ್ರೇಣಿಯ ಕಾರ್ಯ ನಿರ್ವಾಹಕ ಶಕ್ತಿಗಳಿಂದ ಪ್ರಭಾವಿತನಾಗಿಯಲ್ಲದೆ ಪ್ರಕಟಿಸಲಾರ.**

**ರಸೂಲುಲ್ಲಾಹ್[ಸ] ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರ್‌.ರತ್ ಅಬೂಬಕರ್ ಸಿದ್ದೀಖ್[ರ]ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಬ್ರಿಟನ್‌ನ ಜಲ್ಸ ಸಾಲಾನದಲ್ಲಿ ಭಾಗವಹಿಸುತ್ತಿರುವ ಅತಿಥಿಗಳಿಗೆ ಹಾಗೂ ಜಲ್ಸದಲ್ಲಿ ಡ್ಯೂಟಿಗಳನ್ನು ನೀಡುತ್ತಿರುವವರಿಗೆ ದುಆವಿನ ಕೋರಿಕೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **29–07–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَ رَسُوْلُهٗ

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ - بِسْمِ اللهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَ اِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರ್‌ರತ್ ಅಬೂಬಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹುರವರ ಕಾಲದಲ್ಲಿ ನಡೆದ ಯುದ್ಧಗಳ ಬಗ್ಗೆ ವಿವರಣೆ ನೀಡಲಾಗುತ್ತಿತ್ತು. ಇಂದು ನಾನು ಹಝ್ರ್‌ರತ್ ಖಾಲಿದ್ ಬಿನ್ ವಲೀದ್(ರ) ಅವರ ನೇತೃತ್ವದಲ್ಲಿ ನಡೆದ ಉಳಿದ ಯುದ್ಧಗಳನ್ನು ಉಲ್ಲೇಖಿಸುತ್ತೇನೆ. ಯುದ್ಧಗಳ ಕುರಿತಾದ ಈ ಲೇಖನವು ಇಂದು ಮುಗಿಯಲು ಸ್ವಲ್ಪ ದೀರ್ಘವಾಗಬಹುದು.

ಹಿರಾ ಯುದ್ಧವು ರಬಿ ಅಲ್–ಅವ್ವಲ್ ಹಿಜ್ರಿ 12 ರ ಆರಂಭದಲ್ಲಿ ನಡೆಯಿತು, ಹಝ್ರ್‌ರತ್ ಖಾಲಿದ್ ಅಮ್ಘಿಶಿಯಾದಿಂದ ಹೀರಾ ಕಡೆಗೆ ಸಾಗಿದರು. (ಸೈಯದುನಾ ಸಿದ್ದಿಕ್ ಅಕ್ಬರ್(ರ), ಉಮರ್ ಅಬುನ್ನಸರ್ ಅವರಿಂದ, ಪುಟ–672, ಉರ್ದು ಅನುವಾದ ಮುಷ್ತಾಕ್ ಬುಕ್ ಕಾರ್ನರ್ ಉರ್ದು ಬಜಾರ್ ಲಾಹೋರ್ 2020)

ಹಝ್ರ್‌ರತ್ ಖಾಲಿದ್ ಅಮ್ಘಿಶಿಯಾದಿಂದ ಯೂಫ್ರಟಿಸ್ ನದಿಯ ಬಳಿಯ ಹೀರಾಗೆ ಸಾಗಿದರು. ಹೀರಾ ಪುರಾತನ ಅರಬ್‌ನ ಕಿರಿಶ್ಚಿಯನ್ನರ ಕೇಂದ್ರವಾಗಿತ್ತು ಮತ್ತು ಆ ಸಮಯದಲ್ಲಿ ಹೀರಾದ ಆಡಳಿತಗಾರ ಓರ್ವ ಇರಾನಿಯನ್ ಆಗಿದ್ದನು. ಹಝ್ರ್‌ರತ್ ಖಾಲಿದ್‌ರ ಸೈನಿಕರು ಈಗ ಅವನ ಕಡೆಗೆ ತಿರುಗುತ್ತವೆ ಎಂದು ಹೀರಾನ ಆಡಳಿತಗಾರನಿಗೆ ತಿಳಿದಿತ್ತು, ಆದ್ದರಿಂದ ಅವನು ಹಝ್ರ್‌ರತ್ ಖಾಲಿದ್(ರ) ಅವರೊಂದಿಗೆ ಯುದ್ಧಕ್ಕೆ ಸಿದ್ಧತೆಗಳನ್ನು ಪ್ರಾರಂಭಿಸಿದನು ಮತ್ತು ಹಝ್ರ್‌ರತ್ ಖಾಲಿದ್ ಇಲ್ಲಿಗೆ ಬರಲು ನದಿಯ ಮಾರ್ಗವನ್ನು ತೆಗೆದುಕೊಳ್ಳುತ್ತಾರೆ ಮತ್ತು ಅವರು ದೋಣಿಯಲ್ಲಿ ಬರುತ್ತಾರೆ ಎಂದು ಭವಿಷ್ಯ ನುಡಿದನು. ಖಾಲಿದ್‌ರ ದೋಣಿಗಳು ಮುಳುಗಿಹೋಗುವಂತೆ ಯೂಫ್ರಟಿಸ್‌ನ ನೀರನ್ನು ತಡೆಹಿಡಿಯುವಂತೆ ಅವನು ತನ್ನ ಮಗನಿಗೆ ಆಜ್ಞಾಪಿಸಿದನು ಮತ್ತು ಅವನೇ ಹೀರಾ ಹೊರಗೆ ತನ್ನ ಸೈನ್ಯವನ್ನು ಹಿಂಬಾಲಿಸಿದನು. ಹಝ್ರ್‌ರತ್ ಖಾಲಿದ್(ರ) ರವರು ಅಮ್ಘಿಶಿಯಾದಿಂದ ಹೊರಟು, ಸರಕು ಮತ್ತು ಯುದ್ಧದ ಸಂಪತ್ತಿನೊಂದಿಗೆ ಸೈನ್ಯವನ್ನು ದೋಣಿಗಳಲ್ಲಿ ತೆಗೆದುಕೊಂಡು ಹೋದಾಗ, ಹಝ್ರ್‌ರತ್ ಖಾಲಿದ್(ರ) ರವರಿಗೆ ಸಾಕಷ್ಟು ತೊಂದರೆಯಾಯಿತು ಏಕೆಂದರೆ ದೋಣಿಗಳು ನೀರಿನ ಕೊರತೆಯಿಂದ ಮುಳುಗಿದವು. ಪರ್ಷಿಯನ್ನರು ಯೂಫ್ರೆಟಿಸ್ ನದಿಯ ನೀರನ್ನು ಈ ಭಾಗಕ್ಕೆ ಬರದಂತೆ ತಡೆದು ಕಾಲುವೆಗಳನ್ನು ತೆರೆದಿದ್ದಾರೆ ಎಂದು ನಾವಿಕರು ಹೇಳಿದರು. ಎಲ್ಲ ನೀರು ಬೇರೆ ನಾಲೆಗಳಿಗೆ ಹರಿಯುತ್ತಿದೆ. ಕಾಲುವೆಗಳನ್ನು ಮುಚ್ಚುವವರೆಗೂ ನೀರು ಸಿಗುವುದಿಲ್ಲ. ತದನಂತರ ಹಝ್ರ್‌ರತ್ ಖಾಲಿದ್(ರ) ತಕ್ಷಣವೇ ಕುದುರೆ ಸವಾರರ ಸೈನ್ಯವನ್ನು ತೆಗೆದುಕೊಂಡು ಆಡಳಿತಗಾರನ ಮಗನ ಕಡೆಗೆ ಮುನ್ನಡೆದರು. ದಾರಿಯಲ್ಲಿ, ಹಝ್ರ್‌ರತ್ ಖಾಲಿದ್(ರ) ಅವರು ಅತೀಕ್ ನದಿಯ ದಡದಲ್ಲಿ ಸೈನ್ಯದ ಒಂದು ಭಾಗದ ಮೇಲೆ ದಾಳಿ ಮಾಡಿದರು. ಹಝ್ರ್‌ರತ್ ಖಾಲಿದ್(ರ) ಅವರು ಸಂಪೂರ್ಣ ಅರಿವಿಲ್ಲದಿದ್ದಾಗ ಏಕಾಏಕಿ ದಾಳಿ ಮಾಡಿದರು. ಹಝ್ರ್‌ರತ್ ಖಾಲಿದ್(ರ) ಅವರೆಲ್ಲರನ್ನೂ ನಿರ್ಮೂಲನೆ ಮಾಡಿದರು. ನಂತರ ಅವರು ಮುಂದೆ ಹೋಗಿ ನೋಡಿದಾಗ ಹಾಕಿಮ್ ಹೀರಾನ ಮಗ ನದಿಯನ್ನು ತಿರುಗಿಸುವ ಕೆಲಸವನ್ನು ಮೇಲ್ವಿಚಾರಣೆ ಮಾಡುತ್ತಿದ್ದನು. ಅವರು ಇದ್ದಕ್ಕಿದ್ದಂತೆ ಅವನ ಮೇಲೆ ದಾಳಿ ಮಾಡಿದರು, ಅವನನ್ನು ಮತ್ತು ಅವನ ಸೈನ್ಯವನ್ನು ಕೊಂದು, ಅಣೆಕಟ್ಟನ್ನು ಒಡೆದು ನದಿಯಲ್ಲಿ ನೀರನ್ನು ಮತ್ತೆ ಹರಿಯುವಂತೆ ಮಾಡಿದರು ಮತ್ತು ನಂತರ ಅಲ್ಲಿಯೇ ನಿಂತು ದೋಣಿಗಳು ಮತ್ತೆ ಪ್ರಾರಂಭವಾಗುವವರೆಗೆ ಕೆಲಸವನ್ನು ವೀಕ್ಷಿಸಿದರು.

ತದನಂತರ, ಹಝ್ರ್‌ರತ್ ಖಾಲಿದ್(ರ) ತನ್ನ ಎಲ್ಲಾ ಮುಖ್ಯಸ್ಥರನ್ನು ಒಟ್ಟುಗೂಡಿಸಿ ಖುರ್ನಾಕ್ ಎಂಬ ಸ್ಥಳಕ್ಕೆ ತಲುಪಿದರು. ಖುರ್ನಾಕ್ ಹೀರಾ ಬಳಿ ಒಂದು ಕೋಟೆ ಇತ್ತು, ಆದರೆ ಹಾಕಿಮ್‌ಗೆ ಅರ್ದಶಿರ್ ಸತ್ತಿದ್ದಾನೆ ಮತ್ತು ಅವನ ಸ್ವಂತ ಮಗ ಸಹ ಯುದ್ಧದಲ್ಲಿ ಕೊಲ್ಲಲ್ಪಟ್ಟಿದ್ದಾನೆ ಎಂದು ತಿಳಿದಾಗ, ಅವನು ಯೂಫ್ರಟಿಸ್ ನದಿಯನ್ನು ದಾಟಿ ಯುದ್ಧವಿಲ್ಲದೆ ಓಡಿಹೋದನು ಹಾಕಿಮ್ ಓಡಿ ಹೋದರು ಸಹ ಹೀರಾದವರು ಎದೆಗುಂದಲಿಲ್ಲ ಅವರು ಕೋಟೆಯಲ್ಲಿ ಬಚ್ಚಿಕೊಂಡರು. ಇಲ್ಲಿ ನಾಲ್ಕು ಕೋಟೆಗಳಿದ್ದು ನಾಲ್ಕು ಕೋಟೆಗಳಲ್ಲಿ ಸುತ್ತುವರೆದು ಯುದ್ಧಕ್ಕೆ ಸಿದ್ಧರಾಗತೊಡಗಿದರು.

ಹಝ್ರ್‌ರತ್ ಖಾಲಿದ್ ಬಿನ್ ವಲೀದ್(ರ) ಈ ಕೆಳಗಿನ ರೀತಿಯಲ್ಲಿ ಕೋಟೆಗಳನ್ನು ಮುತ್ತಿಗೆ ಹಾಕಿದರು ಎಂದು ಬರೆಯಲಾಗಿದೆ. ಝರಾರ್ ಬಿನ್ ಅಝೂರ್ ಅವರನ್ನು ಕಸ್ರ್ ಅಬೈದ್ ಮುತ್ತಿಗೆಗೆ ನೇಮಿಸಲಾಯಿತು. ಅಯಾಸ್ ಬಿನ್ ಕುಬೇಸಾ ತೈ ಅದರಲ್ಲಿ ನಿರಾಶ್ರಿತರಾಗಿದ್ದರು. ಝರಾರ್ ಬಿನ್ ಖತ್ತಾಬ್ ಅವರನ್ನು ಕಸ್ರ್ ಅದ್‌ಸೈಯೀನ್ ಮುತ್ತಿಗೆಗೆ ನೇಮಿಸಲಾಯಿತು. ಅದರಲ್ಲಿ ಆದಿ ಬಿನ್ ಆದಿ ಎಂಬಾತ ನಿರಾಶ್ರಿತನಾಗಿದ್ದ. ಝರಾರ್ ಬಿನ್ ಮುಖ್ರಿನ್ ಅವರನ್ನು ಕಸ್ರ್ ಬನಿ ಮಜಿನ್ ಅನ್ನು ಮುತ್ತಿಗೆ ಹಾಕಲು ನೇಮಿಸಲಾಯಿತು, ಇದರಲ್ಲಿ ಇಬ್ನ್ ಅಕಾಲ್ ನಿರಾಶ್ರಿತರಾಗಿದ್ದರು. ಅಮ್ರ್ ಬಿನ್ ಅಬ್ದುಲ್ ಮಸಿಹ್ ನಿರಾಶ್ರಿತರಾಗಿದ್ದ ಕಸ್ರ್ ಬಿನ್ ಬುಕೈಲಾ ಮುತ್ತಿಗೆಗೆ ಮುಸನ್ನ ಬಿನ್ ಹರಿಸಾ ಅವರನ್ನು ನೇಮಿಸಲಾಯಿತು.

ಹಝ್ರ್‌ರತ್ ಖಾಲಿದ್(ರ) ಅವರು ತಮ್ಮ ಅಮೀರ್‌ಗಳಿಗೆ ಈ ಜನರನ್ನು ಮೊದಲು ಇಸ್ಲಾಮಿಗೆ ಆಹ್ವಾನಿಸಬೇಕೆಂದು ಆದೇಶ ಹೊರಡಿಸಿದರು. ಅವರು ಇಸ್ಲಾಂ ಅನ್ನು ಸ್ವೀಕರಿಸಿದರೆ ಅವರ ಇಸ್ಲಾಂ ಅನ್ನು ಸ್ವೀಕರಿಸಿ ಮತ್ತು ಅವರು ನಿರಾಕರಿಸಿದರೆ ಅವರಿಗೆ ಒಂದು ದಿನದ ಬಿಡುವು ನೀಡಿ ಮತ್ತು ಶತ್ರುಗಳಿಗೆ ಅವಕಾಶ ನೀಡಬೇಡಿ ಅವರೊಂದಿಗೆ ಹೋರಡಲು ಆದೇಶಿಸಿದರು ಮತ್ತು ಮುಸ್ಲಿಮರು ಶತ್ರುಗಳ ವಿರುದ್ಧ ಹೋರಾಡುವುದನ್ನು ತಡೆಯಬೇಡಿ.

ಶತ್ರುಗಳು ಘರ್ಷಣೆಗೆ ಮುಂದಾದರು ಮತ್ತು ಮುಸ್ಲಿಮರ ಮೇಲೆ ಕಲ್ಲು ತೂರಾಟ ಆರಂಭಿಸಿದರು. ಮುಸ್ಲಿಮರು ಅವರ ಮೇಲೆ ಬಾಣಗಳ ಸುರಿಮಳೆಗೈದರು ಮತ್ತು ಅವರ ಮೇಲೆ ಮುರಿದುಬಿದ್ದರು ಮತ್ತು ಅರಮನೆಗಳು ಮತ್ತು ಕೋಟೆಗಳನ್ನು ಸ್ವಾಧೀನಪಡಿಸಿಕೊಂಡರು. ಅಲ್ಲಿ ನೆರೆದಿದ್ದ ಪಾದರಿಗಳು ಹೀಗೆ ಕೂಗಿದರು ಓ ಅರಮನೆಯಲ್ಲಿರುವವರೇ! ನಿಮ್ಮನ್ನು ಬಿಟ್ಟು ನಮ್ಮನ್ನು ಯಾರನ್ನೂ ಕೊಲ್ಲಬಾರದು. ಅವರನ್ನು ಹುರಿದುಂಬಿಸಲು ಪ್ರಯತ್ನಿಸಿದರು. ಅರಮನೆಯ ಜನ ಹೇಳಿದರು: ಓ ಅರಬರೇ! ನಿಮ್ಮ ಮೂರು ಷರತ್ತುಗಳಲ್ಲಿ ಒಂದನ್ನು ನಾವು ಒಪ್ಪಿಕೊಂಡಿದ್ದೇವೆ, ಆದ್ದರಿಂದ ನೀವು ನಿಂತುಬಿಡಿ. ಅಲ್ಲಿ ಅರಬ್ ಮುಸ್ಲಿಮರು ನೆಲೆಸುತ್ತಿರುವುದನ್ನು ನೋಡಿದಾಗ, ಅವರು ಷರತ್ತುಗಳ ಮೇಲೆ ಕೋಟೆಗಳನ್ನು ತೆರೆಯುವ ಆಲೋಚನೆಯನ್ನು ವ್ಯಕ್ತಪಡಿಸಿದರು. ಈ ಅರಮನೆಗಳ ಮುಖ್ಯಸ್ಥರು ಹೊರಗೆ ಬಂದರು. ನಂತರ ಹಝ್ರ್‌ರತ್ ಖಾಲಿದ್(ರ) ಈ ಅರಮನೆಯ ಜನರನ್ನು ಪ್ರತ್ಯೇಕವಾಗಿ ಭೇಟಿಯಾಗಿ ಈ ಕೃತ್ಯಕ್ಕಾಗಿ ನಿಂದಿಸಿದರು. (ಸಯ್ಯಿದ್ನಾ ಅಬು ಬಕರ್ ಸಾದಿಕ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಅಲಿ ಮುಹಮ್ಮದ್ ಸಲಬಿ, ಉರ್ದು ಭಾಷಾಂತರಕಾರ, ಪುಟ–410, ಫುರ್ಕಾನ್ ಟ್ರಸ್ಟ್, ಮುಝಫರ್ಗಢ) (ಹಝ್ರ್‌ರತ್ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದಕ, ಪುಟ–315, ಇಸ್ಲಾಮಿ ಕುತುಬ್ ಖಾನ ಲಾಹೋರ್) (ತಾರೀಖ್ ಅತ್ತಬರಿ, ಸಂಪುಟ–2, ಪುಟ–315, ದಾರುಲ್ ಕುತುಬ್ ಇಲ್‌ಮಿಯ ಬೈರೂಥ್) (ಮುಜಮ್ ಅಲ್–ಬುಲ್ದಾನ್, ಸಂಪುಟ–2, ಪುಟ–459)

ಮತ್ತು ಅವರನ್ನು ಖಂಡಿಸುತ್ತಾ ಹೇಳಿದರು: "ನಿಮ್ಮ ಮೇಲೆ ವಿಷಾಧವಿದೆ!

ನಮ್ಮನ್ನು ಎದುರಿಸಲು ನೀವು ನಿಮ್ಮ ಬಗ್ಗೆ ಏನು ಯೋಚಿಸುತ್ತೀರಿ! ನೀವು ಅರಬ್ ಆಗಿದ್ದರೆ ಆದರೂ ನೀವು ನಿಮ್ಮ ಸ್ವಂತ ರಾಷ್ಟ್ರದವರ ವಿರುದ್ಧ ಏಕೆ ಹೋರಾಡಲು ಸಿದ್ಧರಾದಿರಿ ಮತ್ತು ನೀವು ಅಜಮಿಯಾಗಿದ್ದರೆ, ನ್ಯಾಯದಲ್ಲಿ ಯಾವುದೇ ಪೂರ್ವನಿದರ್ಶನವಿಲ್ಲದ ರಾಷ್ಟದ ವಿರುದ್ಧ ನೀವು ಗೆಲ್ಲುತ್ತೀರಿ ಎಂದು ನೀವು ಭಾವಿಸುತ್ತೀರಾ? ! ಮುಖ್ಯಸ್ಥರು ಜಿಝ್ಯವನ್ನು ಪಾವತಿಸಲು ಒಪ್ಪಿಕೊಂಡರು. ಹಝ್ರತ್ ಖಾಲಿದ್(ರ)ರವರಿಗೆ ಈ ಇರಾಕಿ ಅರಬ್ಬರು ಖಂಡಿತವಾಗಿಯೂ ಇಸ್ಲಾಂ ಧರ್ಮವನ್ನು ಸ್ವೀಕರಿಸುತ್ತಾರೆ ಎಂದು ಆಶಿಸಿದ್ದರು, ಆದರೆ ಅವರು ಕ್ರಿಶ್ಚಿಯನ್ನರಾಗಿಯೇ ಉಳಿಯುತ್ತಾರೆ ಎಂದು ಒತ್ತಾಯಿಸಿದಾಗ ಅವರಿಗೆ ಬಹಳ ಆಶ್ಚರ್ಯವಾಯಿತು. ಆದಾಗ್ಯೂ, ಹಝ್ರತ್ ಖಾಲಿದ್(ರ)ರವರು ಹೀರಾ ಮತ್ತು ಮುಸ್ಲಿಮರ ನಡುವಿನ ಒಪ್ಪಂದವನ್ನು ಬರೆದರು, ಅದು ಹೀಗಿತ್ತು.

ಬಿಸ್ಮಿಲ್ಲಾಹ್ ಹಿರ್ ರೆಹಮಾನ್ ನಿರ್ ರಹೀಂ. ಇದು ಖಲೀದ್ ಬಿನ್ ವಲೀದ್ ಅವರು ಆದಿ ಬಿನ್ ಆದಿ, ಅಮ್ರ್ ಬಿನ್ ಆದಿ, ಅಮ್ರ್ ಬಿನ್ ಅಬ್ದ್ ಅಲ್-ಮಸೀಹ್, ಇಯಾಸ್ ಬಿನ್ ಕಬೈಸಾ ಮತ್ತು ಖೈರಿ ಬಿನ್ ಅಕ್ಕಾಲ್ ಅವರೊಂದಿಗೆ ಮಾಡಿಕೊಂಡ ಒಪ್ಪಂದವಾಗಿದೆ. ಇವರು ಹೀರಾ ಜನರ ಮುಖ್ಯಸ್ಥರು, ಮತ್ತು ಹೀರಾ ಜನರು ಈ ಒಪ್ಪಂದವನ್ನು ಒಪ್ಪುತ್ತಾರೆ ಮತ್ತು ಅವರು ಹಾಗೆ ಮಾಡಲು ಆದೇಶಿಸಿದರು ಮತ್ತು ಅವರೊಂದಿಗೆ ಒಂದು ಲಕ್ಷ ತೊಂಬತ್ತು ಸಾವಿರ ದಿರ್ಹಮ್‌ಗಳಿಗೆ ಒಪ್ಪಂದ ಮಾಡಿಕೊಂಡರು. ಅದನ್ನು ಅವರಿಂದ ಪ್ರತಿ ವರ್ಷ ಅವರ ರಕ್ಷಣೆಗಾಗಿ ಸಂಗ್ರಹಿಸಲಾಗುವುದು.

ಬೇರೆ ರೀತಿಯಲ್ಲಿ ಹೇಳುವುದಾದರೆ, ಸ್ಥಳೀಯ ಜನರ ರಕ್ಷಣೆಗಾಗಿ ಈ ಜಿಝ್ಯವನ್ನು ವಿಧಿಸಲಾಯಿತು, ಅವರ ಬಳಿ ಇರುವ ಲೌಕಿಕ ಆಸ್ತಿಗಳು ಸಂಪತ್ತಿನ ಮೇಲಿದೆ, ಅವರು ಯಾರೇ ಆಗಿರಲಿ ಸನ್ಯಾಸಿಗಳಾಗಲಿ ಅಥವಾ ಪಾದರಿಗಳಾಗಲಿ, ಆದರೆ ಏನೂ ಇಲ್ಲದವರು ಪ್ರಪಂಚದಿಂದ ಬೇರ್ಪಟ್ಟಿದ್ದವರು, ಅದನ್ನು ತೊರೆದವರು, ಈ ಒಪ್ಪಂದವು ಅವರ ರಕ್ಷಣೆಯ ಷರತ್ತಿನಲ್ಲಿದೆ. ಮತ್ತು ಅವರು ತಮ್ಮ ಭದ್ರತೆಯನ್ನು ನಿರ್ವಹಿಸಲು ಸಾಧ್ಯವಾಗದಿದ್ದರೆ, ಅವರು ಅಂದರೆ ಆಡಳಿತಗಾರ ಅವರ ಭದ್ರತೆಯನ್ನು ನಿರ್ವಹಿಸುವವರೆಗೆ ಅವರ ಮೇಲೆ ಯಾವುದೇ ಜಿಝ್ಯ ಇರುವುದಿಲ್ಲ. ಅವರು ತಮ್ಮ ಯಾವುದೇ ಕಾರ್ಯ ಅಥವಾ ಪದದಿಂದ ದೇಶದ್ರೋಹವನ್ನು ಮಾಡಿದರೆ ಈ ಒಪ್ಪಂದವನ್ನು ಕೊನೆಗೊಳಿಸಲಾಗುತ್ತದೆ. ಈ ಒಪ್ಪಂದವನ್ನು ರಬಿ ಅಲ್-ಅವ್ವಲ್ ಹನ್ನೆರಡು ಹಿಜ್ರಿಯಲ್ಲಿ ಬರೆಯಲಾಗಿದೆ.

ಈ ಪತ್ರವನ್ನು ಹೀರಾದ ನಿವಾಸಿಗಳಿಗೆ ಹಸ್ತಾಂತರಿಸಲಾಯಿತು ಮತ್ತು ಹಝ್ರತ್ ಅಬೂಬಕರ್(ರ) ಅವರ ಮರಣದ ನಂತರ ಸವಾದ್‌ನ ಜನರು ಧರ್ಮಭ್ರಷ್ಟರಾದಾಗ, ಅವರು ಈ ಒಪ್ಪಂದವನ್ನು ಅಗೌರವಿಸಿದರು ಮತ್ತು ಈ ಒಪ್ಪಂದವನ್ನು ಅನುಸರಿಸಲಿಲ್ಲ ಮತ್ತು ಅವರು ಇತರ ಜನರೊಂದಿಗೆ ಅಪನಂಬಿಕೆ ಮಾಡಿದರು ಮತ್ತು ಜನರ ಮೇಲೆ ಪರ್ಷಿಯನ್ನರ ಪ್ರಾಬಲ್ಯವಾಯಿತು. ಹಝ್ರತ್ ಉಮರ್(ರ) ರವರ ಖಿಲಾಫತ್ ಕಾಲದಲ್ಲಿ ಹಝ್ರತ್ ಮುಸನ್ನಾ ರವರು ಹೀರಾವನ್ನು ಸ್ವಾಧೀನಪಡಿಸಿಕೊಂಡಾಗ, ಈ ಜನರು ಅದೇ ಒಪ್ಪಂದವನ್ನು ಮಂಡಿಸಿದರು, ಆದರೆ ಹಝ್ರತ್ ಮುಸನ್ನಾ ರವರು ಅದನ್ನು ಒಪ್ಪದೆ ಅವರಿಗೆ ಮತ್ತೊಂದು ಷರತ್ತು ವಿಧಿಸಿದರು. ನಂತರ ಹಝ್ರತ್ ಮುಸನ್ನರವರು ಕೆಲವು ಸ್ಥಳಗಳಲ್ಲಿ ಸೋತಾಗ. ಅವರು ಯುದ್ಧಗಳ ಸಮಯದಲ್ಲಿ ಕೆಲವರು ಹಿಮ್ಮೆಟ್ಟಬೇಕಾಯಿತು, ಆಗ ಈ ಜನರು ಅಪನಂಬಿಕೆಯಿಂದ ಜನರೊಂದಿಗೆ ಸೇರಿಕೊಂಡರು. ಬಂಡುಕೋರರಿಗೆ ನೆರವು ನೀಡಿ ಒಪ್ಪಂದವನ್ನು ಉಲ್ಲಂಘಿಸಿ ಒಪ್ಪಂದವನ್ನು ಅನುಸರಿಸಲಿಲ್ಲ. ತದನಂತರ ಹಝ್ರತ್ ಸಅದ್(ರ) ಹೀರಾವನ್ನು ಸ್ವಾಧೀನಪಡಿಸಿಕೊಂಡಾಗ, ಆ ಜನರು ಹಿಂದಿನ ಒಪ್ಪಂದವನ್ನು ಇತ್ಯರ್ಥಗೊಳಿಸಲು ಬಯಸಿದ್ದರು, ಆಗ ಹಝ್ರತ್ ಸಅದ್(ರ) ಅವರು ಎರಡು ಒಪ್ಪಂದಗಳಲ್ಲಿ ಒಂದನ್ನು ನೀಡಲು ಹೇಳಿದರು, ಆದರೆ ಆ ಜನರು ನೀಡಲು ಸಾಧ್ಯವಾಗಲಿಲ್ಲ. ಇದರ ನಂತರ, ಹಝ್ರತ್ ಸಅದ್ ಅವರ ಮೇಲೆ ತೆರಿಗೆ ನೀಡಲು ಆದೇಶಿಸಿ ಅವರ ಆರ್ಥಿಕ ಸಾಮರ್ಥ್ಯವನ್ನು ತನಿಖೆ ಮಾಡಿದ ನಂತರ ಮುತ್ತುಗಳ ಹೊರತಾಗಿ ನಾಲ್ಕು ಲಕ್ಷದ ತೆರಿಗೆಯನ್ನು ವಿಧಿಸಿದರು.

ಹೀರಾವನ್ನು ವಶಪಡಿಸಿಕೊಂಡಾಗ, ಹಝ್ರತ್ ಖಾಲಿದ್(ರ) ವಿಜಯದ ನಮಾಝುನ್ನು ನಿರ್ವಹಿಸಿದರು ಅದರಲ್ಲಿ ಅವರು ಒಂದು ಸಲಾಂನೊಂದಿಗೆ ಎಂಟು ರಕಅತ್‌ಗಳನ್ನು ಮಾಡಿದರು. ಅಂದರೆ ಎಂಟು ರಕಅತ್‌ಗಳನ್ನು ಒಟ್ಟಿಗೆ ನಿರ್ವಹಿಸಿದರು. ಅದನ್ನು ಮುಗಿಸಿ ಬಂದು ಹೀಗೆ ಹೇಳಿದರು: "ನಾನು ಮೌತಾ ಯುದ್ಧದಲ್ಲಿ ಹೋರಾಡಿದಾಗ, ಆ ಸಮಯದಲ್ಲಿ ನನ್ನ ಕೈಯಲ್ಲಿ ಒಂಬತ್ತು ಖಡ್ಗಗಳು ಮುರಿದವು. ನಾನು ಪರ್ಷಿಯಾದ ಜನರ ನಡುವೆ ಇರುವ ಜನರೊಂದಿಗೆ ಹೋರಾಡಿದಂತೆ ನಾನು ಯಾವುದೇ ರಾಷ್ಟದೊಂದಿಗೆ ಹೋರಾಡಿಲ್ಲ ಮತ್ತು ನಾನು ಉಲೈಸ್ ಜನರೊಂದಿಗೆ ಹೋರಾಡಿದಂತೆ ಪರ್ಷಿಯಾದ ಯಾವುದೇ ಜನರೊಂದಿಗೆ ಹೋರಾಡಿಲ್ಲ. (ತಾರಿಖ್ ಅಲ್-ತಬರಿ, ಸಂಪುಟ-2, ಪುಟಗಳು 316 ರಿಂದ 319, ದಾರುಲ್ ಕಿತಾಬ್ ಅಲ್-ಇಲ್ಮಿಯಾ ಬೈರೂತ್)

ನಂತರ ಈ ಜನರು ಹಝ್ರತ್ ಖಾಲಿದ್(ರ) ಅವರ ಸೇವೆಗೆ ಉಡುಗೊರೆಗಳನ್ನು ಕಳುಹಿಸಿದ್ದಾರೆಂದು ಬರೆಯಲಾಗಿದೆ, ಆದರೆ ಹಝ್ರತ್ ಖಾಲಿದ್(ರ) ಆ ಉಡುಗೊರೆಗಳನ್ನು ಹಝ್ರತ್ ಅಬುಬಕರ್(ರ) ಅವರ ಸೇವೆಗೆ ವಿಜಯದ ಶುಭ ಸುದ್ದಿಯೊಂದಿಗೆ ಕಳುಹಿಸಿದರು. ಹಝ್ರತ್ ಅಬುಬಕರ್(ರ) ಅವರು ನ್ಯಾಯದ ಉನ್ನತ ಗುಣಮಟ್ಟವನ್ನು ಕಲಿಸಿದರು ಮತ್ತು ಈ ಎಲ್ಲಾ ಉಡುಗೊರೆಗಳನ್ನು ಜಿಝ್ಯ ಎಂದು ಸ್ವೀಕರಿಸಿದರು ಮತ್ತು ಹಝ್ರತ್ ಖಾಲಿದ್(ರ) ಅವರಿಗೆ ಈ ಉಡುಗೊರೆಗಳನ್ನು ಜಿಝ್ಯದಲ್ಲಿ ಸೇರಿಸಿದರೆ ಉತ್ತಮ, ಇಲ್ಲದಿದ್ದರೆ ನೀವು ಅವುಗಳನ್ನು ಜಿಝ್ಯದಲ್ಲಿ ಸೇರಿಸಿ ಉಳಿದ ಜಿಝ್ಯದ ಮೊತ್ತವನ್ನು ಅವರಿಂದ ಪಡೆಯಿರಿ ಎಂದು ಬರೆದರು. ಅಂದರೆ ಅವರು ಈ ವಸ್ತುಗಳನ್ನು ಉಡುಗೊರೆಯಾಗಿ ಸ್ವೀಕರಿಸಲಿಲ್ಲ, ಆದರೆ ಅದನ್ನು ಜಿಝ್ಯ ಎಂದು ಮಾಡಿದರು. ಮುಸ್ಲಿಮರು ಹೀರಾದ ಸ್ಥಳೀಯರೊಂದಿಗೆ ಬಹಳ ಮುಕ್ತವಾಗಿ ವ್ಯವಹರಿಸಿದರು. ಈ ನಡವಳಿಕೆಯನ್ನು ನೋಡಿದ ನೆರೆಹೊರೆಯ ಜಮೀನ್ದಾರರು ಮತ್ತು ಗಣ್ಯರು ಸಹ ಜಿಝ್ಯ ಪಾವತಿಸಲು ಒಪ್ಪಿಕೊಂಡರು ಮತ್ತು ಮುಸ್ಲಿಮರ ಅಧೀನತೆಯನ್ನು ಒಪ್ಪಿಕೊಂಡರು. (ಹಝ್ರತ್ ಅಬುಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೇನ್ ಹೈಕಲ್ ಅನುವಾದಕ, ಪುಟ 318-319, ಇಸ್ಲಾಮಿಕ್ ಲೈಬ್ರರಿ ಲಾಹೋರ್)

ಹೀರಾದಲ್ಲಿನ ಜಯ ಯುದ್ಧಗಳಿಗೆ ಸಂಬಂಧಿಸಿ ಬೃಹತ್ತಾದ ಮಹತ್ವವನ್ನು ಹೊಂದಿರುವುದಾಗಿ ಸಾಬೀತಾಯಿತು.

ಇದು ಮುಸ್ಲಿಮರ ದೃಷ್ಟಿಯಲ್ಲಿ ಪರ್ಷಿಯಾವನ್ನು ಸ್ವಾಧೀನಪಡಿಸಿಕೊಳ್ಳುವ ಭರವಸೆಯನ್ನು ಹೆಚ್ಚಿಸಿತು ಏಕೆಂದರೆ ಇರಾಕ್ ಮತ್ತು ಪರ್ಷಿಯನ್ ಸಾಮ್ರಾಜ್ಯಕ್ಕೆ ಹೆಚ್ಚಿನ ಭೌಗೋಳಿಕ ಮತ್ತು ಸಾಹಿತ್ಯಿಕ ಪ್ರಾಮುಖ್ಯತೆಯನ್ನು ಹೊಂದಿತ್ತು. ಈ ನಗರವನ್ನು ಇಸ್ಲಾಮೀ ಸೈನ್ಯದ ಮಹಾದಂಡನಾಯಕ ತನ್ನ ಕೇಂದ್ರವನ್ನಾಗಿಯೂ ರಾಜಧಾನಿಯನ್ನಾಗಿಯೂ ಮಾಡಿದರು. ಅಲ್ಲಿಂದಲೇ ಇಸ್ಲಾಮೀ ಸೈನ್ಯದ ಜಮಾವಣೆ, ಪ್ರತಿರೋಧ, ಸುವ್ಯವಸ್ಥೆ ಮತ್ತು ನೆರವು ಬಗ್ಗೆ ಆಜ್ಞೆಗಳು ಜಾರಿಯಾಗುತ್ತಿದ್ದುವು. ಯುದ್ಧ ಕೈದಿಗಳಿಗೆ ವ್ಯವಸ್ಥೆ ಮಾಡುವ ಬಗ್ಗೆ ಯೋಜನೆಗಳು ಅಲ್ಲಿಯೇ ರಚಿಸಲ್ಪಡುತ್ತಿದ್ದುವು. ಅದು ರಾಜಕೀಯ ನಿರ್ಣಯಗಳ ಕೇಂದ್ರವೂ ಆಗಿತ್ತು. ಅಲ್ಲಿಂದಲೇ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಭೂತೆರಿಗೆ ಮತ್ತು ಜಿಝಿಯ ತೆರಿಗೆ ಸಂಗ್ರಹಿಸುವ ಅಧಿಕಾರಿಗಳನ್ನು ವಿವಿಧ ಪ್ರಾಂತ್ಯಗಳಿಗೆ ರವಾನಿಸುತ್ತಿದ್ದರು. ಗಡಿ ಪ್ರದೇಶಗಳಲ್ಲಿ ಅಮೀರರನ್ನು ನೇಮಿಸಿ ಶತ್ರುಗಳ ಆಕ್ರಮಣಗಳಿಂದ ಸಂರಕ್ಷಣೆ ಪಡೆಯಲು ವ್ಯವಸ್ಥೆ ಮಾಡಿದ್ದರು. ನಿಮ್ಮ ಬಗ್ಗೆ ಭೂಮಾಲೀಕರು ಮತ್ತು ಮುಖ್ಯಸ್ಥರಿಗೆ ತಲುಪಿದಾಗ. ಅವರು ನಿಮ್ಮೊಂದಿಗೆ ರಾಜಿ ಮಾಡಿಕೊಳ್ಳಲು ಮುಂದಾದರು. ಈ ಜನರು ವಿಜಯವನ್ನು ಪಡೆಯುತ್ತಿರುವುದನ್ನು ಕಂಡು ಅವರು ರಾಜಿ ಮಾಡಿಕೊಂಡರು. ಸವಾದ್ ಇರಾಕ್ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮುಸ್ಲಿಮರೊಂದಿಗೆ ರಾಜಿ ಮಾಡಿಕೊಳ್ಳದ ಅಥವಾ ಒಪ್ಪಂದ ಮಾಡಿಕೊಳ್ಳದ ಯಾರೂ ಇರಲಿಲ್ಲ. (ಸಯ್ಯದುನಾ ಅಬುಬಕರ್ ಸಿದ್ದೀಕ್(ರ), ಡಾ. ಅಲಿ ಮುಹಮ್ಮದ್ ಅಲ್-ಸಲಾಬಿ ಅನುವಾದಿಸಿದ್ದಾರೆ, ಪುಟ-412, ಮುಕ್ತಾಬಾ ಅಲ್-ಫುರ್ಕಾನ್ ಮುಝಫರ್‌ಗಡ್)

ಇರಾಕ್‌ನಲ್ಲಿನ ವಾತಾವರಣವು ಅನುಕೂಲಕರವಾದಾಗ ಹೀರಾ ಮತ್ತು ದಜ್‌ಲದ ನಡುವಿನ ಅರಬ್ ಪ್ರದೇಶಗಳಿಂದ ಪರ್ಷಿಯನ್ ಆಳ್ವಿಕೆಯು ಕೊನೆಗೊಂಡ ಕಾರಣ ಹಿಂಭಾಗದಿಂದ ಯಾವುದೇ ಬೆದರಿಕೆ ಇಲ್ಲದಿದ್ದಾಗ, ಹಝ್ರತ್ ಖಾಲಿದ್(ರ) ನೇರವಾಗಿ ಇರಾನ್ ಮೇಲೆ ದಾಳಿ ಮಾಡಲು ನಿರ್ಧರಿಸಿದರು ಮತ್ತು ಈ ಮಧ್ಯೆ ಅರ್ದಶಿರ್ ಕಸ್ರಿ ಅವನ ಸಾವಿನಿಂದಾಗಿ ಇರಾನ್ ಸರ್ಕಾರವು ವ್ಯಾಕುಲತೆ ಅನುಭವಿಸಿತು. ಅವನ ಉತ್ತರಾಧಿಕಾರಿ ಆಯ್ಕೆಗೆ ಸಂಬಂಧಿಸಿದಂತೆ ಅವರ ನಡುವೆ ತೀವ್ರ ಭಿನ್ನಾಭಿಪ್ರಾಯವಿತ್ತು. ಈ ಅವಕಾಶವನ್ನು ಬಳಸಿಕೊಂಡು, ಹಝ್ರತ್ ಖಾಲಿದ್(ರ) ತಮ್ಮ ರಾಜರು ಮತ್ತು ಅಮೀರರು ಮತ್ತು ವಿಶೇಷ ಜನರಿಗೆ ಪತ್ರಗಳನ್ನು ಬರೆದರು. ಈ ರಾಜರನ್ನು ಬರೆಯುವಾಗ, ಅವರು ಹೇಳಿದರು: ಖಾಲಿದ್ ಬಿನ್ ವಲೀದ್ ಅವರ ಕಡೆಯಿಂದ, ಪರ್ಷಿಯಾದ ರಾಜರ ಹೆಸರಿನ ಮೇಲೆ, ಅಮ್ಮಾ ಬಅದ್!! ಸಕಲ ಪ್ರಶಂಸೆಗಳು ಅಲ್ಲಾಹನಿಗೆ ಮಾತ್ರ ಸೇರಿದ್ದು ಅವನು ನಿಮ್ಮ ವ್ಯವಸ್ಥೆಯನ್ನು ಮುರಿದವನಾಗಿದ್ದಾನೆ. ನಿಮ್ಮ ತಂತ್ರ ವಿಫಲವಾಗಿದೆ. ಇದು ನಿಮ್ಮಲ್ಲಿ ಭಿನ್ನಾಭಿಪ್ರಾಯಗಳನ್ನು ಸೃಷ್ಟಿಸಿದೆ. ನಿಮ್ಮ ಶಕ್ತಿಯನ್ನು ದುರ್ಬಲಗೊಳಿಸಿದೆ. ನಿಮ್ಮ ಆಸ್ತಿಯನ್ನು ಕಿತ್ತುಕೊಳ್ಳಲಾಗಿದೆ. ನಿಮ್ಮ ಪ್ರಾಬಲ್ಯ ಮತ್ತು ಗೌರವ ಮಣ್ಣುಪಾಲಾಗಿದೆ. ಆದ್ದರಿಂದ, ನೀವು ನನ್ನಿಂದ ಈ ಪತ್ರವನ್ನು ಸ್ವೀಕರಿಸಿದಾಗ, ನೀವು ಇಸ್ಲಾಮ್ ಧರ್ಮವನ್ನು ಅಂಗೀಕರಿಸುವುದಾದರೆ ನೀವು ಸುರಕ್ಷಿತರಾಗುವಿರಿ. ಅಥವಾ ನೀವು ಜಿಝಿಯಾ ನೀಡುವುದಾದರೆ ನಾವು ನಿಮ್ಮನ್ನು ಸಂರಕ್ಷಿಸುವ ಹೊಣೆಗಾರಿಕೆ ವಹಿಸುವೆವು. ನೀವು ಹಾಗೆ ಮಾಡುವುದಿಲ್ಲವಾದರೆ,

ಅಲ್ಲಾಹನ ಆಣೆ!! ತಿಳಿದುಕೊಳ್ಳಿರಿ, ನಾನು ನಿಮ್ಮ ವಿರುದ್ಧ ಎಂತಹ ಜನರೊಡಗೂಡಿ ಆಕ್ರಮಣ ಮಾಡುವೆನು ಎಂದರೆ ನೀವು ನಿಮ್ಮ ಪ್ರಾಣವನ್ನು

ಪ್ರೇಮಿಸುವ ಹಾಗೆ ಅವರು ಮೃತ್ಯುವನ್ನು ಪ್ರೀತಿಸುತ್ತಾರೆ. ಮತ್ತು ಇರಾನಿನ ರಾಜರು ಹಾಗೂ ಅಮೀರರಿಗೆ ಉದ್ದೇಶಿಸಿ ಹೀಗೆ ಬರೆದರು: ಈ ಪತ್ರವು ಖಾಲಿದ್ ಬಿನ್ ವಲೀದ್ ಇರಾನಿನ ಅಧಿಕಾರಿಗಳು ಮತ್ತು ಗಣ್ಯರಿಗೆ ಬರೆದಿದೆ, ನೀವು ಇಸ್ಲಾಂ ಧರ್ಮವನ್ನು ಸ್ವೀಕರಿಸಿ ಮತ್ತು ಸುರಕ್ಷಿತವಾಗಿರಿ ಅಥವಾ ಜಿಝ್ಯುವನ್ನು ಪಾವತಿಸಿ. ನಿಮ್ಮ ಸುರಕ್ಷತೆಗೆ ನಾವು ಜವಾಬ್ದಾರರಾಗಿರುತ್ತೇವೆ. ತಿಳಿದುಕೊಳ್ಳಿರಿ, ನಾನು ನಿಮ್ಮ ವಿರುದ್ಧ ಎಂತಹ ಜನರೊಡನೆ ಆಕ್ರಮಣ ಮಾಡುವೆನು ಎಂದರೆ ನೀವು ನಿಮ್ಮ ಮದ್ಯಪಾನವನ್ನು ಪ್ರೀತಿಸುವ ಹಾಗೆ ಅವರು ಮೃತ್ಯುವನ್ನು ಪ್ರೀತಿಸುತ್ತಾರೆ.

ಹೀರಾವನ್ನು ಸ್ವಾಧೀನಪಡಿಸಿಕೊಳ್ಳುವುದರೊಂದಿಗೆ, ಇರಾಕ್ ಅನ್ನು ಸ್ವಾಧಿನಪಡಿಸಿಕೊಳ್ಳಲು ಮತ್ತು ಇಸ್ಲಾಮಿಕ್ ಸಾಮ್ರಾಜ್ಯಕ್ಕೆ ಅಧೀನಗೊಳಿಸಲು ಹಝ್ರತ್ ಅಬುಬಕರ್(ರ) ಅವರ ಆಕಾಂಕ್ಷೆಗಳ ಒಂದು ಭಾಗವು ಕಾರ್ಯರೂಪಕ್ಕೆ ಬಂದಿತು, ಇದು ಇರಾನ್ ಮೇಲೆ ನೇರ ದಾಳಿಗೆ ನಾಂದಿಯಾಯಿತು. ಹಝ್ರತ್ ಖಾಲಿದ್(ರ) ಈ ನಿಟ್ಟಿನಲ್ಲಿ ತಮ್ಮ ಕರ್ತವ್ಯವನ್ನು ಉತ್ತಮವಾಗಿ ನಿರ್ವಹಿಸಿದರು ಮತ್ತು ಅಲ್ಪಾವಧಿಯಲ್ಲಿಯೇ ಹೀರಾಗೆ ತಲುಪಿದರು ಏಕೆಂದರೆ ಇರಾಕ್ ವಿರುದ್ಧದ ಅವರ ಕಾರ್ಯಾಚರಣೆಯು ಹಿಜ್ರಿ ಮುಹರಂ 12 ರಲ್ಲಿ ಕಝಿಮ ಯುದ್ಧ ಮತ್ತು ಅದೇ ವರ್ಷ ರಬಿ ಅವ್ವಲ್ 12 ಹಿಜ್ರಿಯಲ್ಲಿ ಹೀರಾ ವಿಜಯದೊಂದಿಗೆ ಪ್ರಾರಂಭವಾಯಿತು.

ಇದರ ನಂತರ 12 ಹಿಜ್ರಿಯಲ್ಲಿ ನಡೆದ ಅಂಬರ್ ಅಥವಾ ಝಾತುಲ್–ಉಯುನ್ ಯುದ್ಧದ ಉಲ್ಲೇಖವಿದೆ. ಇರಾನ್‌ನ ಸೈನ್ಯವು ಹೀರಾಗೆ ಬಹಳ ಸಮೀಪದಲ್ಲಿರುವ ಅಂಬರ್ ಮತ್ತು ಐನ್ ಅಲ್–ತಮ್ರ್‌ನಲ್ಲಿ ಬೀಡುಬಿಟ್ಟಿತ್ತು. ಅಂಬರ್ ಕೂಡ ಬಾಗ್ದಾದ್‌ನ ಸಮೀಪದ ಒಂದು ನಗರವಾಗಿದೆ. ಅಂಬರ್ ಎಂದು ಹೆಸರಿಸಲು ಕಾರಣ ಅರೇಬಿಕ್ ಭಾಷೆಯಲ್ಲಿ ಅಂಬರ್ ಎಂದರೆ ಶೇಖರಣಾ ಕೊಠಡಿ ಎಂದು ಬರೆಯಲಾಗಿದೆ ಮತ್ತು ಅಲ್ಲಿ ಸಾಕಷ್ಟು ಆಹಾರ ಮತ್ತು ಪಾನೀಯಗಳು ಇದ್ದ ಕಾರಣ ಈ ನಗರವನ್ನು ಅಂಬರ್ ಎಂದು ಕರೆಯಲಾಯಿತು. ಐನ್ ಅಲ್–ತಮ್ರ್ ಅಂಬರ್ ಬಳಿ ಕೂಫಾದ ಪಶ್ಚಿಮದಲ್ಲಿರುವ ನಗರವಾಗಿದೆ.

ಈ ಸ್ಥಳಗಳಲ್ಲಿ ಇರಾನ್ ಸೇನೆಯ ಉಪಸ್ಥಿತಿಯು ಇಸ್ಲಾಮಿಕ್ ಸೇನೆಗೆ ಗಂಭೀರ ಬೆದರಿಕೆಯನ್ನು ಸೃಷ್ಟಿಸಿದೆ ಎಂದು ಬರೆಯಲಾಗಿದೆ. ಈ ಸಂದರ್ಭಗಳಲ್ಲಿ, ಹಝ್ರತ್ ಖಾಲಿದ್ ಬಿನ್ ವಲೀದ್(ರ) ಹೀರಾನಲ್ಲಿ ಶಾಂತವಾಗಿ ಕುಳಿತು ಇರಾನ್ ಪಡೆಗಳ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ, ಮುಸ್ಲಿಮರು ಈ ಪ್ರದೇಶವಾದ ಹೀರಾವನ್ನು ಕಳೆದುಕೊಳ್ಳುತ್ತಾರೆ ಎಂಬ ಭಯವಿತ್ತು. ಆದ್ದರಿಂದ ಹಝ್ರತ್ ಖಾಲಿದ್ ಬಿನ್ ವಲೀದ್ ರವರು ಸಜ್ಜಾಗಲು ಸೈನ್ಯಕ್ಕೆ ಆದೇಶಿಸಿದರು.
(ಡಾ. ಅಲಿ ಮುಹಮ್ಮದ್ ಅಲ್–ಸಲಾಬಿ ಭಾಷಾಂತರಕಾರರಿಂದ ಸಯ್ಯಿದುನಾ ಅಬುಬಕರ್ ಸಿದ್ದಿಕ್(ರ) ಅಕ್ಬರ್ ಶಖ್ಸಿಯ್ಯತ್ ಔರ್ ಕಾರ್ನಾಮೆ, ಪುಟ–413, ಮುಕ್ತಾಬಾ ಫುರ್ಕಾನ್ ಮುಝಫ್ಫರ್ಗಢ್) (ಹಝ್ರತ್ ಅಬೂಬಕರ್ ಸಿದ್ದೀಖ್ ಅಕ್ಬರ್(ರ), ಪುಟ–287, ಹೈಕಲ್, ಇಲ್ಮೊ ಇರ್ಫಾನ್ ಪಬ್ಲೀಷರ್ಸ್ 2004) (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ–2, ಪುಟ–245, ದಾರುಲ್ ಕುತುಬ್ ಇಲ್ಮಿಯ ಬೈರೂತ್) (ಮಾಜಿಮ್ ಅಲ್–ಬುಲ್ದಾನ್, ಸಂಪುಟ–1, ಪುಟ–305, ಸಂಪುಟ–4, ಪುಟ–199, ದಾರ್ ಅಲ್–ಕಿತಾಬ್ ಅಲ್–ಇಲಮಿಯಾ ಬೈರೂತ್)

ಹೀರಾ ಮತ್ತು ಅದರ ಸುತ್ತಮುತ್ತಲಿನ ಪರಿಸ್ಥಿತಿಯನ್ನು ಹತೋಟಿಗೆ ತಂದಾಗ ಮತ್ತು ಶಾಂತಿಯನ್ನು ಪುನಃಸ್ಥಾಪಿಸಿದಾಗ, ಹಝ್ರತ್ ಖಾಲಿದ್(ರ) ಅವರು ಹಝ್ರತ್ ಕಅ್ಕಾ ಬಿನ್ ಅಮ್ರ್ ತಮೀಮಿ(ರ) ಅವರನ್ನು ಹೀರಾದಲ್ಲಿ ತಮ್ಮ ಉಪನಾಯಕರಾಗಿ ನೇಮಿಸಿದರು ಮತ್ತು ಅವರು ಸ್ವತಃ ಹಝ್ರತ್ ಅಯಾಝ್ ಬಿನ್ ಘುನಮ್ ಅವರ ಸಹಾಯಕ್ಕಾಗಿ ಹೊರಟರು. ಹಝ್ರತ್ ಅಯಾಝ್ ಬಿನ್ ಘುನಮ್ ಅವರನ್ನು ಉತ್ತರದಿಂದ ಇರಾಕ್ ಅನ್ನು ವಶಪಡಿಸಿಕೊಳ್ಳಲು ಹಝ್ರತ್ ಅಬುಬಕರ್ ಸಿದ್ದಿಕ್(ರ) ರವರು ಕಳುಹಿಸಿದರು ಮತ್ತು ಅವರು ಹಝ್ರತ್ ಖಾಲಿದ್ ಬಿನ್ ವಲೀದ್(ರ)ರನ್ನು ಭೇಟಿಯಾಗಲು ಆದೇಶಿಸಿದರು. (ಡಾ. ಅಲಿ ಮುಹಮ್ಮದ್ ಅಲ್–ಸಲಾಬಿ ಅನುವಾದಕರಿಂದ ಸಯ್ಯದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಪುಟ–416)

ಅಂಬರ್‌ನ ಸೈನ್ಯದ ಸೇನಾಧಿಪತಿ ಸಾಬಾತ್‌ನ ಮುಖ್ಯಸ್ಥ ಶಿರ್ಜಾದ್ ಆಗಿದ್ದನು. ಅವನು ತನ್ನ ಕಾಲದಲ್ಲಿ ಬಹಳ ಬುದ್ಧಿವಂತ, ಗೌರವಾನ್ವಿತ ಮತ್ತು ಅರಬ್ ಹಾಗೂ ಅಜಮ್‌ನಲ್ಲಿ ಗೌರವ ಮತ್ತು ಪ್ರೀತಿಪಾತ್ರನಾಗಿದ್ದನು. ಸಾಬಾತ್ ಕೂಡ ಮದಾಯಿನ್‌ನಲ್ಲಿ ಪ್ರಸಿದ್ಧ ಸ್ಥಳನಾಮವಾಗಿದೆ. ಆದರೆ ಅಂಬರ್‌ನ ಜನರು ಕೋಟೆಯನ್ನು ಮುಚ್ಚಿ ಕೋಟೆಯ ಸುತ್ತಲೂ ಕಂದಕವನ್ನು ತೋಡಿ ಅದರಲ್ಲಿ ನೀರು ತುಂಬಿದ್ದರು ಮತ್ತು ಈ ಕಂದಕವೂ ಕೋಟೆಯ ಗೋಡೆಗೆ ಬಹಳ ಹತ್ತಿರದಲ್ಲಿತ್ತು ಎಂದು ಬರೆಯಲಾಗಿದೆ. ಯಾವುದೇ ಮುಸ್ಲಿಮನು ಅದರ ಹತ್ತಿರವಿದ್ದರೆ, ಕೋಟೆಯ ಗೋಡೆಗಳಲ್ಲಿ ನೆಲೆಗೊಂಡಿರುವ ಎದುರಾಳಿ ಸೈನಿಕರು ಭಾರೀ ಬಿಲ್ಲುಗಾರಿಕೆಯೊಂದಿಗೆ ಮುಸ್ಲಿಮರನ್ನು ಹಿಮ್ಮೆಟ್ಟುವಂತೆ ಒತ್ತಾಯಿಸುತ್ತಿದ್ದರು. ಆ ಜನರು ಆ ಪರಿಸ್ಥಿತಿಯಲ್ಲೇ ಇದ್ದಾಗ ಹಝ್ರತ್ ಖಾಲಿದ್(ರ)ರವರು ತಮ್ಮ ಸೈನ್ಯದ ಮುಂಭಾಗದೊಂದಿಗೆ ಅಲ್ಲಿಗೆ ತಲುಪಿದರು. ಕಂದಕದ ಸುತ್ತ ಪ್ರದಕ್ಷಿಣೆ ಹಾಕಿ, ಕೋಟೆಯ ರಕ್ಷಣಾ ವ್ಯವಸ್ಥೆಗಳನ್ನು ಪರೀಕ್ಷಿಸಿ ತನ್ನ ಅಲ್ಲಾಹನು ನೀಡಿದ ಯೋಚನಾಶಕ್ತಿಯಿಂದ ಯೋಜನೆ ರೂಪಿಸಿದರು. ಹಝ್ರತ್ ಖಾಲಿದ್(ರ) ತನ್ನ ಬಿಲ್ಲುಗಾರರ ಬಳಿಗೆ ಹೋಗಿ ಉತ್ತಮ ಗುರಿಕಾರರಾದ ಒಂದು ಸಾವಿರ ಬಿಲ್ಲುಗಾರರನ್ನು ಆಯ್ಕೆ ಮಾಡಿ ಅವರಿಗೆ ಸೂಚನೆ ನೀಡಿದರು ಮತ್ತು ಈ ಜನರು ಯುದ್ಧದ ತತ್ವಗಳ ಬಗ್ಗೆ ಸಂಪೂರ್ಣವಾಗಿ ಅಜ್ಞಾನಿಗಳಾಗಿದ್ದಾರೆ ಎಂದು ನಾನು ನೋಡುತ್ತೇನೆ. ನಿಮ್ಮ ಬಾಣಗಳನ್ನು ಅವರ ಕಣ್ಣುಗಳಿಗೆ ಮಾತ್ರ ಗುರಿಮಾಡಿ ಮತ್ತು ಬೇರೆಲ್ಲಿಯೂ ಹೊಡೆಯಬೇಡಿ. ಹೀಗೆ ಇವರೆಲ್ಲರು ಒಟ್ಟಿಗೆ ಬಾಣಗಳನ್ನು ಬೀಸಿದರು. ತದನಂತರ ಹಲವಾರು ಬಾರಿ ಅದೇ ರೀತಿ ಮಾಡಿದರು ಅದರ ಪರಿಣಾಮವಾಗಿ ಆ ದಿನ ಸುಮಾರು ಒಂದು ಸಾವಿರ ಕಣ್ಣುಗಳು ಹೊಡೆದುಹೋದವು. ಅದಕ್ಕಾಗಿಯೇ ಈ ಯುದ್ಧವನ್ನು ಝಾತ್–ಉಲ್–ಆಯುನ್ ಎಂದೂ ಕರೆಯಲಾಗುತ್ತದೆ, ಅಂದರೆ ಕಣ್ಣುಗಳ ಯುದ್ಧ.

ಅಂಬಾರ್‌ನ ಜನರ ಕಣ್ಣುಗಳು ಹೋಗುತ್ತಲೇ ಇದ್ದವು ಎಂದು ಶತ್ರುಗಳ ನಡುವೆ ಶಬ್ದವಾಯಿತು, ಆದರೆ ನಂತರವೂ ಅಂಬಾರ್ ದೊರೆ ಬೇಷರತ್ತಾಗಿ ಶರಣಾಗಲು ನಿರಾಕರಿಸಿದಾಗ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರವರು ಕೆಲವು ದುರ್ಬಲ ಒಂಟೆಗಳನ್ನು ತೆಗೆದುಕೊಂಡು ಕಂದಕದ ಬಳಿ ಬಂದು ಆಒಂಟೆಗಳನ್ನು ಕೊಂದು ಕಂದಕಕ್ಕೆ ಹಾಕಿದರು ಅದರಿಂದ ಆ ಕಂದಕವು ಆ ಪ್ರಾಣಿಗಳಿಂದ ತುಂಬಿತು ಮತ್ತು ಈ ಪ್ರಾಣಿಗಳಿಂದ ಸೇತುವೆಯು ನಿರ್ಮಾಣವಾಯಿತು. ಈಗ ಮುಸ್ಲಿಮರು ಮತ್ತು ಬಹುದೇವತಾವಾದಿಗಳು ಕಂದಕದಲ್ಲಿ ಪರಸ್ಪರ ಮುಖಾಮುಖಿಯಾಗಿದ್ದರು. ಇದನ್ನು ನೋಡಿದ ಶತ್ರುಗಳು ಹಿಮ್ಮೆಟ್ಟಿ ಕೋಟೆಯಲ್ಲಿ ಅಡಗಿಕೊಂಡರು. ಆದ್ದರಿಂದ ಅಂಬಾರ್‌ನ ದೊರೆ ಶೀರ್ಝಾದ್ ಅವನು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರಿಗೆ ಸಂಧಾನಕ್ಕಾಗಿ ಸಂದೇಶವನ್ನು ಕಳುಹಿಸಿದನು ಮತ್ತು ಯಾವುದೇ ಸಲಕರಣೆಗಳಿಲ್ಲದೆ ಕುದುರೆ ಸವಾರರ ಪಡೆಯೊಂದಿಗೆ ಇಲ್ಲಿಂದ ಹೊರಟು ತನ್ನ ನಿವಾಸವನ್ನು ತಲುಪಲು ಅವನಿಗೆ ಅವಕಾಶ ನೀಡಬೇಕೆಂದು ವಿನಂತಿಸಿಕೊಂಡನು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅದನ್ನು ಸ್ವೀಕರಿಸಿದರು.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಹಝ್ರತ್ ಖಾಲಿದ್(ರ)ರ ವಿರುದ್ಧ ಕೆಲವು ಚರಿತ್ರೆಗಾರರೂ ಜೀವನ ಚರಿತ್ರೆ ಬರೆಯುವವರೂ ಅಪವಾದ ಹೊರಿಸುತ್ತಾರೆ – ಅವರು ಭೀಕರವಾದಿಯೂ ಬರ್ಬರತೆಯಿಂದ ವರ್ತಿಸುವವರೂ ಆಗಿದ್ದರೆಂದೂ ರಕ್ತಪಾತ ಮಾಡುವವರಾಗಿದ್ದರೆಂದೂ. ಇಂತಹ ಜನರು ಚಿಂತಿಸಬೇಕು. ತೀವ್ರವಾಗಿ ಹೋರಾಟ ನಡೆಯುವಾಗ ಹಝ್ರತ್ ಖಾಲಿದ್(ರ) ಪದೇ ಪದೇ ಶತ್ರುಗಳಿಗೆ ಶಾಂತಿ ಸಂಧಾನದ ಪ್ರಸ್ತಾಪ ಕಳುಹಿಸುತ್ತಾ ಇದ್ದರೂ ಶತ್ರುಗಳು ಆ ಪ್ರಸ್ತಾಪವನ್ನು ಅಂಗೀಕರಿಸಿರಲಿಲ್ಲ. ಹೀಗಿದ್ದರೂ ಶತ್ರುಗಳು ಸೋತು ಹೋಗಿ ಕೋಟೆಯ ಒಳಗೆ ಹೋದ ನಂತರ ಅಲ್ಲಿಂದ ಹೊರಗೆ ಹೋಗಲು ಹಝ್ರತ್ ಖಾಲಿದ್(ರ)ರಿಂದ ಅನುಮತಿ ಯಾಚಿಸಿದಾಗ ಶತ್ರುಗಳು ಮೂರು ದಿವಸಗಳಿಗೆ ಆವಶ್ಯಕವಾದ ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಹೋಗಬಹುದೆಂದು ಅನುಮತಿ ನೀಡಿದರು. ಅವರು ಯಾವುದೇ ರೀತಿಯಲ್ಲಿ ಅಡ್ಡಿ ಮಾಡಲಿಲ್ಲ. ಹಝ್ರತ್ ಖಾಲಿದ್(ರ) ದೌರ್ಜನ್ಯ ಮಾಡುತ್ತಿದ್ದಾರೆಂಬುದು ಸುಳ್ಳು ಅಪವಾದವೆಂಬುದಕ್ಕೆ ಈ ಘಟನೆ ಸಾಕ್ಷ್ಯವಾಗಿದೆ.

ಶೀರ್ಝಾದ್ ತನ್ನ ಜೀವವನ್ನು ಉಳಿಸಿಕೊಂಡು ಬಹಮಾನ್ ಜಝ್ವಿಯಾನ ಬಳಿ ತಲುಪಿದಾಗ ಮತ್ತು ಅವನ್ನು ಘಟನೆಗಳ ಬಗ್ಗೆ ತಿಳಿಸಿದಾಗ ಅವನು ಶೀರ್ಝಾದ್ ಅವನನ್ನು ಖಂಡಿಸಿದನು ಅದಕ್ಕೆ ಶೀರ್ಝಾದ್ ಹೇಳಿದನು: ನಾನು ಅಲ್ಲಿ ಎಂತಹ ಜನರ ನಡುವೆ ಇದ್ದೆ ಎಂದರೆ ಅವರೆಲ್ಲರು ಬುದ್ಧಿಹೀನರಾಗಿದ್ದರು ಮತ್ತು ಅವರು ಅರಬ್ಬರ ಜನಾಂಗದವರಾಗಿದ್ದರು. ಇದು ಮುಸ್ಲಿಮರ ಬಗ್ಗೆ ಉಲ್ಲೇಖವಾಗಿರಲಿಲ್ಲ ಬದಲಿಗೆ ಅಂಬಾರ್ ಜನರಲ್ಲಿ ಅರಬ್ ಬುಡಕಟ್ಟಿನ ಜನರ ಬಗ್ಗೆ ಹೇಳಲಾಗಿತ್ತು ಅವರು ಏನೂ ತಿಳಿದಿಲ್ಲ ಎಂದು. ಶೀರ್ಝಾದ್ ಹೇಳಿದನು, ಮುಸ್ಲಿಮರು ತಮ್ಮ ಪ್ರಾಣದ ಬಗ್ಗೆ ಕಾಳಜಿ ವಹಿಸದೆ ನಮ್ಮ ಮೇಲೆ ದಾಳಿ ಮಾಡುತ್ತಿದ್ದಾರೆ ಎಂದು ನಾನು ಕೇಳಿದ್ದೇನೆ ಹೀಗೆ ಯಾವುದಾದರು ಒಂದು ರಾಷ್ಟ್ರವು ತನ್ನ ಪ್ರಾಣದ ಬಗ್ಗೆ ಕಾಳಜಿ ವಹಿಸದೆ ವರ್ತಿಸಿದಾಗ ಆ ರಾಷ್ಟ್ರದ ಮೇಲೆ ವಿಜಯವು ಕಡ್ಡಾಯವಾಗುತ್ತದೆ. ಹೀಗೆ ಅವರು ನಮ್ಮ ಸೈನ್ಯವನ್ನು ಎದುರಿಸಿದಾಗ, ಅವರು ನಮ್ಮ ಕೋಟೆ ಮತ್ತು ಭೂಸೇನೆಯಿಂದ ಒಂದು ಸಾವಿರ ಕಣ್ಣುಗಳನ್ನು ಹೊಡೆದು ಹಾಕಿದರು. ಇದರಿಂದ ರಾಜಿ ಮಾಡಿಕೊಳ್ಳುವುದು ಉತ್ತಮ ಎಂದು ನನಗೆ ಅರಿವಾಯಿತು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ರವರ ಮತ್ತು ಎಲ್ಲಾ ಮುಸ್ಲಿಮರು ಅಂಬಾರ್‌ನ ಪರಿಸ್ಥಿತಿಗಳ ಬಗ್ಗೆ ತೃಪ್ತರಾದರು ಮತ್ತು ಅಂಬಾರ್‌ನ ಜನರು ಸಹ ಭಯಪಡದೆ ಹೊರಬಂದಾಗ ಆ ಜನರು ಅರೇಬಿಕ್ ಭಾಷೆಯನ್ನು ಓದುವುದನ್ನು ಮತ್ತು ಬರೆಯುವುದನ್ನು ಹಝ್ರತ್ ಖಾಲೀದ್ ಬಿನ್ ವಲೀದ್(ರ) ರವರು ನೋಡಿದರು. ಆಗ ಹಝ್ರತ್ ಖಾಲಿದ್(ರ) ಅವರನ್ನು ಕೇಳಿದರು ನೀವು ಯಾರು? ಎಂದು. ಅದಕ್ಕೆ ಅವರು ಉತ್ತರಿಸಿದರು ನಾವು ಅರಬ್ಬರ ಒಂದು

ಸಮುದಾಯಕ್ಕೆ ಸೇರಿದವರಾಗಿದ್ದೇವೆ ನಮಗಿಂತ ಮೊದಲು ಇಲ್ಲಿ ನೆಲೆಸಿದ ಅರಬ್ಬರ ಬಳಿಗೆ ನಾವು ಬಂದೆವು ಮತ್ತು ಬಖ್ತ್ ನಸರ ಆಳ್ವಿಕೆಯಲ್ಲಿ ಅರಬ್ಬರಿಗೆ ನೆಲೆಸಲು ಅವಕಾಶ ನೀಡಿದಾಗ ಅವರು ಮೊದಲು ಬಂದರು ಮತ್ತು ನಂತರ ಇಲ್ಲಿಯೇ ಉಳಿದರು. ಹಝ್ರತ್ ಖಾಲಿದ್ ಕೇಳಿದರು ನೀವು ಯಾರಿಂದ ಬರೆಯಲು ಕಲಿತಿದ್ದೀರಿ? ಬನು ಇಯಾದ್ ಎಂಬ ಅರೇಬಿಕ್ ಬುಡಕಟ್ಟಿನಿಂದ ನಾವು ಬರೆಯುವುದನ್ನು ಕಲಿತಿದ್ದೇವೆ ಎಂದರು. ತದನಂತರ ಹಝ್ರತ್ ಖಾಲಿದ್ ಅವರು ಅಂಬಾರ್‌ನ ಸುತ್ತಮುತ್ತಲಿನ ಜನರೊಂದಿಗೆ ಸಂಧಾನ ಮಾಡಿದರು. (ತಾರಿಖ್ ಅಲ್-ತಬರಿ, ಸಂಪುಟ-2, ಪುಟ-323, 322, ದಾರ್ ಅಲ್-ಕಿತಾಬ್ ಅಲ್-ಇಲ್ಮಿಯಾ ಬೈರೂತ್)

ನಂತರ ಐನ್ ಅಲ್-ತಮ್ರ್ ಯುದ್ಧವು 12 ಹಿಜ್ರಿಯಲ್ಲಿ ನಡೆಯಿತು, ಅದನ್ನು ಉಲ್ಲೇಖಿಸಲಾಗಿದೆ. ಹಝ್ರತ್ ಖಾಲಿದ್(ರ) ಅಂಬಾರ್‌ನ ವಿಜಯವನ್ನು ಪೂರ್ಣಗೊಳಿಸಿದಾಗ ಅದು ಸಂಪೂರ್ಣವಾಗಿ ಅವರ ನಿಯಂತ್ರಣಕ್ಕೆ ಬಂದಾಗ, ಅವರು ಇರಾಕ್ ಮತ್ತು ಸಿರಿಯಾದ ಮರುಭೂಮಿಯ ನಡುವಿನ ಮರುಭೂಮಿಯ ಅಂಚಿನಲ್ಲಿರುವ ಐನ್ ಅಲ್-ತಮರ್‌ನ ಹತ್ತಿರದ ಪ್ರದೇಶಕ್ಕೆ ಹೋದರು. ಅಂಬಾರ್‌ನಿಂದ ಐನ್ ಅಲ್-ತಮರ್ ತಲುಪಲು ಮೂರು ದಿನಗಳನ್ನು ತೆಗೆದುಕೊಂಡಿತು. ಇರಾನಿನ ಕಡೆಯಿಂದ ಅಲ್ಲಿನ ದೊರೆ ಮೆಹ್ರಾನ್ ಬಿನ್ ಬಹ್ರಾಮ್ ಆಡಳಿತಗಾರನಾಗಿದ್ದನು. ಅವನು ಅಜಮೀಯರ ದೊಡ್ಡ ಸೈನ್ಯದೊಂದಿಗೆ ಅಲ್ಲಿದ್ದನು. ಇರಾನಿನ ಸೇನೆಯ ಹೊರತಾಗಿ ಅರೇಬಿಯಾದ ವಿವಿಧ ಬದವಿಗಳ ಬುಡಕಟ್ಟುಗಳು ಸಹ ಇದ್ದವು ಅವರ ನಾಯಕ ಅಕಾ ಬಿನ್ ಅಬಿ ಅಕಾ ಆಗಿದ್ದನು. ಆ ಜನರು ಹಝ್ರತ್ ಖಾಲಿದ್ ಅವರ ಬಗ್ಗೆ ಕೇಳಿದಾಗ ಅಕಾ ಮೆಹ್ರಾನ್‌ಗೆ ಅರಬ್ಬರಿಗೆ ಅರಬ್ಬರೊಂದಿಗೆ ಹೇಗೆ ಹೋರಾಡಬೇಕೆಂದು ತಿಳಿದಿದೆ ಎಂದು ಹೇಳಿದರು. ಆದ್ದರಿಂದ ನಮ್ಮನ್ನು ಮತ್ತು ಖಾಲಿದ್‌ರನ್ನು ಬಿಟ್ಟುಬಿಡಿ. ಅವರೊಂದಿಗೆ ಹೇಗೆ ಹೋರಾಡಬೇಕೆಂದು ನಮಗೆ ತಿಳಿದಿದೆ ಎಂದು ಅವರು ಭಾವಿಸಿದ್ದನು. ಸರಿ ನಾವು ವಿದೇಶಿಯರ ವಿರುದ್ಧ ಹೋರಾಡುವುದರಲ್ಲಿ ನಿಪುಣರಾಗಿರುವಂತೆ ನೀವು ಅರಬ್ಬರ ವಿರುದ್ಧ ಹೋರಾಡುವುದರಲ್ಲಿ ನಿಪುಣರು ಎಂದು ಮೆಹ್ರಾನ್ ಹೇಳಿದನು. ಹೀಗೆ ಅವನು ಅಕನನ್ನು ವಂಚಿಸಿ ಅವನಿಂದ ತನ್ನನ್ನು ತಾನು ರಕ್ಷಿಸಿಕೊಂಡು ಹೇಳಿದನು: ನೀವು ಅವರೊಂದಿಗೆ ಹೋರಾಡಿ ನಮಗೆ ನಮ್ಮ ಅಗತ್ಯವಿದ್ದರೆ ನಾವು ನಿಮ್ಮನ್ನು ಸಹಾಯ ಮಾಡುತ್ತೇವೆ. ಅಖಾಹ್ ಹಜರತ್ ಖಾಲಿದ್ ಅವರೊಂದಿಗೆ ಹೋರಾಡಲು ಹೋದಾಗ ಅಜಮಿಯರು ಅಖಾಹ್ ಬಗ್ಗೆ ತುಂಬಾ ಕಟುವಾದ ಭಾಷೆ ಬಳಸಿ ಮೆಹ್ರಾನ್‌ಗೆ ಹೇಳಿದರು. ಅವನೊಂದಿಗೆ ಮಾತನಾಡಲು ನಿಮ್ಮನ್ನು ಪ್ರೇರೇಪಿಸಿದ್ದು ಯಾವುದು? ನೀವು ನಮ್ಮನ್ನು ಬಿಟ್ಟುಬಿಡಿ ಎಂದು ಹೇಳಿದನು. ನಿಮಗೆ ಯಾವುದು ಒಳ್ಳೆಯದು ಮತ್ತು ಮುಸ್ಲಿಮರಿಗೆ ಯಾವುದು ಕೆಟ್ಟದು ಇದೆಯೋ ಅದನ್ನೆ ನಾನು ಬಯಸಿದ್ದೇನೆ. ನಿಮ್ಮ ರಾಜರನ್ನೂ ಸಹ ಕೊಂದ ವ್ಯಕ್ತಿ ನಿಮ್ಮ ಬಳಿಗೆ ಬರುತ್ತಿದ್ದಾನೆ ಎಂದು ಅವರು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರ ಬಗ್ಗೆ ಹೇಳಿದರು, ಅವರು ಮಹಾನ್ ಸೇನಾಧಿಪತಿಯಾಗಿದ್ದಾರೆ ಅವರು ನಿಮ್ಮ ವೈಭವವನ್ನು ಮೆಟ್ಟಿ ನಿಂತಿದ್ದಾರೆ. ಆದ್ದರಿಂದ ನಾನು ಅವರ ವಿರುದ್ಧ ಅಕಾನನ್ನು ಗುರಾಣಿಯಾಗಿ ಬಳಸಿದ್ದೇನೆ. ಅವರು ಖಾಲಿದ್ ವಿರುದ್ಧ ಜಯಗಳಿಸಿದರೆ ಆ ಗೆಲುವು ನಿಮ್ಮದಾಗುತ್ತದೆ ಮತ್ತು ವಿರುದ್ಧವಾಗಿ ಸಂಭವಿಸಿದರೆ, ಮುಸ್ಲಿಮರು ದುರ್ಬಲರಾಗುವುದನ್ನು ಹೊರತುಪಡಿಸಿ ನೀವು ಅವರ ವಿರುದ್ಧ ಹೋಗುವುದಿಲ್ಲ. ನಂತರ ನಾವು ಅವರೊಂದಿಗೆ ಹೋರಾಡುತ್ತೇವೆ ನಂತರ ನಾವು ಬಲಶಾಲಿಯಾಗುತ್ತೇವೆ ಮತ್ತು ಅವರು ದುರ್ಬಲರಾಗುತ್ತಾರೆ. ಇದನ್ನು ಕೇಳಿದ ಅವರು ಮೆಹ್ರಾನ್ ಅವರ ಅಭಿಪ್ರಾಯದ ಶ್ರೇಷ್ಠತೆಯನ್ನು ಒಪ್ಪಿಕೊಂಡರು. ಮೆಹ್ರಾನ್ ಐನ್ ಅಲ್-ತಮರ್‌ನಲ್ಲಿ ಉಳಿದುಕೊಂಡರು ಮತ್ತು ಅಕಾ ಹಝ್ರತ್ ಖಾಲಿದ್ ಅವರೊಂದಿಗೆ ಯುದ್ಧವಾಡಲು ದಾರಿಯಲ್ಲಿಯೇ ತಂಗಿದ್ದನು.
(ಹಝ್ರತ್ ಅಬುಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್, ಪುಟ-288-289) (ತಾರೀಖ್ ಅತ್ತಬರಿ, ಸಂಪುಟ-2, ಪುಟ-324, ದಾರುಲ್ ಕುತುಬ್ ಇಲ್ಮಿಯ ಬೈರೂತ್)

ಅಕಾ ತನ್ನ ಸೈನ್ಯದ ಶ್ರೇಣಿಯನ್ನು ಸಿದ್ಧಪಡಿಸುತ್ತಿದ್ದಾಗ ಹಝ್ರತ್ ಖಾಲಿದ್(ರ) ಸ್ವತಃ ಅವನ ಮೇಲೆ ದಾಳಿ ಮಾಡಿ ಅವನನ್ನು ಖೈದಿಯನ್ನಾಗಿ ಮಾಡಿದರು ಮತ್ತು ಅವನ ಸೈನ್ಯವು ಸೋಲಿಸಲ್ಪಟ್ಟಿತು ಮತ್ತು ಹೋರಾಟವಿಲ್ಲದೆ ಅವರೆಲ್ಲರು ಸೋತು ಓಡಿಹೋದರು ಮತ್ತು ಅವರಲ್ಲಿ ಹೆಚ್ಚಿನವರನ್ನು ಖೈದಿಗಳನ್ನಾಗಿ ಹಿಡಿಯಲ್ಪಟ್ಟರು.

ಈ ಸುದ್ದಿ ಮೆಹ್ರಾನ್‌ಗೆ ತಲುಪಿದಾಗ, ಅವನು ತನ್ನ ಸೈನ್ಯದೊಂದಿಗೆ ಕೋಟೆಯನ್ನು ತ್ಯಜಿಸಿ ಓಡಿಹೋದನು. ಸೋತ ಜನರು ಈ ಕೋಟೆಯನ್ನು ತಲುಪಿದಾಗ, ಅವರು ಅದರಲ್ಲಿ ಆಶ್ರಯ ಪಡೆದರು ಮತ್ತು ಹಝ್ರತ್ ಖಾಲಿದ್(ರ) ಅವರನ್ನು ಸುತ್ತುವರಿದರು, ಆಗ ಅವರೆಲ್ಲರು ಹಝ್ರತ್ ಖಾಲಿದ್(ರ) ಅವರಿಂದ ಸಂಧಾನವನ್ನು ಯಾಚಿಸಿದರು, ಆದರೆ ಅವರು ನಿರಾಕರಿಸಿದರು. ಆದ್ದರಿಂದ ಅವರೆಲ್ಲರು ಖಾಲಿದ್(ರ) ರವರ ನಿರ್ಧಾರವನ್ನು ಕೇಳೀ ತಮ್ಮ ಆಯುಧಗಳನ್ನು ಕೆಳಗಿಳಿಸಿದರು ಹೀಗೆ ಅವರನ್ನು ಸೆರೆಹಿಡಿದು ಅಕಾ ಮತ್ತು ಅವನೊಂದಿಗೆ ಮುಸಲ್ಮಾನರ ವಿರುದ್ಧದ ಯುದ್ಧದಲ್ಲಿ ಸೇರಿದ ಎಲ್ಲರನ್ನು ಕೊಂದು ಕೋಟೆಯಲ್ಲಿದ್ದವರನ್ನು ಖೈದಿಗಳನ್ನಾಗಿ ಮಾಡಿದರು ಮತ್ತು ಕೋಟೆಯಲ್ಲಿದ್ದ ವಸ್ತುಗಳನ್ನು ಅದನ್ನು ಯುದ್ಧದ ಸಂಪತ್ತಾಗಿ (ಮಾಲೆ ಗನೀಮತ್) ಪಡೆದರು. ಕೋಟೆಯೊಳಗಿದ್ದ ಚರ್ಚ್‌ನಲ್ಲಿ ಕ್ರೈಸ್ತ ಜನರು ನಲ್ವತ್ತು ಅರಬಿ ವಂಶಜರಾದ ಬಾಲಕರನ್ನು ಗಿರವಿಯಾಗಿ ಪಡೆದುಕೊಂಡು ಇರಿಸಿದ್ದರು. ಈ ಬಾಲಕರಿಗೆ ಇಸ್ಲಾಮೀ ಚರಿತ್ರೆಯಲ್ಲಿ ಮಹತ್ವಪೂರ್ಣವಾದ ಸ್ಥಾನವಿದೆ. ಏಕೆಂದರೆ ಅವರ ಸಂತತಿಳಾಗಿ ಎಂತಹ ಜನರು ಹುಟ್ಟಿದರೆಂದರೆ ಅವರು ಆ ಕಾಲಘಟ್ಟದಲ್ಲಿ ಮತ್ತು ಅನಂತರದ ಕಾಲದಲ್ಲಿ ಇಸ್ಲಾಮೀ ಚರಿತ್ರೆಯಲ್ಲಿ ಅಳಿಸಲಾಗದ ಗಾಢವಾದ ಅಚ್ಚೊತ್ತಿದ್ದರು. ಅವರಲ್ಲಿ ಮುಹಮ್ಮದ್ ಬಿನ್ ಸೀರೀನರ ತಂದೆ ಸೀರೀನ್, ಮೂಸಾ ಬಿನ್ ನಸೀರ್‌ರ ಪಿತ ನಸೀರ್ ಹಾಗೂ ಹಝ್ರತ್ ಉಸ್ಮಾನ್(ರ) ಬಿಡುಗಡೆಗೊಳಸಿದ ಗುಲಾಮರಾದ ಹುಮ್‌ರಾನ್ ಸಹ ಇದ್ದರು. ಸೀರೀನ್ ಅವರು ಇರಾಕ್‌ನ ಮೂಲದವರಾಗಿದ್ದರು. ಅವರು ಐನ್ ಅಲ್-ತಮರ್ ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟರು ಮತ್ತು ಹಝ್ರತ್ ಅನಸ್ ಬಿನ್ ಮಲಿಕ್ ಅವರ ಗುಲಾಮರಾದರು. ಅವರು ಮಹಾನ್ ಕಲಾವಿದರಾಗಿದ್ದರು. ಹಝ್ರತ್ ಅನಸ್(ರ) ಅವರೊಂದಿಗೆ ಸಂವಹನ ನಡೆಸುವ ಮೂಲಕ ಅವರು ಸ್ವಾತಂತ್ರ್ಯವನ್ನು ಪಡೆದರು. ಅವರ ಮಗನ ಹೆಸರು ಮಹಮ್ಮದ್ ಬಿನ್ ಸಿರೀನ್ ಆಗಿತ್ತು ಅವರು ಪ್ರಸಿದ್ಧ ಅನುಯಾಯಿಗಳಾಗಿದ್ದರು ಮತ್ತು ಪವಿತ್ರ ಖುರ್‌ಆನ್ ವ್ಯಾಖ್ಯಾನ, ಹದೀಸ್, ಕರ್ಮಶಾಸ್ತ್ರ ಮತ್ತು ಸ್ವಪ್ನ ವ್ಯಾಖ್ಯಾನ ಶಾಸ್ತ್ರ ಮೊದಲಾದವುಗಳಲ್ಲಿ ಶ್ರೇಷ್ಠತೆ ಗಳಿಸಿದವರಾಗಿದ್ದರು. ಮುಹಮ್ಮದ್ ಬಿನ್ ಸಿರೀನ್ ಅವರ ಮಗ ಯುದ್ಧದಲ್ಲಿ ಸೆರೆಯಾಳಾಗಿದ್ದರು ಮತ್ತು ನಂತರ ಅವರು ಸ್ವಾತಂತ್ರ್ಯ ಪಡೆದರು. ನಂತರ ನುಸೈರ್ ಇದ್ದರು, ಅವರು ಮೂಸಾ ಬಿನ್ ನುಸೈರ್ ಅವರ ತಂದೆಯಾಗಿದ್ದರು. ಇವರು ಬಾನು ಉಮಯ್ಯನ ಕೈದಿಗಳಲ್ಲಿದ್ದರು. ಬಾನು ಉಮಯ್ಯದ ಯಾರೋ ಒಬ್ಬರು ಅವರನ್ನು ಸ್ವತಂತ್ರಗೊಳಿಸಿದರು. ಅವರು ತಮ್ಮ ಮಗ ಮೂಸಾರವರ ಕಾರಣದಿಂದ ಪ್ರಸಿದ್ಧರಾಗಿದ್ದಾರೆ. ಮೂಸಾ ಬಿನ್ ನುಸೈರ್ ಉತ್ತರ ಆಫ್ರಿಕಾದಲ್ಲಿ ಖ್ಯಾತಿಯನ್ನು ಗಳಿಸಿದರು ಮತ್ತು ತಾರಿಕ್ ಬಿನ್ ಝಿಯಾದ್‌ರವರ ಜೊತೆಗೆ ಸ್ಪೇನ್‌ನಲ್ಲಿ ಇಸ್ಲಾಮಿಕ್ ಸರ್ಕಾರವನ್ನು ಸ್ಥಾಪಿಸುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದರು. ಆಗ ಐನ್ ಅಲ್-ತಮರ್ ಯುದ್ಧದ ಕೈದಿಗಳಲ್ಲಿ ಹಮ್ರಾನ್ ಬಿನ್ ಅಬಾನ್ ಕೂಡ ಇದ್ದರು. ಅವರು ಯಹೂದಿಗಳಿಂದ ಬಂದವರು. ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಹಝ್ರತ್ ಉಸ್ಮಾನ್(ರ)ರವರು ಅವರನ್ನು ಬಿಡುಗಡೆಗೊಳಿಸಿದರು.

ಹಝ್ರತ್ ಉತ್ಮಾನ್(ರ) ಅವರಿಗೆ ತುಂಬಾ ಆತ್ಮೀಯರಾಗಿದ್ದರು. ನಲವತ್ತೊಂದು ಹಿಜ್ರಿಯಲ್ಲಿ, ಅವರು ಸ್ವಲ್ಪ ಸಮಯದವರೆಗೆ ಬಸ್ರಾವನ್ನು ಆಳಿದರು ಮತ್ತು ನಂತರ ಬನು ಉಮಯ್ಯದ್ ಆಳ್ವಿಕೆಯಲ್ಲಿ ದೊಡ್ಡ ಹೆಸರನ್ನು ಸೃಷ್ಟಿಸಿದರು. ಹಝ್ರತ್ ಖಾಲಿದ್(ರ) ವಿಜಯದ ಶುಭವಾರ್ತೆಯನ್ನು ಮತ್ತು ಖುಮ್ಸ್ ಅನ್ನು ಹಝ್ರತ್ ಅಬುಬಕರ್(ರ) ಅವರಿಗೆ ಕಳುಹಿಸಿದರು.
(ಅಲ್-ಕಮಲ್ ಫಿ ಅಲ್-ತಾರಿಖ್, ಸಂಪುಟ-2, ಪುಟ-246, ದಾರುಲ್-ಕುತುಬ್ ಅಲ್-ಇಲ್ಮಿಯಾ ಬೈರುತ್ 2006) (ಸೈರುಸ್ಸಹಾಬ, ಸಂಪುಟ-3, ಪುಟ-277-278, ದಾರ್ ಅಲ್-ಇಶಾತ್ ಕರಾಚಿ) (ಫತುಹ್ ಅಲ್-ಬುಲ್ದಾನ್ ಅನುವಾದಕ, ಪುಟ-325, 346) (ಮರತುರ್ಝ್ಝಮಾನ್ ಫೀ ತವರಿಖಿಲ್ ಅಯ್ಯನ್, ಭಾಗ-6, ಪುಟ-228, ದಾರ್ ಅಲ್-ಕಿತಾಬ್ ಅಲ್-ಇಲ್ಮಿಯಾ) (ತಾರಿಖ್ ಅಲ್-ತಬರಿ, ಸಂಪುಟ-3, ಪುಟಗಳು-169,524, ದಾರ್ ಅಲ್-ಕುತುಬ್ ಅಲ್-ಇಲ್ಮಿಯಾ ಬೈರುತ್)

ಅಂಬಾರ್ ಮತ್ತು ಐನ್ ಅಲ್-ತಮರ್ ವಿಜಯದ ನಂತರ, ಖಲೀದ್(ರ)ರವರು ವಲೀದ್ ಬಿನ್ ಉಕ್ಬಾರನ್ನು ಹಝ್ರತ್ ಅಬುಬಕರ್(ರ) ಅವರ ಸೇವೆಗೆ ವಿಜಯದ ಒಳ್ಳೆಯ ಸುದ್ದಿಯೊಂದಿಗೆ ಖುಮ್ಸ್ ಭಾಗವನ್ನು ಕಳುಹಿಸಿದರು. ಅವರು ಮದೀನಾಗೆ ತಲುಪಿ ಅವರಿಗೆ ಎಲ್ಲಾ ಸಂದರ್ಭಗಳನ್ನು ತಿಳಿಸಿದರು ಮತ್ತು ಖಾಲಿದ್(ರ) ಅವರ ಆದೇಶಗಳನ್ನು ನಿರ್ಲಕ್ಷಿಸಿ, ಹೀರಾವನ್ನು ತೊರೆದು ಅಂಬಾರ್ ಮತ್ತು ಐನ್ ಅಲ್-ತಮರ್ ಮೇಲೆ ದಂಡೆತ್ತಿ ಹೋದರು ಏಕೆಂದರೆ ಅವರು ಹೀರಾದಲ್ಲಿ ಉಳಿದು ಪೂರ್ಣ ವರ್ಷವಾಗಿತ್ತು. ಹಝ್ರತ್ ಅಬೂಬಕರ್(ರ) ಅವರು ಹೀರಾದಲ್ಲಿ ಕಾಯಲು ಸೂಚಿಸಿದ್ದರು ಆದರೆ ಅವರು ಹೀಗೆ ಮಾಡಿದರು. ಈ ಸಂದರ್ಭಗಳಲ್ಲಿ ಇದು ಅತ್ಯುತ್ತಮವೆಂದು ಪರಿಗಣಿಸಿದರು ಮತ್ತು ಅಯಾಜ್ ಅವರು ಯಾವಾಗ ದೌಮತ್ ಅಲ್-ಜಂದಲ್ ಅನ್ನು ತೊರೆದು ಖಾಲಿದ್(ರ) ಅವರಿಗೆ ಸಹಾಯ ಮಾಡಲು ಹೀರಾವನ್ನು ತಲುಪುತ್ತಾರೆ ಎಂದು ತಿಳಿದಿರಲಿಲ್ಲ. ತಡವಾಗಿತ್ತು. ಅಯಾಜ್ ಅಲ್ಲಿಗೆ ತಲುಪುತ್ತಿರಲಿಲ್ಲ. ಹಝ್ರತ್ ಅಬೂಬಕ್ಕರ್(ರ) ಕೂಡ ಅಯಾಜ್‌ನ ಸೋಮಾರಿತನದಿಂದ ಬೇಸತ್ತು ಮುಸ್ಲಿಮರನ್ನು ಕುಗ್ಗಿಸುತ್ತಿದ್ದಾರೆ ಎಂದು ಭಾವಿಸಿದ್ದರು. ಇರಾಕ್‌ನಲ್ಲಿ ಖಾಲಿದ್(ರ)ರವರ ಸಾಧನೆಗಳ ಬಗ್ಗೆ ಶತ್ರುಗಳಿಗೆ ಮಾಹಿತಿ ದೊರಕುತ್ತಿದ್ದರೆ, ಖಮಡಿತವಾಗತೂ ಅವರು ಅಯಾಜ್‌ನ ದೌರ್ಬಲ್ಯದ

ಲಾಭವನ್ನು ಪಡೆದುಕೊಂಡು ಮುಸ್ಲಿಮರನ್ನು ಬಹಳ ತೊಂದರೆಯನ್ನು ಹೇರುತ್ತಿದ್ದರು. (ಹಝ್ರತ್ ಅಬು ಬಕರ್ ಸಿದ್ದೀಕ್(ರ) ಅಕ್ಬರ್, ಮುಹಮ್ಮದ್ ಹುಸೇನ್ ಹೈಕಲ್, ಪುಟ–325, ಇಸ್ಲಾಮಿಕ್ ಲೈಬ್ರರಿ ಲಾಹೋರ್)

ನಂತರ ದೌಮತ್ ಅಲ್–ಜಂದಲ್ ಯುದ್ಧವಿದೆ. ಇದೂ ಹನ್ನೆರಡು ಹಿಜ್ರಿಯಲ್ಲಿ ನಡೆದಿತ್ತು. ದೌಮತ್ ಅಲ್–ಜಂದಲ್ ಡಮಾಸ್ಕಸ್‌ನಿಂದ ಐದು ರಾತ್ರಿಗಳು ಮತ್ತು ಮದೀನಾದಿಂದ ಹದಿನೈದು ರಾತ್ರಿಗಳ ದೂರದ ಒಂದು ನಗರವಾಗಿದೆ. ಅಂದರೆ, ಅಂದಿನ ಪ್ರಯಾಣದ ವಿಧಾನಗಳ ಪ್ರಕಾರ. ಈ ಸಿರಿಯನ್ ನಗರವು ಮದೀನಾಕ್ಕೆ ಬಹಳ ಹತ್ತಿರದಲ್ಲಿತ್ತು. ಹಝ್ರತ್ ಅಬುಬಕರ್(ರ) ಅವರು ಹಝ್ರತ್ ಅಯ್ಯಾಝ್ ಬಿನ್ ಗನಮ್ ಅವರಿಗೆ ದೌಮಾಗೆ ಕಳುಹಿಸಿದ್ದರು. ಅವರಿಗೆ ದೀರ್ಘಕಾಲದವರೆಗೆ ಶತ್ರುಗಳಿಂದ ಪ್ರತಿರೋಧವನ್ನು ಎದುರಿಸಬೇಕಾಯಿತು. ಆದ್ದರಿಂದ ಅವರು ಹಝ್ರತ್ ಖಾಲಿದ್(ರ) ಅವರನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ. ಹಝ್ರತ್ ಖಾಲಿದ್(ರ) ವಲೀದ್ ಬಿನ್ ಉಕ್ಬಾ ಅವರನ್ನು ಐನ್ ಅಲ್–ತಮರ್ ವಿಜಯದ ಬಗ್ಗೆ ತಿಳಿಸಿದ ನಂತರ ಹಝ್ರತ್ ಅಬುಬಕರ್(ರ) ಅವರ ಸೇವೆಗೆ ಕಳುಹಿಸಿದಾಗ, ಹಝ್ರತ್ ಅಬುಬಕರ್(ರ) ಅವರು ಅಯಾಜ್ ಬಗ್ಗೆ ಚಿಂತಿತರಾಗಿದ್ದರು. ಆದ್ದರಿಂದ ಅವರು ವಲೀದ್ ಬಿನ್ ಉಕ್ಬಾ ಅವರನ್ನು ಅಯಾಝ್ ಅವರಿಗೆ ಸಹಾಯ ಮಾಡಲು ಕಳುಹಿಸಿದರು. (ಅಬುಬಕರ್ ಅಲ್–ಸಾದಿಕ್ ಅವ್ವಲುಲ್ ಖಲಿಫಾ ಅರ್ರಾಶಿದೀನ್, ಮುಹಮ್ಮದ್ ರೆಜಾ ಅವರಿಂದ, ಪುಟ–124, ದಾರ್ ಅಹ್ಯಾಉಲ್ ಕುತುಬ್ ಅಲ್–ಅರಬೀಯ, 1950)

ವಲೀದ್ ಬಿನ್ ಉಕ್ಬಾಹ್ ಹಝ್ರತ್ ಅಯಾಝ್(ರ) ಅವರ ಬಳಿ ತಲುಪಿದಾಗ, ಹಝ್ರತ್ ಅಯಾಝ್(ರ) ಅವರು ಶತ್ರುಗಳನ್ನು ಸುತ್ತುವರೆದಿರುವುದನ್ನು ಮತ್ತು ಶತ್ರುಗಳು ಅವರನ್ನು ಸುತ್ತುವರೆದು ಅವರ ದಾರಿಯನ್ನು ನಿರ್ಬಂಧಿಸಿರುವುದನ್ನು ನೋಡಿದರು. ವಲೀದ್ ಬಿನ್ ಉಕ್ಬಾಹ್ ಹಝ್ರತ್ ಅಯಾಝ್‌ಗೆ ಹೇಳಿದರು, ಕೆಲವೊಮ್ಮೆ ಬುದ್ಧಿವಂತಿಕೆಯ ಮತು ಹೆಚ್ಚಿನ ಸಂಖ್ಯೆಯ ಸೈನ್ಯಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿದೆ. ನೀವು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರಿಗೆ ಸಂದೇಶವಾಹಕರನ್ನು ಕಳುಹಿಸಿ ಮತ್ತು ಸಹಾಯಕ್ಕಾಗಿ ಕೇಳಬೇಕು. ಹಝ್ರತ್ ಅಯಾಝ್ ಅವರಿಗೆ ವಲೀದ್ ಅವರನ್ನು ಪಾಲಿಸುವುದನ್ನು ಬಿಟ್ಟು ಬೇರೆ ದಾರಿಯಿರಲಿಲ್ಲ ಏಕೆಂದರೆ ಅವರು ದೌಮತ್ ಅಲ್–ಜಂದಲ್‌ಗೆ ತಲುಪಿ ಒಂದು ವರ್ಷವಾಗಿತ್ತು ಮತ್ತು ಇನ್ನೂ ವಿಜಯದ ಯಾವುದೇ ಲಕ್ಷಣಗಳು ಕಾಣುತ್ತಿರಲಿಲ್ಲ. ಹಝ್ರತ್ ಅಯಾಜ್ ಕೂಡ ಹಾಗೆಯೇ ಮಾಡಿದರು. ಸಹಾಯ ಕೇಳಲು ಅವರ ದೂತನು ಹಝ್ರತ್ ಖಾಲಿದ್(ರ) ಅವರ ಬಳಿ ತಲುಪಿದಾಗ, ಆ ಸಮಯದಲ್ಲಿ ಐನ್ ಅಲ್–ತಮರ್ ಈಗಾಗಲೇ ಸ್ವಾಧೀನಪಡಿಸಿಕೊಂಡಿದ್ದರು. ಅವರು ಹಝ್ರತ್ ಅಯಾಜ್ ಅವರಿಗೆ ಒಂದು ಸಣ್ಣ ಪತ್ರವನ್ನು ನೀಡಿದರು ಮತ್ತು ದೂತನನ್ನು ತಕ್ಷಣವೇ ಹಿಂತಿರುಗಿಸಿದರು, ಇದರಿಂದ ಅವರ ಚಿಂತೆ ಕಡಿಮೆಯಾಗುತ್ತದೆ. ಸ್ವಲ್ಪ ಸಮಯ ತಡೆದಿರಿ ಎಂದು ಪತ್ರದಲ್ಲಿ ಬರೆಯಲಾಗಿತ್ತು. ಸವಾರಿಗಳು ನಿಮ್ಮ ಬಳಿ ತಲುಪಲಿದೆ ಅದರ ಮೇಲೆ ಸಿಂಹಗಳು ಸವಾರಿ ಮಾಡಿರುತ್ತವೆ ಮತ್ತು ಕತ್ತಿಗಳು ಮಿನುಗುತ್ತಿವೆ ಮತ್ತು ಸೈನ್ಯಗಳು ಪಡೆ ಪಡೆಗಳಾಗಿ ಸಮೀಪಿಸುತ್ತಿವೆ. ತದನಂತರ ಹಝ್ರತ್ ಖಾಲಿದ್ ಬಿನ್ ವಲೀದ್(ರ) ರವರು ದೌಮತ್ ಅಲ್–ಜಂದಲ್‌ಗೆ ನಿರ್ಗಮಿಸಿದ ಬಗ್ಗೆ ಹೀಗೆ ಹೇಳಲಾಗಿದೆ ಅಂದರೆ ಹಝ್ರತ್ ಖಾಲಿದ್(ರ) ಐನ್ ಅಲ್–ತಮರ್ ಅನ್ನು ಸ್ವಾಧಿನಪಡಿಸಿಕೊಂಡಾಗ, ಅವರು ಉವೈಮ್ ಬಿನ್ ಕಾಹಿಲ್ ಅಸ್ಲಮಿಯನ್ನು ಅದರ ಮೇಲ್ವಿಚಾರಕರಾಗಿ ನೇಮಿಸಿದರು ಅವರು ಐನ್‌ನಲ್ಲಿರುವ ತಮ್ಮ ಸೈನ್ಯವನ್ನು ತೆಗೆದುಕೊಂಡು ದೌಮತ್ ಅಲ್–ಜಂದಲ್‌ನ ಕಡೆಗೆ ಹೊರಡಿದರು. ಮುನ್ನೂರು ಮೈಲುಗಳ ಈ ದೂರವನ್ನು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಹತ್ತು ದಿನಗಳೊಳಗೆ ಕ್ರಮಿಸಿದರು.

ದೌಮಾದ ಜನರು ಹಝ್ರತ್ ಖಾಲಿದ್(ರ) ಆಗಮನದ ಬಗ್ಗೆ ತಿಳಿದಾಗ, ಅವರು ತಮ್ಮ ಮಿತ್ರ ಬುಡಕಟ್ಟುಗಳಿಂದ ಸಹಾಯವನ್ನು ಕೋರಿದರು. ಈ ಬುಡಕಟ್ಟುಗಳು ಇತರ ಅನೇಕ ಬುಡಕಟ್ಟುಗಳೊಂದಿಗೆ ದೌಮತ್ ಅಲ್–ಜಂದಲ್ ಅನ್ನು ತಲುಪಿದವು ಮತ್ತು ಹಝ್ರತ್ ಅಯಾಜ್ ಅವರನ್ನು ನಿಗ್ರಹಿಸಲು ಒಂದು ವರ್ಷದ ಹಿಂದೆ ಆಗಮಿಸಿದಾಗ ಅವರ ಸಂಖ್ಯೆಗಿಂತ ಹಲವು ಪಟ್ಟು ಹೆಚ್ಚಾಗಿತ್ತು. ದೌಮತ್ ಅಲ್–ಜಂದಲ್‌ನ ಸೈನ್ಯವನ್ನು ಎರಡು ಪ್ರಮುಖ ವಿಭಾಗಗಳಾಗಿ ವಿಂಗಡಿಸಲಾಗಿತ್ತು. (ಹಝ್ರತ್ ಅಬುಬಕರ್ ಸಿದ್ದೀಕ್(ರ), ಮುಹಮ್ಮದ್ ಹುಸೇನ್ ಹೈಕಲ್, ಅನುವಾದಕ, ಪುಟ 290–291 ರಿಂದ ಆಯ್ದುಕೊಳ್ಳಲಾಗಿದೆ) (ಅಬು ಜಾಫರ್ ಮುಹಮ್ಮದ್ ಬಿನ್ ಜರೀರ್ ಅವರಿಂದ ತಾರಿಖ್ ತಬರಿ, ಸಂಪುಟ–2, ಪುಟ–324–325, ದಾರ್ ಅಲ್–ಕಿತಾಬ್ ಅಲ್–ಇಲಾಮಿಯಾ ಬೈರೂತ್, ಪುಟ–324–325) (ಸಯ್ಯಿದುನಾ ಅಬೂಬಕರ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಅಲಿ ಮುಹಮ್ಮದ್ ಸಲಬಿ ಉರ್ದು ಅನುವಾದ, ಪುಟ–418, ಫುರ್ಕಾನ್ ಟ್ರಸ್ಟ್ ಮುಜಫರ್ಗಢ್)

ಸೈನ್ಯದ ಇಬ್ಬರು ಮುಖ್ಯಸ್ಥರಿದ್ದರು. ಒಬ್ಬರು ಉಕೇದರ್ ಬಿನ್ ಅಬ್ದುಲ್ ಮಲಿಕ್ ಮತ್ತು ಇನ್ನೊಬ್ಬರು ಜೂದಿ ಬಿನ್ ರಬಿಯಾ ಆಗಿದ್ದರು. ಹಝ್ರತ್ ಖಾಲಿದ್(ರ)ರವರು ಆಗಮಿಸಿದ ಸುದ್ದಿ ತಿಳಿದಾಗ ಅವರ ನಡುವೆ ಭಿನ್ನಾಭಿಪ್ರಾಯ ಉಂಟಾಯಿತು. ಉಕೇದರ್ ಹೇಳಿದನು: ನನಗೆ ಖಾಲಿದ್‌ರವರ ಬಗ್ಗೆ ಚೆನ್ನಾಗಿ ಅರಿವಿದೆ, ಅವರಿಗಿಂತ ಅದೃಷ್ಟವಂತರು ಯಾರೂ ಇಲ್ಲ ಮತ್ತು ಯುದ್ಧದಲ್ಲಿ ಅವರಿಗಿಂತ ವೇಗವಾಗಿ ಯಾರೂ ಇಲ್ಲ. ಖಾಲಿದ್(ರ)ರವರನ್ನು ಎದುರಿಸುವ ರಾಷ್ಟ್ರವು ಅವು ಸಣ್ಣಪ್ರಮಾಣದಲ್ಲಿರಲಿ ಅಥವಾ ದೊಡ್ಡ ಪ್ರಮಾಣದಲ್ಲಿರಲಿ ಖಂಡಿತವಾಗಿಯೂ ಅವರೆಲ್ಲರು ಸೋಲುತ್ತಾರೆ. ನೀವು ನನ್ನ ಈ ಸಲಹೆಯನ್ನು ಅನುಸರಿಸಿ ಮತ್ತು ಅವರೊಂದಿಗೆ ಸಂಧಾನ ಮಾಡಿಕೊಳ್ಳಿ ಆದರೆ ಅವರು ಅದನ್ನು ನಿರಾಕರಿಸಿದರು, ಆದ್ದರಿಂದ ಉಕೇದರ್ ಹೇಳಿದನು, ನಾನು ಖಾಲಿದ್ ಅವರ ವಿರುದ್ಧ ಹೋರಾಡಲಿ ನಿಮಗೆ ಬೆಂಬಲ ನೀಡಲು ಸಾಧ್ಯವಿಲ್ಲ ನೀವು ನಿಮ್ಮ ಕೆಲಸ ನೋಡಿಕೊಳ್ಳಿ ನಾನು ನನ್ನ ಕೆಲಸ ನೋಡಿಕೊಳ್ಳುತ್ತೇನೆ. ಇಷ್ಟು ಹೇಳಿ ಆತನಿ ಅಲ್ಲಿಂದ ಹೊರಟನು. ಇದರ ಬಗ್ಗೆ ಹಝ್ರತ್ ಖಾಲಿದ್ ಅವರಿಗೆ ವರದಿಯಾಯಿತು. ಅವನ ದಾರಿಯನ್ನು ತಡೆಯಲು ಅವರು ಅಸಿಮ್ ಬಿನ್ ಅಮ್ರ್‌ರನ್ನು ಕಳುಹಿಸಿದರು. ಅವನು ಸಂಧಾನಕ್ಕೆ ಒಪ್ಪಲಿಲ್ಲ ಆದರೆ ಆ ಸ್ಥಳವನ್ನು ತೊರೆದನು, ತನ್ನ ಸ್ವಂತ ಪ್ರದೇಶಕ್ಕೆ ಹೋಗುತ್ತಿದ್ದನು. ಆಸಿಮ್‌ರವರು ಉಕೇದರ್‌ನನ್ನು ಹಿಡಿದಾಗ ಅವನು ನನ್ನನ್ನು ನಿಮ್ಮ ಅಮೀರ್ ಖಾಲಿದ್(ರ)ರವರ ಬಳಿಗೆ ಕರೆದುಕೊಂಡು ಹೋಗು ಎಂದು ಹೇಳಿದನು. ಅವನನ್ನು ಹಝ್ರತ್ ಖಾಲಿದ್(ರ)ರವರ ಮುಂದೆ ಹಾಜರುಪಡಿಸಿದಾಗ, ಅವರು ಉಕೇದರ್‌ನನ್ನು ಕೊಂದು ಅವನ ಎಲ್ಲಾ ವಸ್ತುಗಳನ್ನು ವಶಪಡಿಸಿಕೊಂಡರು. (ಅಬು ಜಾಫರ್ ಮುಹಮ್ಮದ್ ಬಿನ್ ಜರೀರ್ ಅವರಿಂದ ತಾರಿಖ್ ಅಲ್–ತಬರಿ, ಸಂಪುಟ–2, ಪುಟ–325, ದಾರುಲ್ ಕಿತಾಬ್ ಅಲ್–ಇಲ್‌ಮಿಯಾ ಬೈರೂತ್)

ಉಕೈದರ್‌ನನ್ನು ಬಂಧಿಸಿದ ನಂತರ ಏಕೆ ಹತ್ಯೆ ಮಾಡಲಾಯಿತು ಎಂಬ ಪ್ರಶ್ನೆ ಉದಿಸುತ್ತದೆ. ಅದಕ್ಕೆ ಕಾರಣವನ್ನು ಹೀಗೆ ವಿವರಿಸಲಾಗುತ್ತಿದೆ. ತಬೂಕ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಖಾಲಿದ್(ರ)ರನ್ನು ಉಕೈದರನ ವಿರುದ್ಧ ಹೋರಾಡಲು ಕಳುಹಿಸಿದ್ದರು. ಅವರು ಉಕೈದರನನ್ನು ಬಂಧಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಕರೆದುಕೊಂಡು ಬಂದಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಕೈದರನಿಂದ ಒಪ್ಪಂದ ಪತ್ರ ಬರೆಯಿಸಿಕೊಂಡು ಅವನನ್ನು ಬಿಡುಗಡೆ ಗೊಳಿಸಿದರು. ಆದರೆ ಉಕೈದರನು ಅನಂತರ ತನ್ನ ಪ್ರತಿಜ್ಞೆ ಉಲ್ಲಂಘಿಸಿದನು ಮತ್ತು ಮದೀನದ ಸರಕಾರದ ವಿರುದ್ಧ ವಿದ್ರೋಹ ಮಾಡಿದನು. ಆದುದರಿಂದ ಹಝ್ರತ್ ಖಾಲಿದ್(ರ) ಆಸಿಮ್ ಬಿನ್ ಅಮಿರ್‌ರನ್ನು ಉಕೈದರನನ್ನು ಬಂಧಿಸಲು ಕಳುಹಿಸಿದರು. ಅವನನ್ನು ಬಂಧಿಸಲಾಯಿತು. ಅವನ ವಿಶ್ವಾಸದ್ರೋಹದ ಕಾರಣ ಅವನನ್ನು ಹತ್ಯೆ ಮಾಡಲು ಹಝ್ರತ್ ಖಾಲಿದ್ ಆಜ್ಞಾಪಿಸಿದರು. ಈ ರೀತಿ ಉಕೈದರನ ವಿದ್ರೋಹ ಮತ್ತು ವಿಶ್ವಾಸ ದ್ರೋಹದ ಕಾರಣ ಅಲ್ಲಾಹನು ಅವನನ್ನು ನಾಶ ಮಾಡಿದನು. (ಹಝ್ರತ್ ಅಬುಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೇನ್ ಹೈಕಲ್ ಅನುವಾದಕ, ಪುಟ 327–328, ಇಸ್ಲಾಮಿಕ್ ಲೈಬ್ರರಿ ಲಾಹೋರ್)

ದೌಮತ್ ಅಲ್–ಜಂದಲ್‌ಗೆ ಹಝ್ರತ್ ಖಾಲಿದ್(ರ) ಬರುವ ಸುದ್ದಿ ತಿಳಿದ ಉಕೇದರ್ ತನ್ನ ಜನರನ್ನು ಬಿಟ್ಟು ಹೊರಟುಹೋದನು. ದೌಮತ್ ಅಲ್–ಜಂದಲ್‌ಗೆ ಹೋಗುವ ದಾರಿಯಲ್ಲಿ ಹಝ್ರತ್ ಖಾಲಿದ್(ರ)ರವರನ್ನು ಇದರ ಬಗ್ಗೆ ಸುದ್ದಿ ಕೇಳಿದರು ಎಂದು ವಿವರಿಸಲಾಗಿದೆ. ಹಝ್ರತ್ ಖಾಲಿದ್(ರ)ರವರು ಆಸಿಮ್ ಬಿನ್ ಅಮ್ರ್ ಅವರನ್ನು ಬಂಧಿಸಲು ಕಳುಹಿಸಿದರು. ಅವರು ಅವನನ್ನು ಬಂಧಿಸಿದರು ಮತ್ತು ಅವನ ಹಿಂದಿನ ವಿಶ್ವಾಸಘಾತುಕತನದಿಂದಾಗಿ, ಹಝ್ರತ್ ಖಾಲಿದ್(ರ) ಅವನನ್ನು ಕೊಲ್ಲಲು ಆದೇಶಿಸಿದರು ಮತ್ತು ಅವನು ಕೊಲ್ಲಲ್ಪಟ್ಟನು. ಆದ್ದರಿಂದ ಸರ್ವಶಕ್ತನಾದ ಅಲ್ಲಾಹನು ಅವನ ಬಂಡಾಯತನ ಮತ್ತು ವಿಶ್ವಾಸಘಾತುಕತನದಿಂದಾಗಿ ಅವನನ್ನು ಕೊಂದನು. (ಡಾ. ಅಲಿ ಮುಹಮ್ಮದ್ ಸಲಾಬಿ ಅನುವಾದಕರಿಂದ ಸಯ್ಯಿದುನಾ ಅಬುಬಕರ್ ಸಿದ್ದೀಕ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಪುಟ–419)

ಕೆಲವು ವರದಿಗಳಿಂದ ಅವರು ಜೈಲಿನಲ್ಲಿದ್ದು ಮದೀನಾಕ್ಕೆ ಕಳುಹಿಸಲ್ಪಟ್ಟರು ಮತ್ತು ಹಝ್ರತ್ ಉಮರ್(ರ) ಅವರ ಕಾಲಘಟ್ಟದಲ್ಲಿ ಅವರು ಬಿಡುಗಡೆಯಾದರು ಮತ್ತು ಮದೀನಾದಿಂದ ಇರಾಕ್‌ಗೆ ಹೋದನು ಎಂದು ತಿಳಿದುಬಂದಿದೆ. ಅವನು ಐನ್ ಅಲ್–ತಮರ್‌ನ ಸ್ಥಳವಾದ ದೌಮದಲ್ಲಿ ಉಳಿದುಕೊಂಡು ಕೊನೆಯವರೆಗೂ ಅಲ್ಲಿಯೇ ಇದ್ದನು. (ಹಝ್ರತ್ ಅಬುಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದಕರು, ಪುಟ–328, ಇಸ್ಲಾಮಿಕ್ ಲೈಬ್ರರಿ, ಲಾಹೋರ್) ಇವು ಎರಡು ವರದಿಗಳಾಗಿವೆ.

ಆದಾಗ್ಯೂ, ದೌಮದ ಜನರೊಂದಿಗೆ ಯುದ್ಧದ ಘಟನೆಯ ಬಗ್ಗೆ

ಹೀಗೆ ವಿವರಿಸಲಾಗಿದೆ: ಹಝ್ರತ್ ಖಾಲಿದ್(ರ) ಮುಂದೆ ಹೋಗಿ ದೌಮಾ ತಲುಪಿದರು. ಹಝ್ರತ್ ಖಾಲಿದ್(ರ) ತನ್ನ ಸೈನ್ಯ ಮತ್ತು ಹಝ್ರತ್ ಅಯಾಜ್(ರ)ರವರ ಸೈನ್ಯದ ನಡುವೆ ದೌಮಾವನ್ನು ತೆಗೆದುಕೊಂಡರು. ದೌಮಾದ ಜನರ ಸಹಾಯಕ್ಕೆ ಬಂದ ಕ್ರಿಶ್ಚಿಯನ್ ಅರಬ್ಬರು ಕೋಟೆಯ ಹೊರ ಭಾಗದಲ್ಲಿ ಇದ್ದರು ಏಕೆಂದರೆ ಅವರಿಗೆ ಕೋಟೆಯಲ್ಲಿ ಸ್ಥಳವಿರಲಿಲ್ಲ. ಹಝ್ರತ್ ಖಾಲಿದ್(ರ) ಆರಾಮವಾಗಿ ಸಾಲಿನಲ್ಲಿ ನಿಂತಾಗ, ದೌಮಾದ ಮುಖ್ಯಸ್ಥರು ಕೋಟೆಯಿಂದ ಹೊರಬಂದು ಹಝ್ರತ್ ಖಾಲಿದ್(ರ) ರವರ ಮೇಲೆ ದಾಳಿ ಮಾಡಿದರು. ಎರಡು ಕಡೆಯವರ ನಡುವೆ ವೈಮನಸ್ಸಿನ ಯುದ್ಧ ನಡೆಯಿತು. ಅಂತಿಮವಾಗಿ, ಹಝ್ರತ್ ಖಾಲಿದ್ ಮತ್ತು ಹಝ್ರತ್ ಅಯಾಜ್ ತಮ್ಮ ಎದುರಾಳಿಗಳನ್ನು ಸೋಲಿಸಿದರು. ಹಝ್ರತ್ ಖಾಲಿದ್(ರ) ಒಬ್ಬ ಮುಖ್ಯಸ್ಥ ಜೋದಿಯನ್ನು ಬಂಧಿಸಿದರು ಮತ್ತು ಹಝ್ರತ್ ಇಕ್ರಾ ಬಿನ್ ಹಬ್ಸ್(ರ) ಕಲ್ಬ್ ಬುಡಕಟ್ಟಿನ ಮುಖ್ಯಸ್ಥನಾಗಿದ್ದ ವಾದೀಯಾನನ್ನು ಬಂಧಿಸಿದರು. ಉಳಿದ ಜನರು ಹಿಮ್ಮೆಟ್ಟಿದರು ಮತ್ತು ಕೋಟೆಯಲ್ಲಿ ಅಡಗಿಕೊಂಡರು, ಆದರೆ ಕೋಟೆಯಲ್ಲಿ ಸಾಕಷ್ಟು ಸ್ಥಳಾವಕಾಶವಿರಲಿಲ್ಲ. ಕೋಟೆ ತುಂಬಿದಾಗ ಒಳಗಿನವರು ಕೋಟೆಯ ಹೆಬ್ಬಾಗಿಲನ್ನು ಮುಚ್ಚಿದರು, ಅನೇಕ ಜನರನ್ನು ಹೊರಗೆ ಬಿಟ್ಟರು, ಇದರಿಂದಾಗಿ ಹೊರಗಿನ ಜನರು ಗೊಂದಲದಲ್ಲಿ ನಡೆಯಲು ಪ್ರಾರಂಭಿಸಿದರು. ಆಸಿಮ್ ಬಿನ್ ಅಮ್ರ್ ಹೇಳಿದರು, ಓ ಬನು ತಮೀಮ್! ನಿಮ್ಮ ಮಿತ್ರ ಕುಲದ ಕಲ್ಬ್‌ಗೆ ಸಹಾಯ ಮಾಡಿ ಮತ್ತು ಅವರಿಗೆ ಆಶ್ರಯ ನೀಡಿ ಏಕೆಂದರೆ ಅವರಿಗೆ ಸಹಾಯ ಮಾಡಲು ನಿಮಗೆ ಇನ್ನೊಂದು ಅವಕಾಶ ಸಿಗುವುದಿಲ್ಲ. ಇದನ್ನು ಕೇಳಿ ಬಾನು ತಮೀಮ್ ಅವರಿಗೆ ಸಹಾಯ ಮಾಡಿದರು. ಅಂದು ಆಸೀಮ್‌ನವರ ಸಂಧಾನದಿಂದವೂ ಕಲ್ಬ್ ಬುಡಕಟ್ಟಿನ ಜನರ ಜೀವ ಉಳಿಯಿತು. ಹಝ್ರತ್ ಖಾಲಿದ್(ರ) ಕೋಟೆಯ ಕಡೆಗೆ ಹಿಮ್ಮೆಟ್ಟುವವರನ್ನು ಹಿಂಬಾಲಿಸಿದರು ಮತ್ತು ಅನೇಕ ಜನರನ್ನು ಕೊಂದರು, ಅವರ ದೇಹದಿಂದ ಕೋಟೆಯ ದ್ವಾರವನ್ನು ನಿರ್ಬಂಧಿಸಲಾಯಿತು. ತದನಂತರ ಜೋದಿ ಮತ್ತು ಉಳಿದ ಕೈದಿಗಳು ಕೊಲ್ಲಲ್ಪಟ್ಟರು. ನಾವು ಅವರಿಗೆ ಶಾಂತಿ ನೀಡಿದ್ದೇವೆ ಎಂದು ಆಸಿಮ್ ಮತ್ತು ಇಕ್ರಾ ಮತ್ತು ಬಾನು ತಮೀಮ್ ಹೇಳಿದ್ದರಿಂದ ಕಲ್ಬ್‌ನ ಕೈದಿಗಳನ್ನು ಮಾತ್ರ ಉಳಿಸಲಾಯಿತು. ನಂತರ ಹಝ್ರತ್ ಖಾಲಿದ್(ರ) ಅವರು ಕೋಟೆಯ ದ್ವಾರವನ್ನು ಮುರಿದರು. ಮುಸ್ಲಿಮರು ಕೋಟೆಯನ್ನು ಪ್ರವೇಶಿಸಿದರು. ಹೋರಾಟಗಾರರು ಕೊಲ್ಲಲ್ಪಟ್ಟರು ಮತ್ತು ಹದಿಹರೆಯದವರು ಸೆರೆಹಿಡಿಯಲ್ಪಟ್ಟರು. (ಅಬು ಜಾಫರ್ ಮುಹಮ್ಮದ್ ಬಿನ್ ಜರೀರ್ ಅವರಿಂದ ತಾರಿಖ್ ಅಲ್–ತಬರಿ, ಸಂಪುಟ–2, ಪುಟ–325, ದಾರ್ ಅಲ್–ಕಿತಾಬ್ ಅಲ್–ಇಲ್ಮಿಯಾ ಬೈರೂತ್ 2012)

ವಿಜಯದ ನಂತರ, ಹಝ್ರತ್ ಖಾಲಿದ್(ರ)ರವರು ಇಕ್ರಾ ಬಿನ್ ಹಬ್ಸ್‌ಗೆ ಅಂಬಾರ್‌ಗೆ ಹಿಂತಿರುಗಲು ಆದೇಶಿಸಿದರು ಮತ್ತು ಸ್ವತಃ ದೌಮಾತ್ ಅಲ್–ಜಂದಲ್‌ನಲ್ಲಿಯೇ ಉಳಿದುಕೊಂಡರು. (ಹಝ್ರತ್ ಅಬುಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೇನ್ ಹೈಕಲ್ ಅನುವಾದಕ, ಪುಟ–293)

ದೌಮತ್ ಅಲ್–ಜಂದಲ್‌ನ ವಿಜಯವು ಮುಸ್ಲಿಮರಿಗೆ ಯುದ್ಧದ ದೃಷ್ಟಿಕೋನದಿಂದ ಬಹಳ ಮುಖ್ಯವಾದ ಸ್ಥಾನವನ್ನು ನೀಡಿತು, ಏಕೆಂದರೆ ದೌಮತ್ ಅಲ್–ಜಂದಲ್ ಮೂರು ದಿಕ್ಕುಗಳಲ್ಲಿ ಪ್ರಮುಖ ಮಾರ್ಗಗಳು ಹೊರಬಂದ ಮಾರ್ಗದಲ್ಲಿ ನೆಲೆಗೊಂಡಿತ್ತು.

ದಕ್ಷಿಣದಲ್ಲಿ ಅರೇಬಿಯನ್ ಪೆನಿನ್ಸುಲಾ ಮತ್ತು ಈಶಾನ್ಯದಲ್ಲಿ ಇರಾಕ್ ಮತ್ತು ವಾಯುವ್ಯದಲ್ಲಿ ಸೀರಿಯಾ. ಸ್ವಾಭಾವಿಕವಾಗಿ, ಈ ನಗರವು ಇರಾಕ್‌ನಲ್ಲಿ ಹೋರಾಡುತ್ತಿದ್ದ ಮತ್ತು ಸಿರಿಯಾದ ಗಡಿಯಲ್ಲಿ ನಿಂತಿರುವ ಹಝ್ರತ್ ಅಬುಬಕರ್(ರ) ಮತ್ತು ಅವರ ಸೈನ್ಯದ ಗಮನ ಮತ್ತು ಸಂಘಟನೆಗೆ ಅರ್ಹವಾಗಿದೆ. ಹಝ್ರತ್ ಅಯಾಝ್ ಅವರು ದೌಮತ್ ಅಲ್–ಜಂದಲ್‌ನಿಂದ ಕದಲದೆ ಅಲ್ಲೇ ಉಳಿದು ಹಝ್ರತ್ ಖಾಲಿದ್(ರ) ಅಲ್ಲಿಗೆ ತಲುಪಲು ಕಾಯುತ್ತಿದ್ದರು. ದೌಮತ್ ಅಲ್–ಜಂದಲ್ ಅನ್ನು ಮುಸ್ಲಿಮರು ಸ್ವಾಧೀನಪಡಿಸಿಕೊಳ್ಳದಿದ್ದರೆ, ಇರಾಕ್‌ನಲ್ಲಿರುವ ಮುಸ್ಲಿಂ ಸೈನ್ಯಗಳು ಅಪಾಯಗಳನ್ನು ಎದುರಿಸಬೇಕಾಗಿತ್ತು. (ಡಾ. ಅಲಿ ಮುಹಮ್ಮದ್ ಸಲಬಿ ಅನುವಾದಕರಿಂದ ಸಯ್ಯಿದ್ನಾ ಅಬುಬಕರ್ ಸಿದ್ದೀಕ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಪುಟ 419–420)

ನಂತರ ಹಸೀದ್ ಮತ್ತು ಖಾನಫ್ಸ್ ಯುದ್ಧದ ಉಲ್ಲೇಖವಿದೆ. ಹಸೀದ್ ಕೂಫಾ ಮತ್ತು ಸೀರಿಯಾದ ನಡುವಿನ ಒಂದು ಸಣ್ಣ ಕಣಿವೆಯಾಗಿದೆ. ಖಾನಫ್ಸ್ ಎಂಬುದು ಇರಾಕ್‌ನ ಬದಿಯಲ್ಲಿರುವ ಅಂಬಾರ್‌ನ ಸಮೀಪವಿರುವ ಸ್ಥಳವಾಗಿದೆ. ಹಝ್ರತ್ ಖಾಲಿದ್ ಬಿನ್ ವಲೀದ್(ರ) ದೌಮತ್ ಅಲ್–ಜಂದಲ್‌ನಲ್ಲಿ ವಾಸಿಸುತ್ತಿದ್ದರು ಮತ್ತು ವಿದೇಶಿಗರು ಹಝ್ರತ್ ಖಾಲಿದ್(ರ)ರವರ ವಿರುದ್ಧ ಮತ್ತು ಮುಸ್ಲಿಮರ ವಿರುದ್ಧ ಇನ್ನೂ ಪಿತೂರಿಗಳಲ್ಲಿ ತೊಡಗಿದ್ದರು ಎಂದು ಬರೆಯಲಾಗಿದೆ. ಅಖಾಗೆ ಸೇಡು ತೀರಿಸಿಕೊಳ್ಳುವ ಉತ್ಸಾಹದಲ್ಲಿ, ದ್ವೀಪದ ಅರಬ್ಬರು ವಿದೇಶಿಯರೊಂದಿಗೆ ಪಿತೂರಿ ನಡೆಸಿದ್ದರು. ಆದ್ದರಿಂದ, ಬಾಗ್ದಾದ್‌ನಿಂದ, ಝುರ್ಮೆಹರ್ ಮತ್ತು ರೂಜ್ಬಾಹ್ ಅವರೊಂದಿಗೆ ಅಂಬಾರ್‌ಗೆ ತೆರಳಿದರು ಮತ್ತು ಇಬ್ಬರೂ ಹಸೀದ್ ಮತ್ತು ಖಾನಾಫ್ಸ್‌ನಲ್ಲಿ ಭೇಟಿಯಾಗುವುದಾಗಿ ಭರವಸೆ ನೀಡಿದರು. ಹೀರಾದಲ್ಲಿನ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರ ಉಪನಾಯಕರಾದ ಹಝ್ರತ್ ಕಅ್ಕಾ ಬಿನ್ ಉಮರ್ ಅವರು ಈ ಸುದ್ದಿಯನ್ನು ಕೇಳಿದರು, ಆದ್ದರಿಂದ ಅವರು ಅಬ್ದ್ ಬಿನ್ ಫದಕಿಯನ್ನು ಹಸೀದ್‌ಗೆ ತಲುಪಲು ಆದೇಶಿಸಿದರು ಮತ್ತು ಉರ್ವಾ ಬಿನ್ ಜಾದ್ ಅವರನ್ನು ಖಾನಾಫ್ಸ್‌ಗೆ ಕಳುಹಿಸಿದರು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರು ದೌಮಾದಿಂದ ಹಿರಾಗೆ ಹಿಂತಿರುಗಿದಾಗ ಅವರಿಗೂ ಅದರ ಸುದ್ದಿ ಸಿಕ್ಕಿತು. ಹಝ್ರತ್ ಖಾಲಿದ್(ರ) ಮದಾಯಿನ್‌ನ ಮೇಲೆ ಆಕ್ರಮಣ ಮಾಡುವ ಉದ್ದೇಶವಿತ್ತು ಆದರೆ ಇಲ್ಲಿಗೆ ತಲುಪಿದ ನಂತರ ಈ ಘಟನೆಗಳ ಬಗ್ಗೆ ತಿಳಿದಾಗ, ಅವರು ಹಝ್ರತ್ ಕಅ್ಕಾ ಬಿನ್ ಅಮ್ರ್(ರ) ಮತ್ತು ಅಬು ಲೈಲಿ(ರ) ಅವರನ್ನು ರುಜ್ಬಾ ಮತ್ತು ಝುರ್ಮೆಹರ್ ವಿರುದ್ಧ ಹೋರಾಡಲು ಕಳುಹಿಸಿದರು. ಹಝ್ರತ್ ಖಾಲಿದ್ ಬಿನ್ ವಲೀದ್(ರ)ರವರಿಗೆ ಉಮ್ರಾ ಅಲ್–ಕೈಸ್ ಕಲ್ಬಿಯಿಂದ ಪತ್ರವನ್ನು ಸ್ವೀಕರಿಸಿದರು. ಈ ಬುಡಕಟ್ಟಿನವರು ಕದಾ ಮತ್ತು ಕಲ್ಬ್‌ನಲ್ಲಿ ಪ್ರವಾದಿ(ಸ) ರವರ ವೇಲ್ವಿಚಾರಕರಾಗಿದ್ದರು. ಹಝ್ರತ್ ಅಬುಬಕರ್(ರ) ರವರ ಖಲೀಫತ್ ಅವಧಿಯಲ್ಲಿ ಅವರು ಇಸ್ಲಾಂ ಧರ್ಮದಲ್ಲಿ ದೃಢವಾಗಿದ್ದರು. ಹಜೈಲ್ ಬಿನ್ ಇಮ್ರಾನ್ ಅವನು ಮಸಿಖ್‌ನಲ್ಲಿ ಮತ್ತು ರಬಿಯಾ ಬಿನ್ ಬಜೀರ್ ಅವನು ಸಾನಿನಲ್ಲಿ ಮತ್ತು ಬಿಶ್ರ್‌ನಲ್ಲಿ ಸೈನ್ಯವನ್ನು ಸಂಗ್ರಹಿಸಿದ್ದಾರೆ ಎಂದು ಅವರ ಪತ್ರವು ಬಂದಿತು. ಇದು ಗೊತ್ತಾದ ಕೂಡಲೇ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರು ಹಝ್ರತ್ ಅಯಾಜ್ ಬಿನ್ ಘುನಾಮ್ ಅವರನ್ನು ಹೀರಾದಲ್ಲಿ ತಮ್ಮ ಉಪನಾಯಕನನ್ನಾಗಿ ನೇಮಿಸಿದರು ಮತ್ತು ಸ್ವತಃ ಅಲ್ಲಿಂದ ಹೊರಟರು. ಖನಾಫಸ್‌ಗೆ ಹೋಗಲು ಖಾಅ್ಕಾ ಮತ್ತು ಅಬುಲೈಲಾರವರು ಹೋದ ಮಾರ್ಗದಲ್ಲಿಯೇ ಅವರು ಹೋದರು. ಅವರು ಇಬ್ಬರನ್ನೂ ಐನ್ ಅಲ್–ತಮರ್‌ನಲ್ಲಿ ಭೇಟಿಯಾದರು. ಇಲ್ಲಿಗೆ ಬಂದ ನಂತರ, ಅವರು ಹಝ್ರತ್ ಖಾಅ್ಕಾರನ್ನು ಸೈನ್ಯದ ಸೇನಾಧಿಪತಿಯಾಗಿ ಮಾಡಿ ಅವರನ್ನು ಹಸೀದ್‌ಗೆ ಕಳುಹಿಸಿದರು ಮತ್ತು ಅಬು ಲೈಲಾರನ್ನು ಖಾನಫಸ್‌ನ ಬಳಿ ಕಳುಹಿಸಿದರು ಮತ್ತು ಅವರಿಬ್ಬರೂ ಶತ್ರುಗಳನ್ನು ಅವರ(ಶತ್ರುಗಳ) ಪ್ರಚೋದಕರನ್ನು ಸುತ್ತುವರೆದು ಒಂದೇ ಸ್ಥಳದಲ್ಲಿ ಒಟ್ಟುಗೂಡಿಸಲು ಆದೇಶಿಸಿದರು ಮತ್ತು ಅವರು ಒಟ್ಟುಗೂಡದಿದ್ದರೆ ಆಗ ಅದೇ ಪರಿಸ್ಥಿತಿಯಲ್ಲಿ ಅವರ ಮೇಲೆ ದಾಳಿ ಮಾಡಿ ಎಂದು ಹೇಳಿದರು. ಝುರ್ಮೆಹರ್ ಮತ್ತು ರೂಜ್ಬಾ ಯಾವುದೇ ಚಲನೆಯನ್ನು ಮಾಡದಿರುವುದನ್ನು ಹಝ್ರತ್ ಖಾಅ್ಕಾ ಕಂಡಾಗ, ಅವರು ಹಸೀದ್ ಕಡೆಗೆ ಮುನ್ನಡೆದರು. ಈ ಭಾಗದಲ್ಲಿ ಅರಬ್ ಮತ್ತು ಅಜಮಿ(ವಿದೇಶಿ) ಸೇನೆಗಳ ಮುಖ್ಯಸ್ಥ ರೋಜ್ಬಾನಾಗಿದ್ದನು. ಖಾಅ್ಕಾ ತನ್ನ ಕಡೆಗೆ ಬರುತ್ತಿರುವುದನ್ನು ಕಂಡ ಅವನು ಝುರ್ಮೆಹರ್‌ನಿಂದ ಸಹಾಯಕ್ಕಾಗಿ ಕರೆದನು. ಝುರ್ಮೆಹರ್ ತನ್ನ ಸೈನ್ಯದ ಮೇಲೆ ಉಪನಾಯಕನನ್ನು ನೇಮಿಸಿದನು ಮತ್ತು ಸ್ವತಃ ರುಜ್ಬಾನ ಸಹಾಯಕ್ಕೆ ಬಂದನು. ಎರಡೂ ಕಡೆಯವರು ಹಸಿದ್‌ನಲ್ಲಿ ಹೋರಾಡಿದರು. ಭೀಕರ ಯುದ್ಧ ನಡೆಯಿತು. ಅಲ್ಲಾಹನು ಹೆಚ್ಚಿನ ಸಂಖ್ಯೆಯ ಅಜಮಿಯರನ್ನು ಕೊಂದನು. ಖಾಅ್ಕಾ ಝುರ್ಮೆಹರ್‌ನನ್ನು ಕೊಂದರು ಮತ್ತು ರೂಜ್ಬಾಹ್ ಕೂಡ ಕೊಲ್ಲಲ್ಪಟ್ಟನು. ಈ ಯುದ್ಧದಲ್ಲಿ ಮುಸ್ಲಿಮರ ಕೈಗೆ ಬಹಳಷ್ಟು ಯುದ್ಧದ ಸಂಪತ್ತು ಬಂದಿತು. ಹಸೀದ್‌ನ ಪಲಾಯನಗೈದವರು ಖಾನಾಫ್ಸ್‌ನಲ್ಲಿ ಒಟ್ಟುಗೂಡಿದರು. ಅಬುಲೈಲಾ ತನ್ನ ಸೈನ್ಯದೊಂದಿಗೆ ಖಾನಫಸ್‌ನ ಕಡೆಗೆ ಹೋದರು ಎಂದು ಬರೆಯಲಾಗಿದೆ. ಮತ್ತು ಹಸೀದ್‌ನ ಸೋತ ಸೇನೆಯು ಝುರ್ಮೆಹರ್‌ನ ಉಪನಾಯಕನಿಗೆ ತಲುಪಿತು. ಮುಸಲ್ಮಾನರ ಆಗಮನದ ಬಗ್ಗೆ ಕೇಳಿದ ಅವರು ಖಾನಾಫಸ್‌ಗಳನ್ನು ತೊರೆದು ಮಸೀಖ್‌ಗೆ ಓಡಿಹೋದರು. ಅಲ್ಲಿನ ಅಧಿಕಾರಿ ಹುಝೈಲ್ ಆಗಿದ್ದನು. ಖಾನಾಫಸ್‌ನ ಗೆಲುವಿಗೆ ಅಬುಲೈಲಾ ಯಾವುದೇ ಸಮಸ್ಯೆ ಎದುರಿಸಲಿಲ್ಲ. ಈ ಎಲ್ಲಾ ವಿಜಯಗಳ ಮಾಹಿತಿಯನ್ನು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರ ಸೇವೆಗೆ ಕಳುಹಿಸಲಾಯಿತು.

(ತಾರೀಖ್ ಅತ್ತಬರಿ, ಸಂಪುಟ–2, ಪುಟ–205, ದಾರ್ ಅಲ್–ಕಿತಾಬ್ ಅಲ್–ಇಲ್ಮಿಯಾ ಬೈರೂತ್) (ಮುಜಮುಲ್ ಬಲದಾನ್, ಸಂಪುಟ–2, ಪುಟ–307, 446) (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ–2, ಪುಟ–205, ದಾರುಲ್ ಕುತುಬ್ ಇಲ್ಮಿಯ ಬೈರೂತ್)

ಮಸೈಯಿಖ್ ಯುದ್ಧ. ಅಹ್ಲ್ ಅಲ್–ಹಸೀದ್ ಮತ್ತು ಅಹ್ಲ್ ಖಾನಫ್ಸ್‌ರ ಪಲಾಯನದ ಬಗ್ಗೆ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರಿಗೆ ತಿಳಿಸಿದಾಗ, ಅವರು ಹಝ್ರತ್ ಕಅ್ಕಾ(ರ), ಅಬು ಲೈಲಾ ಅಬ್ದ್ ಮತ್ತು ಉರ್ವಾ ಅವರಿಗೆ ಒಂದು ಪತ್ರ ಬರೆದರು, ಅದರಲ್ಲಿ ಅವರು ಮಸೈಯಿಖ್‌ನಲ್ಲಿ ಅವರನ್ನು ಭೇಟಿಯಾಗುವುದಾಗಿ ಭರವಸೆ ನೀಡಿದರು. ಮಸೈಯಿಖ್ ಹೋರಾನ್ ಮತ್ತು ಖಲಾತ್‌ನ ನಡುವೆ ಇದೆ. ಹೊರಾನ್ ಡಮಾಸ್ಕಸ್‌ನ ಬಳಿಯ ವಿಶಾಲವಾದ ಪ್ರದೇಶವಾಗಿದೆ, ಅಲ್ಲಿ ಹಲವಾರು ಊರುಗಳು ಮತ್ತು ತೋಟಗಳಿವೆ. ಹಝ್ರತ್ ಖಾಲಿದ್ ಬಿನ್ ವಲೀದ್(ರ)

ಐನ್ ಅಲ್–ತಮರ್‌ನಿಂದ ಮಸ್ಯೆಯಿಖ್ ಅನ್ನು ತೊರೆದರು ಮತ್ತು ನಿಗದಿತ ಸಮಯದ ಪ್ರಕಾರ ನಿಗದಿತ ರಾತ್ರಿಯಲ್ಲಿ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಮತ್ತು ಅವರ ಅಧಿಕಾರಿಗಳು ಮಸ್ಯೆಯಿಖ್‌ನ ಮೇಲೆ ದಾಳಿ ಮಾಡಿದರು. ಹುಝೈಲ್ ಅವನ ಸೈನ್ಯ ಮತ್ತು ಎಲ್ಲಾ ನಿರಾಶ್ರಿತರನ್ನು ಮೂರು ಕಡೆಯಿಂದ ಆಕ್ರಮಣ ಮಾಡಿದರು ಮತ್ತು ಹುಝೈಲ್ ಕೆಲವು ಜನರೊಂದಿಗೆ ತನ್ನ ಜೀವ ಉಳಿಸಿಕೊಂಡು ತಪ್ಪಿಸಿಕೊಂಡನು. (ತಾರೀಖ್ ತಬರಿ, ಸಂಪುಟ–2, ಪುಟ–326, ದಾರ್ ಅಲ್ ಕಿತಾಬ್ ಇಲ್‌ಮಿಯಾ ಬೈರೂತ್) (ಫರ್ಹಾಂಗ್ ಸಿರತ್, ಪುಟ–109, ಝುವಾರ ಅಕಾಡೆಮಿ ಕರಾಚಿ)

ಈ ಯುದ್ಧದ ಸಮಯದಲ್ಲಿ, ಮಸ್ಯೆಯಿಖ್‌ನಲ್ಲಿ ವಾಸಿಸುತ್ತಿದ್ದ ಇಸ್ಲಾಮಿಕ್ ಸೈನ್ಯದಿಂದ ಅಂತಹ ಇಬ್ಬರು ಮುಸ್ಲಿಮರು ಕೊಲ್ಲಲ್ಪಟ್ಟರು ಮತ್ತು ಅವರ ಕೈಯಲ್ಲಿ ಹಝ್ರತ್ ಅಬೂಬಕರ್[ರ] ನೀಡಿದ ಅಮಾನ್ ನಾಮ (ಸಂರಕ್ಷಣೆ ಪತ್ರ) ಇತ್ತು. ಈ ಇಬ್ಬರು ಮುಸ್ಲಿಮ್ ಸೈನಿಕರಿಂದ ಕೊಲ್ಲಲ್ಪಟ್ಟರು. ಅದರ ಬಗ್ಗೆ ಹಝ್ರತ್ ಅಬೂಬಕರ್[ರ]ರವರಿಗೆ ತಿಳಿದಾಗ ಕೊಲ್ಲಲ್ಪಟ್ಟವರ ಕುಟುಂಬಕ್ಕೆ ಪರಿಹಾರ ಧನ ನೀಡಲಾಯಿತು. ಆದರೆ ಹಝ್ರತ್ ಉಮರ್[ರ], ಹಝ್ರತ್ ಖಾಲಿದ್[ರ]ರಿಗೆ ಅವರ ಆ ಕೃತ್ಯದ ಶಿಕ್ಷೆ ನೀಡಬೇಕೆಂದು ಹೇಳಿದರು. ಆಗ ಹಝ್ರತ್ ಅಬೂಬಕರ್[ರ] ಹೇಳಿದರು: ಶತ್ರುಗಳು ವಾಸಿಸುತ್ತಿರುವ ಪ್ರದೇಶದಲ್ಲಿ ಮುಸ್ಲಿಮರು ಸಹ ವಾಸಿಸುತ್ತಿರುವಾಗ ಅವರಿಗೆ ಹೀಗೆ ಸಂಭವಿಸುವುದು ಮಹತ್ವಪೂರ್ಣವಾದುದೇನೂ ಅಲ್ಲ. ಹಝ್ರತ್ ಅಬೂಬಕರ್[ರ] ಕೊಲ್ಲಲ್ಪಟ್ಟ ಆ ಮುಸ್ಲಿಮರ ಮಕ್ಕಳ ಪಾಲನೆ ಪೋಷಣೆ ಬಗ್ಗೆ ನಿಗಾವಹಿಸಲು ಆಜ್ಞಾಪಿಸಿದರು. (ಹಝ್ರತ್ ಸಯ್ಯಿದುನಾ ಅಬೂಬಕರ್ ಸಿದ್ದೀಕ್(ರ), ಹೈಕಲ್, ಪುಟ–311) (ತಾರೀಖ್ ಅತ್ತಬರಿ, ಸಂಪುಟ–2, ಪುಟ–327, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಸನಾ ಮತ್ತು ಝುಮೀಲ್‌ನ ಘಟನೆ. ಝುಮೀಲ್ ಒಂದು ಸ್ಥಳವಾಗಿದೆ. ಅವರ ಹೆಸರನ್ನು ಬಿಶ್ರ್ ಎಂದೂ ಕರೆಯುತ್ತಾರೆ. ಇದು ಸನಾ ಸ್ಥಾನದೊಂದಿಗೆ ಇದೆ. ಐನ್ ಅಲ್–ತಮರ್ ಯುದ್ಧದಲ್ಲಿ ಕೊಲ್ಲಲ್ಪಟ್ಟ ಅಖಾಗೆ ಸೇಡು ತೀರಿಸಿಕೊಳ್ಳುವ ಉತ್ಸಾಹದಲ್ಲಿ ರಬಿಯಾ ಬಿನ್ ಬಜೀರ್ ತನ್ನ ಸೈನ್ಯವನ್ನು ಸನಾ ಮತ್ತು ಬಿಶ್ರ್‌ಗೆ ಕರೆದೊಯ್ದನು ಮತ್ತು ಹಝ್ರತ್ ಖಾಲಿದ್(ರ) ಮುಸ್ಯೆಯಿಖ್‌ನ ಯುದ್ಧದ ನೇತೃತ್ವ ವಹಿಸಿ ಕಆ್ಕಾ ಮತ್ತು ಅಬು ಲೈಲರನ್ನು ಮುಂದೆ ಕಳುಹಿಸಿದರು. ಒಂದು ರಾತ್ರಿಯನ್ನು ನಿಗದಿಪಡಿಸಲಾಯಿತು ಮತ್ತು ನಾವೆಲ್ಲರೂ ಇಲ್ಲಿಯೂ ಮೂರು ವಿಭಿನ್ನ ದಿಕ್ಕುಗಳಿಂದ ಶತ್ರುಗಳ ಮೇಲೆ ದಾಳಿ ಮಾಡೋಣ ಎಂದು ನಿರ್ಧರಿಸಲಾಯಿತು. ತದನಂತರ, ಹಝ್ರತ್ ಖಾಲಿದ್(ರ) ಮುಸ್ಯೆಯಿಖ್‌ನಿಂದ ನಡೆದು ವಿವಿಧ ಸ್ಥಳಗಳ ಮೂಲಕ ಝುಮೀಲ್‌ಗೆ ಬಂದರು. ಹಝ್ರತ್ ಖಾಲಿದ್(ರ) ಸಾನಿಯೊಂದಿಗೆ ಪ್ರಾರಂಭಿಸಿದರು. ಇಲ್ಲಿ ಅವರ ಇಬ್ಬರು ಸಹಚರರು ಸಹ ಅವರನ್ನು ಭೇಟಿಯಾದರು. ರಾತ್ರಿಯಲ್ಲಿ, ಈ ಮೂವರು ಮೂರು ಕಡೆಯಿಂದ ರಬಿಯಾನ ಸೈನ್ಯದ ಮೇಲೆ ಮತ್ತು ಗೌರವದಿಂದ ಹೋರಾಡಲು ನೆರೆದಿದ್ದ ಜನರ ಮೇಲೆ ದಾಳಿ ಮಾಡಿದರು ಮತ್ತು ಯಾರೂ ಓಡಿಹೋಗಿ ಯಾವುದೇ ಸುದ್ದಿಯನ್ನು ನೀಡದ ರೀತಿಯಲ್ಲಿ ಕತ್ತಿಗಳನ್ನು ಹಿಡಿದು ಅವರನ್ನು ನಾಶಪಡಿಸಿದರು. ಅವರ ಮಹಿಳೆಯರನ್ನು ಬಂಧಿಸಲಾಯಿತು. ಖಜಾನೆಯ ಖುಮ್ಸ್ ಅನ್ನು ಹಝ್ರತ್ ಅಬುಬಕರ್(ರ)ರವರ ಸೇವೆಗೆ ಕಳುಹಿಸಲಾಯಿತು ಮತ್ತು ಉಳಿದ ಸಂಪತ್ತನ್ನು ಮುಸ್ಲಿಂ ಸೈನ್ಯಕ್ಕೆ ಹಂಚಲಾಯಿತು. ಮುಸ್ಯೆಯಿಖ್ ಯುದ್ಧದಲ್ಲಿ ಸೋತು ತನ್ನ ಪ್ರಾಣ ಉಳಿಸಿಕೊಂಡ ಹುಝೈಲ್ ವಾಗ್ದಾನದಂತೆ ರಬಿಆ ಬಿನ್ ಬಾಜಿರ್‌ನ ಸೈನ್ಯಕ್ಕೆ ಸೇರಿದ. ಈಗ ಅವನು ಓಡಿಹೋಗಿ ಝುಮೀಲ್‌ನಲ್ಲಿ ಅತಾಬ್‌ನಲ್ಲಿ ಆಶ್ರಯ ಪಡೆದನು. ಅತಾಬ್ ದೊಡ್ಡ ಸೈನ್ಯದೊಂದಿಗೆ ಬಿಶ್ರ್‌ನಲ್ಲಿ ತಂಗಿದ್ದನು. ರಬಿಯಾ ಅಂತ್ಯದ ಸುದ್ದಿಯು ಅವನನ್ನು ತಲುಪುವ ಮೊದಲು, ಹಝ್ರತ್ ಖಾಲಿದ್(ರ) ಮೂರು ಕಡೆಯಿಂದ ದಾಳಿ ಮಾಡಿದರು. ಈ ಯುದ್ಧದಲ್ಲಿ ಹಲವಾರು ಜನರು ಕೊಲ್ಲಲ್ಪಟ್ಟರು ಮತ್ತು ಅಸಂಖ್ಯಾತ ಸಂಪತ್ತು ಮುಸ್ಲಿಮರ ಕೈಗೆ ಬಂದಿತು. ಹಝ್ರತ್ ಖಾಲಿದ್(ರ) ಸಂಪತ್ತನ್ನು ಮುಸ್ಲಿಮರಲ್ಲಿ ಹಂಚಿದರು ಮತ್ತು ಖುಮ್ಸ್ ಅನ್ನು ಹಝ್ರತ್ ಅಬುಬಕರ್(ರ) ಅವರ ಸೇವೆಗೆ ಕಳುಹಿಸಿದರು. ಹಝ್ರತ್ ಖಾಲಿದ್(ರ) ಬಿಶ್ರ್ ಬಳಿಯ ರಿಝಾಬ್ ಕಡೆಗೆ ತಿರುಗಿದರು. ಅಲ್ಲಿನ ಅಧಿಕಾರಿ ಹಿಲಾಲ್ ಬಿನ್ ಅಕಾ ಆಗಿದ್ದನು. ಹಝ್ರತ್ ಖಾಲಿದ್(ರ)ರವರ ಆಗಮನದ ಬಗ್ಗೆ ಅವನ ಸೈನ್ಯಕ್ಕೆ ತಿಳಿಸಿದಾಗ ಅವರು ಅವನಿಂದ ಬೇರ್ಪಟ್ಟರು. ಅಸಹಾಯಕನಾಗಿ ಹಿಲಾಲ್ ಅಲ್ಲಿಂದ ಓಡಿಹೋದನು ಮತ್ತು ಮುಸ್ಲಿಮರು ಯಾವುದೇ ತೊಂದರೆಯಿಲ್ಲದೆ ರಿಝಾಬ್‌ನನ್ನು ವಶಪಡಿಸಿಕೊಂಡರು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–327–328, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಮುಜಮುಲ್ ಬಲದಾನ್, ಸಂಪುಟ–3, ಪುಟ–170, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ನಂತರ ಫರಾಝ್ ಯುದ್ಧದ ಪ್ರಸ್ತಾಪವಿದೆ. ಫರಾಝು ಎಂಬುದು ಬಸ್ರಾ ಮತ್ತು ಯಮಾಮಾ ನಡುವಿನ ಸ್ಥಳದ ಹೆಸರಾಗಿದೆ. ಇಲ್ಲಿ ಸೀರಿಯಾ, ಇರಾಕ್ ಮತ್ತು ದ್ವೀಪದ ರಸ್ತೆಗಳು ಸೇರುತ್ತವೆ. ಈ ಯುದ್ಧವು ಧೀ ಖಅದಃ 12 ಹಿಜರಿ ವರ್ಷದಲ್ಲಿ ಫರಾಝ್ ಸ್ಥಳದಲ್ಲಿ ಮುಸ್ಲಿಮರು ಮತ್ತು ರೋಮನ್ನರ ನಡುವೆ ನಡೆಯಿತು. ಅದರಂತೆ, ಈ ಯುದ್ಧವು ಫರಾಝ್ ಯುದ್ಧ ಎಂದು ಹೆಸರಾಯಿತು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ರುಝಾಬನ್ನು ವಶಪಡಿಸಿದ ನಂತರ ಫಿರಾಝ್‌ಗೆ ತಲಪಿದರು. ಈ ಪ್ರಯಾಣ ಕಾಲದಲ್ಲಿ ಅವರು ಅನೇಕ ಹೋರಾಟ ನಡೆಸಿದರು. ಅವರಿಗೆ ರಮಝಾನಿನ ಉಪವಾಸ ಅನುಷ್ಠಿಸಲು ಸಹ ಸಾಧ್ಯವಾಗಲಿಲ್ಲ. ಹಝ್ರತ್ ಖಾಲಿದ್[ರ] ಅಚಾನಕವಾಗಿ ಮಾಡುತ್ತಿದ್ದ ಆಕ್ರಮಣಗಳ ಬಗ್ಗೆ ಮತ್ತು ಗೋತ್ರಗಳ ಜನರು ಸೋತು ಹೋಗುತ್ತಾ ಇರುವ ಬಗ್ಗೆ ಸಮಾಚಾರಗಳು ಇರಾಖ್‌ನಲ್ಲಿ ಹಬ್ಬಿತು. ಮರುಭೂಮಿಯಲ್ಲಿ ವಾಸಿಸುತ್ತಿದ್ದ ಎಲ್ಲ ಗೋತ್ರಗಳು ಭಯಗೊಂಡು ಮುಸ್ಲಿಮರಿಗೆ ಶರಣಾಗುವುದೇ ತಮಗೆ ಉತ್ತಮವೆಂದು ಮನವರಿಕೆ ಮಾಡಿದರು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ತನ್ನ ಸೈನ್ಯದೊಂದಿಗೆ ಯೂಫ್ರೇಟ್ಸ್ ನದಿಯ ಉದ್ದಕ್ಕೂ ಉತ್ತರ ಪ್ರದೇಶಗಳ ಕಡೆಗೆ ಮುನ್ನಡೆಯಲು ಪ್ರಾರಂಭಿಸಿದರು ಮತ್ತು ಅವರು ಎಲ್ಲಿಗೆ ಹೋದರೂ ಅಲ್ಲಿನ ನಿವಾಸಿಗಳು ಅವರೊಂದಿಗೆ ರಾಜಿ ಮಾಡಿಕೊಳ್ಳುತ್ತಿದ್ದರು ಮತ್ತು ಅವನಿಗೆ ವಿಧೇಯರಾಗಲು ಒಪ್ಪಿಕೊಳ್ಳುತ್ತಿದ್ದರು. ಅಂತಿಮವಾಗಿ, ಅವರು ಫರಾಜ್‌ಗೆ ತಲುಪಿದರು, ಅಲ್ಲಿ ಸೀರಿಯಾ, ಇರಾಕ್ ಮತ್ತು ಅಲ್–ಜಝೀರಾ ಗಡಿಗಳು ಭೇಟಿಯಾದವು. ಫರಾಜ್, ಇರಾಕ್ ಮತ್ತು ಸಿರಿಯಾದ ಉತ್ತರ ಭಾಗದಲ್ಲಿದೆ. ಅಯಾಝ್ ಬಿನ್ ಗನಮ್ ಪ್ರಾರಂಭ ಕಾಲದಲ್ಲಿಯೇ ದೂಮತುಲ್ ಜುಂದಲನ್ನು ಜಯಿಸುವ ಭಾಗ್ಯ ಗಳಿಸುತ್ತಿದ್ದರೆ ಪ್ರಾಯಶಃ ಹಝ್ರತ್ ಖಾಲಿದ್[ರ] ಫರಾಝ್‌ಗೆ ಹೋಗುತ್ತಿರಲಿಲ್ಲ. ಏಕೆಂದರೆ ಹಝ್ರತ್ ಅಬೂಬಕರ್[ರ] ಇರಾಖ್ ಮತ್ತು ಶಾಮ್ ದೇಶಗಳನ್ನು ಸಂಪೂರ್ಣವಾಗಿ ಜಯಿಸುವ ಉದ್ದೇಶ ಹೊಂದಿರಲಿಲ್ಲ. ಅವರು ಇಚ್ಛಿಸುತ್ತಿದ್ದುದೇನೆಂದರೆ ಆ ಎರಡು ದೇಶಗಳು ಅರಬಿ ದೇಶದ ಗಡಿ ಭಾಗದಲ್ಲಿದ್ದುದರಿಂದ ಆ ಗಡಿ ಪ್ರದೇಶಗಳಲ್ಲಿ ಶಾಂತಿಯು ಸ್ಥಾಪಿತವಾಗಲಿ ಎಂದೂ ಆ ದಿಕ್ಕುಗಳಿಂದ ಇರಾನಿಯರು ಮತ್ತು ರೋಮಿನವರು ಅರಬ್ ದೇಶದ ಮೇಲೆ ಆಕ್ರಮಣ ಮಾಡದಿರಲಿ ಎಂದೂ ಆಗಿತ್ತು. ಆದರೆ ಅಲ್ಲಾಹನ ಇಚ್ಛೆ ಇರಾಖ್ ಮತ್ತು ಶಾಮ್ ಸಂಪೂರ್ಣವಾಗಿ ಮುಸ್ಲಿಮರ ಅಧೀನವಾಗಬೇಕು ಎಂದಾಗಿತ್ತು. ಆದುದರಿಂದ ಅಲ್ಲಾಹನು ಎಂತಹ ಸನ್ನಿವೇಶಗಳನ್ನು ಸೃಷ್ಟಿಸಿದನೆಂದರೆ ಹಝ್ರತ್ ಖಾಲಿದ್[ರ] ಇರಾಖಿನ ಗೋತ್ರಗಳನ್ನು ವಿಧೇಯರನ್ನಾಗಿ ಮಾಡಲು ಇರಾಖಿನ ಉತ್ತರ ಭಾಗದ ಕೊನೆಯ ತನಕ ಸಾಗಿದರು. ಆ ಕಾರಣದಿಂದ ಇರಾಖಿನ ಮೇಲ್ಭಾಗದಿಂದ ಶಾಮ್ ದೇಶವನ್ನು ಆಕ್ರಮಣ ಮಾಡುವ ಮಾರ್ಗ ತೆರೆಯಲ್ಪಟ್ಟಿತು.

ಇರಾನಿನ ಗಡಿಯಿಂದ ರೋಮನ್ನರ ಮೇಲೆ ದಾಳಿ ಮಾಡಲು ದಾರಿ ತೆರೆಯುವುದು ಹಝ್ರತ್ ಅಬುಬಕರ್(ರ) ಸಹ ಊಹಿಸಲು ಸಾಧ್ಯವಾಗದ ಒಂದು ಪವಾಡವಾಗಿದೆ ಮತ್ತು ಈ ಸಾಧನೆಯೂ ಎಂತಹ ವ್ಯಕ್ತಿಯಿಂದ ಸಾಧ್ಯವಾಗಿದೆ ಎಂದರೆ ಅಂತಹ ವ್ಯಕ್ತಿಯನ್ನು ಹುಟ್ಟಿಸಲು ಅರಬ್ ಮತ್ತು ಅಜಮ್‌ನ ಮಹಿಳೆಯರಿಂದ ಅನುಕರಿಸಲು ಸಾಧ್ಯವಾಗದು. ಹಝ್ರತ್ ಅಬೂಬಕರ್(ರ) ಹೇಳಿದಂತೆ. ಫರಾಝ್‌ನಲ್ಲಿ ಹಝ್ರತ್ ಖಾಲಿದ್[ರ] ಒಂದು ಇಡೀ ತಿಂಗಳು ವಾಸಿಸಿದರು. ಅಲ್ಲಿ ಸಹ ಹಝ್ರತ್ ಖಾಲಿದ್[ರ] ಎಂತಹ ಶೌರ್ಯ, ದೃಢ ನಿರ್ಧಾರ ಮತ್ತು ಸ್ಥಿರಚಿತ್ತತೆಯ ಪ್ರದರ್ಶನ ಮಾಡಿದರೆಂದರೆ ಅವುಗಳು ಅಪ್ರತಿಮವಾಗಿದ್ದುವು. ಅವರು ಎಲ್ಲಾ ಕಡೆಯಿಂದ ಶತ್ರುಗಳಿಂದ ಸುತ್ತುವರಿದಿದ್ದರು. ಪೂರ್ವ ಭಾಗದಲ್ಲಿ ತಮ್ಮ ರಕ್ತಕ್ಕಾಗಿ ಬಾಯಾರಿದ ಇರಾನಿಯನ್ನರು ಇದ್ದರು. ಪಶ್ಚಿಮ ಭಾಗದಲ್ಲಿ ಈ ಸಮಯದಲ್ಲಿ ಖಾಲಿದ್(ರ)ರವರ ಜಮಾಅತ್ತನ್ನು ನಾಶಪಡಿಸದಿದ್ದರೆ, ಈ ಪ್ರವಾಹವು ನಿಲ್ಲುವುದಿಲ್ಲ ಎಂದು ನಂಬುವ ರೋಮನ್ನರು ಇದ್ದರು. ರೋಮನ್ನರು ಮತ್ತು ಮುಸ್ಲಿಮರ ನಡುವಿನ ಏಕೈಕ ತಡೆಗೋಡೆ ಯುಫ್ರಟಿಸ್ ನದಿಯಾಗಿತ್ತು. ಅವರ ಹೊರತಾಗಿ, ಸುತ್ತಲೂ ಅನೇಕ ಬುಡಕಟ್ಟುಗಳಿದ್ದರು, ಅವರ ಮಹಾನ್ ನಾಯಕರನ್ನು ಹಝ್ರತ್ ಖಾಲಿದ್(ರ)ರವರು ಕೊಂದು ಅವರ ಹೃದಯದಲ್ಲಿ ಅಂತ್ಯವಿಲ್ಲದ ಪ್ರತೀಕಾರದ ಬೆಂಕಿಯನ್ನು ಹೊತ್ತಿಸಿದ್ದರು. ಖಲೀದ್(ರ) ಅವರಿಗೆ ಈ ಸಂದಿಗ್ಧ ಪರಿಸ್ಥಿತಿಯ ಬಗ್ಗೆ ಅರಿವಿರಲಿಲ್ಲ. ಅವರು ಬಯಸಿದರೆ, ಹೀರಾಗೆ ಹಿಂತಿರುಗಿ ತನ್ನ ಶಕ್ತಿಯನ್ನು ಹೆಚ್ಚಿಸಬಹುದಿತ್ತು ಮತ್ತು ನಂತರ ರೋಮನ್ನರ ವಿರುದ್ಧ ಹೋರಾಡಲು ಹೊರಡಬಹುದಿತ್ತು. ಆದರೆ ಅವರು ಹೀಗೆ ಮಾಡಲಿಲ್ಲ ಏಕೆಂದರೆ ಎದುರಿಗಿರುವ ಶತ್ರುವನ್ನು ಕಂಡು ಖಾಲಿದ್(ರ)ರವರಿಗೆ ತಾಳ್ಮೆಯಿಂದ ಇರಲು ಸಾಧ್ಯವೇ ಇರಲಿಲ್ಲ. ಅವನ ಸ್ವಭಾವವೇ ಹೀಗಿತ್ತು. ಅವರ ದೃಷ್ಟಿಯಲ್ಲಿ, ಇರಾನಿಯನ್ನರು ಅಥವಾ ಬುಡಕಟ್ಟಿನಜನರು ಎಲ್ಲರೂ ಜಯಿಸಬಲ್ಲರಾಗಿದ್ದರು. ಅವರು ತಮ್ಮ ಮಹಾನ್ ಸೇನೆಗಳನ್ನು ಅವರು ಹಿಂದೆಂದೂ ಯೋಚಿಸಿರಲಿಲ್ಲ ಮತ್ತು ಭವಿಷ್ಯದಲ್ಲಿ ಅವರ ಬಗ್ಗೆ ಯೋಚಿಸಲು ಸಿದ್ಧರಿಲ್ಲ, ಆದ್ದರಿಂದ ಅವರು ಬಹಳ ತೃಪ್ತಿಯಿಂದ ಯುದ್ಧದ ಸಿದ್ಧತೆಗಳಲ್ಲಿ ತೊಡಗಿದರು. ಏತನ್ಮಧ್ಯೆ, ರೋಮನ್ನರು ಇನ್ನೂ ಖಾಲಿದ್‌ನ ಸಂಪರ್ಕಕ್ಕೆ ಬಂದಿರಲಿಲ್ಲ ಮತ್ತು ಅವರ ದಾಳಿಯ ತೀವ್ರತೆಯ ಬಗ್ಗೆ ತಿಳಿದಿರಲಿಲ್ಲ. ಇಸ್ಲಾಮಿಕ್ ಪಡೆಗಳು ಫರಾಝ್‌ನಲ್ಲಿ ಜಮಾಯಿಸಿ ಸುಮಾರು ಒಂದು ತಿಂಗಳ ಕಾಲ ಅವರ ಮುಂದೆ ತಂಗಿದಾಗ, ಅವರು ಉತ್ಸುಕರಾದರು ಮತ್ತು ಅವರು ತಮ್ಮ ಬಳಿ ಇದ್ದ ಇರಾನಿನ ಪಡೆಗಳಿಂದ

ಸಹಾಯ ಕೇಳಿದರು.

ಇರಾನಿಯನ್ನರು ರೋಮನ್ನರಿಗೆ ಸಹಾಯ ಮಾಡಲು ಸಂತೋಷಪಟ್ಟರು ಏಕೆಂದರೆ ಮುಸ್ಲಿಮರು ಅವರನ್ನು ಅವಮಾನಿಸಿದ್ದರು ಮತ್ತು ಅವರ ವೈಭವವನ್ನು ಹೆಚ್ಚಿಸುವ ಮೂಲಕ ಅವರ ಹೆಮ್ಮೆಯನ್ನು ಹತ್ತಿಕ್ಕಿದರು. ಇರಾನಿಯನ್ನರಲ್ಲದೆ, ತಗ್ಲಿಬ್, ಅಯಾದ್ ಮತ್ತು ನಮರ್‌ನ ಅರಬ್ ಬುಡಕಟ್ಟುಗಳು ಕೂಡ ರೋಮನ್ನರಿಗೆ ಸಂಪೂರ್ಣವಾಗಿ ಸಹಾಯ ಮಾಡಿದರು ಏಕೆಂದರೆ ಅವರು ತಮ್ಮ ಮುಖ್ಯಸ್ಥರು ಮತ್ತು ಪ್ರಮುಖ ವ್ಯಕ್ತಿಗಳ ಹತ್ಯೆಯನ್ನು ಮರೆತಿರಲಿಲ್ಲ. ಆದ್ದರಿಂದ ರೋಮನ್ನರು, ಇರಾನಿಯನ್ನರು ಮತ್ತು ಅರಬ್ ಬುಡಕಟ್ಟುಗಳ ದೊಡ್ಡ ಸೈನ್ಯವು ಮುಸ್ಲಿಮರ ವಿರುದ್ಧ ಹೋರಾಡಲು ಹೊರಟಿತು. ಯೂಫ್ರೆಟಿಸ್ ನದಿಯನ್ನು ತಲುಪಿದ ಅವರು, ನೀವು ನದಿಯನ್ನು ದಾಟಿ ನಮ್ಮ ಕಡೆಗೆ ಬನ್ನಿ ಅಥವಾ ನಾವು ನದಿಯನ್ನು ದಾಟಿ ನಿಮ್ಮ ಕಡೆಗೆ ಬರುತ್ತೇವೆ ಎಂದು ಮುಸ್ಲಿಮರಿಗೆ ಸಂದೇಶವನ್ನು ಕಳುಹಿಸಿದನು. ಹಝ್ರತ್ ಖಾಲಿದ್(ರ) ಅವರಿಗೆ ಉತ್ತರಿಸಿದರು: ನೀವು ನಮ್ಮ ಬಳಿಗೆ ಬನ್ನಿ. ಯುದ್ಧಕ್ಕೆ ಬಂದಿದ್ದರೆ ಇಲ್ಲಿಗೆ ಬನ್ನಿ. ತದನಂತರ ಶತ್ರುಗಳ ಸೈನ್ಯವು ನದಿಯನ್ನು ದಾಟಿ ಇನ್ನೊಂದು ಬದಿಯಲ್ಲಿ ಇಳಿಯಲು ಪ್ರಾರಂಭಿಸಿತು. ಏತನ್ಮಧ್ಯೆ, ಹಜರತ್ ಖಾಲಿದ್ ಬಿನ್ ವಲೀದ್(ರ) ಅವರು ತಮ್ಮ ಸೈನ್ಯದ ಶ್ರೇಣಿಯನ್ನು ಉತ್ತಮವಾಗಿ ಮತ್ತು ನಿಯಮಿತವಾಗಿ ಸ್ಥಾಪಿಸಿದ್ದರು ಮತ್ತು ಶತ್ರುಗಳ ವಿರುದ್ಧ ಹೋರಾಡಲು ಅವರನ್ನು ಸಂಪೂರ್ಣವಾಗಿ ಸಿದ್ಧಪಡಿಸಿದ್ದರು. ಯುದ್ಧವು ಪ್ರಾರಂಭವಾಗುವ ಸಮಯ ಬಂದಾಗ, ರೋಮನ್ ಸೈನ್ಯದ ಸೇನಾಧಿಪತಿ ಎಲ್ಲಾ ಬುಡಕಟ್ಟುಗಳನ್ನು ಪ್ರತ್ಯೇಕಿಸಲು ಸೈನ್ಯಕ್ಕೆ ಆದೇಶಿಸಿದನು, ಯಾವ ಗುಂಪು ಅತ್ಯಂತ ಮಹೋನ್ನತ ಸಾಧನೆಯನ್ನು ಮಾಡಿದೆ ಎಂದು ನೋಡಲು, ಇಡೀ ಸೈನ್ಯವು ಆಯಾ ನಾಯಕರೊಂದಿಗೆ ಬೇರ್ಪಟ್ಟಿತು. ಯುದ್ಧ ಪ್ರಾರಂಭವಾದಾಗ, ಹಝ್ರತ್ ಖಾಲಿದ್ ಬಿನ್ ವಲೀದ್(ರ) ತನ್ನ ಸೈನ್ಯಕ್ಕೆ ಎಲ್ಲಾ ಕಡೆಯಿಂದ ಶತ್ರುಗಳನ್ನು ಸುತ್ತುವರೆದು ಒಂದೇ ಸ್ಥಳದಲ್ಲಿ ಒಟ್ಟುಗೂಡಿಸಲು ಆದೇಶಿಸಿದರು. ಚೇತರಿಸಿಕೊಳ್ಳಲು ಯಾವುದೇ ಅವಕಾಶವಿಲ್ಲದ ರೀತಿಯಲ್ಲಿ ಸತತ ದಾಳಿಗಳನ್ನು ಮಾಡಿರಿ. ಹೀಗೆ ಅವರ ಆದೇಶದ ಪ್ರಕಾರ ಸಂಭವಿಸಿತು. ಇಸ್ಲಾಮಿಕ್ ಪಡೆಗಳು ರೋಮನ್ ಸೈನ್ಯವನ್ನು ಸುತ್ತುವರೆದು ಒಂದೇ ಸ್ಥಳದಲ್ಲಿ ಜಮಾಯಿಸಿ ಅವರ ಮೇಲೆ ತೀವ್ರವಾಗಿ ದಾಳಿ ಮಾಡಲು ಪ್ರಾರಂಭಿಸಿದವು. ರೋಮನ್ನರು ಮತ್ತು ಅವರ ಮಿತ್ರರು ಮುಸ್ಲಿಮರ ವಿರುದ್ಧ ಬುಡಕಟ್ಟುಗಳನ್ನು ಪ್ರತ್ಯೇಕವಾಗಿ ಕಳುಹಿಸುವ ಮೂಲಕ ಯುದ್ಧವನ್ನು ವಿಸ್ತರಿಸಬಹುದೆಂದು ನಂಬಿದ್ದರು, ಮತ್ತು ಮುಸ್ಲಿಮರು ದಣಿದ ನಂತರ, ಅವರು ಪೂರ್ಣ ಶಕ್ತಿಯಿಂದ ಅವರ ಮೇಲೆ ದಾಳಿ ಮಾಡಿ ಅವರನ್ನು ಸಂಪೂರ್ಣವಾಗಿ ಸೋಲಿಸಬಹುದು ಎಂದು ನಂಬಿದ್ದರು, ಆದರೆ ಅವರ ಯೋಚನೆಯು ತಪ್ಪಾಯಿತು ಮತ್ತು ಅವರ ಎಲ್ಲಾ ತಂತ್ರಗಳು ಅವರ ಮೇಲೆ ಹಿಂದಿರುಗಿತು.

ಮುಸಲ್ಮಾನರು ಅವರನ್ನು ಒಂದೆಡೆ ಕೂಡಿಹಾಕಿ ದಾಳಿ ಮಾಡಲು ಆರಂಭಿಸಿದಾಗ ಅವರನ್ನು ಸಹಿಸಲಾರದೆ ಬಹುಬೇಗ ಸೋತು ರಣರಂಗದಿಂದ ಓಡಿಹೋದರು, ಆದರೆ ಮುಸಲ್ಮಾನರು ಇವರನ್ನು ಹೇಗೆ ಬಿಡುತ್ತಿದ್ದರು ಅವರು ಎಲ್ಲಿಗೆ ಹೋಗುತ್ತಾರೋ ಅವರನ್ನು ಹಿಂಬಾಲಿಸಿ ಅವರನ್ನು ಕೊಲ್ಲುತ್ತಿದ್ದರು. ಯುದ್ಧಭೂಮಿಯಲ್ಲಿ ಮತ್ತು ನಂತರದ ಹಿಂಬಾಲಿಸುವುದರಲ್ಲಿ ಈ ಯುದ್ಧದಲ್ಲಿ ಒಂದು ಲಕ್ಷ ಶತ್ರು ಪುರುಷರು ಉಪಯುಕ್ತರಾಗಿದ್ದರು ಎಂದು ಎಲ್ಲಾ ಇತಿಹಾಸಗಾರರು ಒಪ್ಪುತ್ತಾರೆ. ವಿಜಯದ ನಂತರ, ಹಝ್ರತ್ ಖಾಲಿದ್(ರ)ರವರು ಹತ್ತು ದಿನಗಳ ಕಾಲ ಫರಾಝ್‌ನಲ್ಲಿ ಉಳಿದುಕೊಂಡಿದ್ದರು ಮತ್ತು 25 ಧೀ ಖಾಅದಃ 12 ಹಿಜ್ರಿಯಲ್ಲಿ, ಅವರು ತಮ್ಮ ಸೈನ್ಯವನ್ನು ಹಿರಾಗೆ ಹಿಂತಿರುಗಲು ಆದೇಶಿಸಿದರು. (ಹಝ್ರತ್ ಸಯ್ಯದುನಾ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದಕರು, ಪುಟ-312-315, ಬುಕ್ ಕಾರ್ನರ್ ಶೋರೂಮ್ ಜ್ಹೇಲಂ) (ತಾರಿಖ್ ಅಲ್-ತಬರಿ, ಸಂಪುಟ-2, ಪುಟ-328, ದಾರ್ ಅಲ್-ಕಿತಾಬ್ ಅಲ್-ಇಲಮಿಯಾ ಬೈರುತ್) (ಮಜಮ್ ಅಲ್-ಬುಲ್ದಾನ್, ಸಂಪುಟ-4, ಪುಟ-276)

ಈ ಯುದ್ಧದ ಬಗ್ಗೆ ಪ್ರತಿಕ್ರಿಯಿಸುತ್ತಾ, ಹಝ್ರತ್ ಅಬುಬಕರ್(ರ)ರವರ ಖಿಲಾಫತ್ ಕಾಲಘಟ್ಟದಲ್ಲಿ ಮುಸ್ಲಿಮರು ರೋಮ್ ಮತ್ತು ಇರಾನ್ ಮತ್ತು ಅವರ ಅರಬ್ ಸೇನೆಗಳೆರಡನ್ನೂ ಮೊದಲ ಬಾರಿಗೆ ಎದುರಿಸಿದರು ಎಂದು ಲೇಖಕರೊಬ್ಬರು ಬರೆಯುತ್ತಾರೆ. ಇದರ ಹೊರತಾಗಿಯೂ, ಮುಸ್ಲಿಮರು ದೊಡ್ಡ ವಿಜಯವನ್ನು ಗಳಿಸಿದರು ಮತ್ತು ನಿಸ್ಸಂದೇಹವಾಗಿ ಈ ಯುದ್ಧವು ಐತಿಹಾಸಿಕ ಮತ್ತು ನಿರ್ಣಾಯಕ ಯುದ್ಧಗಳಲ್ಲಿ ಒಂದಾಗಿದೆ. ಇತರ ಪ್ರಮುಖ ಯುದ್ಧಗಳು ಸಾಧಿಸಿದ ಖ್ಯಾತಿಯನ್ನು ಅದು ಸಾಧಿಸದಿದ್ದರೂ, ಅದು ಇರಾನ್ ಅಥವಾ ರೋಮ್ ಅಥವಾ ಅರೇಬಿಯಾ ಮತ್ತು ಇರಾಕ್‌ಗೆ ಸೇರಿದವರಾಗಿದ್ದರೂ ನಾಸ್ತಿಕರ ಆಂತರಿಕ ಶಕ್ತಿಯನ್ನು ನಾಶಪಡಿಸಿತು. ಇರಾಖ್‌ನಲ್ಲಿ ಸೈಫುಲ್ಲಾ (ಅಲ್ಲಾಹನ ಖಡ್ಗ) ಹಝ್ರತ್ ಖಾಲಿದ್[ರ] ಮಾಡಿದ ಯುದ್ಧಗಳು ಕೊನೆಯ ಯುದ್ಧವಾಗಿತ್ತು. ಅನಂತರ ಇರಾನಿನ ಅರಸೊತ್ತಿಗೆಯು ವೈಭವ ಮಣ್ಣುಪಾಲಾಯಿತು. ಅನಂತರ ಇರಾನಿಗಳಿಗೆ ಮುಸ್ಲಿಮರನ್ನು ಭಯಪಡಿಸುವಂತಹ ಯುದ್ಧ ಸಾಮರ್ಥ್ಯ ಗಳಿಸಲಾಗಲಿಲ್ಲ. (ಸಯ್ಯಿದುನಾ ಅಬುಬಕರ್ ಸಿದ್ದೀಕ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಸಲಾಬಿ ಅವರಿಂದ, ಪುಟ-423)

ಉಲ್ಲೈಸ್‌ನಲ್ಲಿ ಮುಸಲ್ಮಾನರ ವಿಜಯದ ನಂತರ ಇರಾನ್ ಸೇನೆಯ ಬೆನ್ನು ಮುರಿಯುವ ರೀತಿಯಲ್ಲಿ ಫರಾಝ್ ಯುದ್ಧದ ಮಹತ್ವವನ್ನು ಇತಿಹಾಸಕಾರರೊಬ್ಬರು ವಿವರಿಸಿದ್ದಾರೆ. ಹಝ್ರತ್ ಖಾಲಿದ್ ಬಿನ್ ವಲೀದ್(ರ) ತನ್ನ ಮುನ್ನಡೆಯನ್ನು ಮುಂದುವರೆಸಿದರು ಮತ್ತು ಕ್ರಮವಾಗಿ ಅಮ್‌ಗೀಶಿಯಾ, ಹೀರಾ, ಅಂಬಾರ್, ಐನ್ ಅಲ್-ತಮರ್ ಮತ್ತು ದೌಮತ್ ಅಲ್-ಜಂದಾಲ್ ಅನ್ನು ವಶಪಡಿಸಿಕೊಂಡರು ಮತ್ತು ಅಂತಿಮವಾಗಿ ಫರಾಝ್ ಸ್ಥಳಕ್ಕೆ ತಲುಪಿದರು. ಫರಾಝ್ ಯುಫ್ರಟಿಸ್ ನದಿಯ ಮೇಲಿರುವ ಒಂದು ನಗರವಾಗಿದ್ದು, ಇದು ರೋಮನ್ ಸಾಮ್ರಾಜ್ಯದ ಗಡಿಗೆ ಬಹಳ ಹತ್ತಿರದಲ್ಲಿದೆ. ಇಲ್ಲಿ, ರೋಮನ್ನರು, ಇರಾನಿಯನ್ನರು ಮತ್ತು ಕ್ರಿಶ್ಚಿಯನ್ ಬುಡಕಟ್ಟುಗಳ ಸಂಯುಕ್ತ ಸೈನ್ಯವು ಮುಸ್ಲಿಮರ ವಿರುದ್ಧ ಹೋರಾಡಿತು, ಆದರೆ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಈ ದೊಡ್ಡ ನಾಸ್ತಿಕರ ಗುಂಪನ್ನು ಸಹ ಸೋಲಿಸಿದರು. ಇರಾಕ್ ಅನ್ನು ಗೆದ್ದ ಸೈಯದುನಾ ಖಾಲಿದ್ ಬಿನ್ ವಲೀದ್(ರ) ಒಂದು ವರ್ಷ ಮತ್ತು ಎರಡು ತಿಂಗಳಲ್ಲಿ ಇರಾಕ್ ಅನ್ನು ವಶಪಡಿಸಿಕೊಂಡರು. ಅವರೊಂದಿಗೆ ಒಟ್ಟು ಹತ್ತು ಸಾವಿರ ಸೈನಿಕರು ಮತ್ತು ಇತರ ಇಸ್ಲಾಮಿಕ್ ಸೇನಾಧಿಪತಿಗಳೊಂದಿಗೆ ಹೆಚ್ಚುಕಡಿಮೆ ಅಷ್ಟು ಸೈನಿಕರು ಇದ್ದರು. ಈ ಅವಧಿಯಲ್ಲಿ ಇಂತಹ ಸಣ್ಣ ಸೈನ್ಯವು ಮಾಡಿದ ಅದ್ಭುತ ಸಾಹಸಗಳು ಇತಿಹಾಸದಲ್ಲಿ ಅಪ್ರತಿಮವಾಗಿವೆ. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಪ್ರತಿ ಯುದ್ಧದಲ್ಲಿ ಭಾಗವಹಿಸಿದರು, ಅವರು ಎಂದಿಗೂ ಸೋಲನ್ನು ಎದುರಿಸಬೇಕಾಗಿಲ್ಲ. ಪ್ರವಾದಿ(ಸ) ಅವರ ಆಸ್ಥಾನದಿಂದ ಅವರಿಗೆ ಸೈಫುಲ್ಲಾ, ಅಂದರೆ ಅಲ್ಲಾಹನ ಖಡ್ಗ ಎಂಬ ಬಿರುದನ್ನು ನೀಡಲಾಯಿತು ಮತ್ತು ಅವರು ಈ ಬಿರುದಿನ ಹಕ್ಕನ್ನು ಸಹ ಪೂರೈಸಿದರು. ನಂತರ ಅವರು ಸ್ವಾಧೀನಪಡಿಸಿಕೊಂಡ ಪ್ರದೇಶಗಳಲ್ಲಿ ಅವರು ಎಂತಹ ಉತ್ತಮ ವ್ಯವಸ್ಥೆಯನ್ನು ಮಾಡಿದರು ಎಂದರೆ ಜನರು ಇರಾನ್ ಸರ್ಕಾರಕ್ಕಿಂತ ಅರಬ್ ಸರ್ಕಾರವನ್ನು ಆದ್ಯತೆ ನೀಡಲು ಪ್ರಾರಂಭಿಸಿದರು. ಆದಾಗ್ಯೂ, ಇರಾಕ್‌ನ ಕೊನೆಯ ಗೆಲುವು ಫರಾಝ್‌ನ ವಿಜಯವಾಗಿದೆ. ಹಝ್ರತ್ ಖಾಲಿದ್(ರ) ಹತ್ತು ದಿನಗಳ ಕಾಲ ಫರಾಝ್‌ನಲ್ಲಿಯೇ ಇದ್ದರು. ನಂತರ ಅವರು ಅರ್ಧದಷ್ಟು ಸೈನ್ಯವನ್ನು ತೆಗೆದುಕೊಂಡು ಸಿರಿಯಾದ ಮುಂಭಾಗಕ್ಕೆ ಹೊರಟರು.

ಇರಾಖ್ ದೇಶವನ್ನು ಆಕ್ರಮಣ ಮಾಡಲು ಮುಸ್ಲಿಮರಿಗೆ ಸಾಧ್ಯವಾದುದು ಬಹಳ ದೊಡ್ಡ ಯಶಸ್ಸಿನ ಚಿಹ್ನೆಯಾಗಿತ್ತು. ಅಲ್ಲಿ ಮುಸ್ಲಿಮ್ ಸೈನ್ಯವು, ಸಂಖ್ಯೆಯಲ್ಲೂ ಯುದ್ಧ ಸಾಮಗ್ರಿಗಳಲ್ಲೂ ಹೆಚ್ಚು ಶಕ್ತಿಶಾಲಿಗಳಾಗಿದ್ದ ಇರಾನಿ ಸೈನ್ಯವನ್ನು ಒಂದರ ನಂತರ ಇನ್ನೊಂದರಂತೆ ವಿನಾಶಕಾರಿಯಾದ ರೀತಿಯಲ್ಲಿ ಸೋಲಿಸಿತು. ನೆನಪಿಡಬೇಕಾದುದೇನೆಂದರೆ ಇರಾನಿ ಸೈನ್ಯ ಆ ಕಾಲಘಟ್ಟದಲ್ಲಿ ಅತ್ಯಂತ ಹೆಚ್ಚು ಯುದ್ಧ ಸಾಮರ್ಥ್ಯ ಹೊಂದಿದ ಸೈನ್ಯವಾಗಿತ್ತು. ಹಝ್ರತ್ ಅಬೂಬಕರ್ ಸಿದ್ದೀಖ್[ರ]ರವರ ಕಾಲಘಟ್ಟದಲ್ಲಿ ಸಂಭವಿಸಿದ ಈ ವೈಭವಶಾಲಿ ಘಟನೆಯ ಬೇರೆ ಉದಾಹರಣೆ ಚರಿತ್ರೆಯಲ್ಲಿ ಕಾಣುವುದು ಅಸಂಭವ್ಯವಾಗಿದೆ. ರಣ ಕ್ಷೇತ್ರದಲ್ಲಿ ಲಭಿಸಿದ ಎಲ್ಲ ಜಯಗಳು ಹಝ್ರತ್ ಖಾಲಿದ್ ಬಿನ್ ವಲೀದ್[ರ] ಮತ್ತು ಅವರ ಸಂಗಡಿಗರಾದ ಸೇನಾಧಿಪತಿಗಳಿಂದ ಲಭಿಸಿದುದಾಗಿವೆ ಎಂಬುದರ ಬಗ್ಗೆ ಸಂಶಯವಿಲ್ಲ. ಆದರೆ ಈ ಎಲ್ಲ ವಿಜಯಗಳು ಹಝ್ರತ್ ಅಬೂಬಕರ್ ಸಿದ್ದೀಖ್[ರ]ರವರ ಘನವೆತ್ತ ವ್ಯಕ್ತಿತ್ವದ ನೇತೃತ್ವದಲ್ಲಿ ಲಭಿಸಿದುದಾಗಿವೆ ಎಂಬ ವಾಸ್ತವಿಕತೆಯನ್ನು ನಿರಾಕರಿಸಲಾಗದು. ಚರಿತ್ರೆ ಸಾಕ್ಷ್ಯ ಹೇಳುವುದೇನೆಂದರೆ ಯಾವುದೇ ಸೇನಾಧಿಪತಿಯು ತನ್ನ ದೃಢವಿಶ್ವಾಸ, ಏಕಾಗ್ರತೆ, ವಿಧೇಯತೆ ಮತ್ತು ನಿಷ್ಠೆಯನ್ನು ದೇಶವನ್ನಾಳುವ ದೊರೆಯ ವ್ಯಯಕ್ತಿಕ ಉತ್ತಮ ಗುಣಗಳು ಮತ್ತು ಉನ್ನತ ಶ್ರೇಣಿಯ ಕಾರ್ಯ ನಿರ್ವಾಹಕ ಶಕ್ತಿಗಳಿಂದ ಪ್ರಭಾವಿತನಾಗಿಯಲ್ಲದೆ ಪ್ರಕಟಿಸಲಾರ.

ಇರಾಕ್ ವಶಪಡಿಸಿಕೊಳ್ಳಲು ಅಪನಂಬಿಕೆ ಮತ್ತು ಧರ್ಮಭ್ರಷ್ಟತೆ ಮತ್ತು ದಂಗೆಯ ಯುದ್ಧಗಳ ಎಲ್ಲಾ ಹಂತಗಳಲ್ಲಿ ಹಝ್ರತ್ ಅಬುಬಕರ್ ಸಿದ್ದೀಕ್(ರ) ತೋರಿಸಿದ ವೈಯಕ್ತಿಕ ಉದಾಹರಣೆ, ಉತ್ತಮ ನಿರ್ವಹಣೆ ಮತ್ತು ಸ್ವಾತಂತ್ರ್ಯವು ಮುಸ್ಲಿಂ ಉಮ್ಮಾದ ಹೃದಯಗಳನ್ನು ಮಹಾನ್ ತ್ಯಾಗಕ್ಕಾಗಿ ಬೆಚ್ಚಗಾಗಿಸಿತು. ಅವರ ಎಲ್ಲಾ ಆದೇಶಗಳು ಮತ್ತು ಸೂಚನೆಗಳು ಸಮಗ್ರತೆ ಮತ್ತು ತಿಳುವಳಿಕೆಯಿಂದ ತುಂಬಿತ್ತು ಅವರ ವೈಯಕ್ತಿಕ ಪಾತ್ರವು ಅವರಿಗಿಂತ ಹೆಚ್ಚು ವಿಶಿಷ್ಟವಾಗಿತ್ತು. ಒಬ್ಬ ನಾಯಕ ಮೊದಲಿನಿಂದ ಕೊನೆಯವರೆಗೆ ವೈಯಕ್ತಿಕ ಪ್ರತಿಷ್ಠೆ ಅಥವಾ ವೈಯಕ್ತಿಕ ಒತ್ತಡಕ್ಕೆ ಮಣಿದು ತಾನು ಹೊರಡಿಸಿದ ಆದೇಶ ಮತ್ತು ನಿಬಂಧನೆಗಳನ್ನು ಬದಲಾಯಿಸಿದ ಸಂದರ್ಭಗಳಿಲ್ಲದೆ ಅದಕ್ಕಿಂತ ಹೆಚ್ಚಿನ ಸ್ವಾತಂತ್ರ್ಯ ಮತ್ತು ದೃಢತೆಯ ಪುರಾವೆ ಏನು ತೋರಿಸಬಹುದು. ಇಷ್ಟೇ ಅಲ್ಲ, ಪ್ರತಿಭಾವಂತ ಅಧೀನ ಅಧಿಕಾರಿಗಳ ಕಾರ್ಯಕ್ಷಮತೆಗೆ ಉನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳಲು ಮತ್ತು ಸ್ವಯಂ ತ್ಯಾಗ ಮತ್ತು ತ್ಯಾಗದ ಮನೋಭಾವವನ್ನು ಹೆಚ್ಚಿಸಲು ಹಝ್ರತ್ ಅಬೂಬಕರ್(ರ) ಅವರು ಪ್ರಸ್ತುತಪಡಿಸಿದ ಉತ್ತಮ ನಂಬಿಕೆ ಮತ್ತು ವಿಶ್ವಾಸದ ಉದಾಹರಣೆಯನ್ನು ಕಂಡುಹಿಡಿಯಲಾಗುವುದಿಲ್ಲ.

ಸಿದ್ದಿಕ್ ಅಕ್ಬರ್(ರ) ಅವರಂತಹ ನಾಯಕನ ಮಾತುಗಳು, ಆಜ್ಞೆಗಳು ಮತ್ತು ಮೌಲ್ಯಗಳಿಗಾಗಿ ಸ್ವತಃ ಅತ್ಯಂತ ನಿಷ್ಠೆ ಮತ್ತು ಅವಿಶ್ರಾಂತ ತ್ಯಾಗಕ್ಕೆ ಜೀವಂತ ಉದಾಹರಣೆಯಾಗಿರುವ ಅಂತಹ ನಾಯಕನ ಆದೇಶಗಳನ್ನು ಕಾರ್ಯಗತಗೊಳಿಸಲು ಯಾವುದೇ ಅಧೀನದಲ್ಲಿರುವವರು ಯಾವುದೇ ಪ್ರಯತ್ನವನ್ನು ತೆಗೆದುಕೊಳ್ಳುತ್ತಾರೆಯೇ? ಸಯ್ಯಿದುನಾ ಹಝ್ರತ್ ಖಾಲಿದ್(ರ) ರವರ ಸೈನ್ಯ ಸಾಮರ್ಥ್ಯವು ಅವರನ್ನು ವಿಶ್ವದ ಮಹಾನ್ ಸೇನಾಧಿಪತಿಗಳ ಶ್ರೇಣಿಯಲ್ಲಿ ಸರಿಯಾಗಿ ಇರಿಸುತ್ತದೆ. ಸಯ್ಯಿದುನಾ ಹಝ್ರತ್ ಖಾಲಿದ್(ರ) ಅವರು ವಿರೋಧಿಗಳನ್ನು ಎದುರಿಸಲು ಅಳವಡಿಸಿಕೊಂಡ ಕಾರ್ಯತಂತ್ರದ ತತ್ವಗಳು ಸಯ್ಯದುನಾ ಖಾಲಿದ್(ರ) ಅವರು ರೂಪಿಸಿದ ತತ್ವಗಳು ಎಂದು ಹೇಳುವುದು ಹೆಚ್ಚು ಸೂಕ್ತವಾಗಿರುತ್ತದೆ ಸೈನ್ಯದ ಇತಿಹಾಸದಲ್ಲಿ ಹೊಳೆಯುವ ಅಧ್ಯಾಯಗಳಾಗಿವೆ ಎಂದು ಹೇಳಬಹುದು.

ಮುಸ್ಲಿಮರ ಹೋರಾಟದ ಪರಾಕ್ರಮ ಮತ್ತು ಅವರ ಸೈನ್ಯದ ನಿರಂತರ ಚಲನೆಯು ಸೈಯದುನಾ ಹಝ್ರತ್ ಖಾಲಿದ್(ರ) ಅವರ ಧೈರ್ಯಶಾಲಿ ಯೋಜನೆಗಳಲ್ಲಿ ಯಶಸ್ವಿಯಾಗಲು ಪ್ರಮುಖ ಸಂಪನ್ಮೂಲಗಳಾಗಿವೆ. ಈ ಎರಡೂ ವಿಷಯಗಳನ್ನು ಸಯ್ಯಿಸುನ ಖಾಲಿದ್(ರ) ಅವರು ತಮ್ಮ ಸಹಿಷ್ಣುತೆಯ ಗರಿಷ್ಠವಾಗಿ ಬಳಸಿಕೊಂಡರು ಮತ್ತು ಅವರು ತಮ್ಮ ಸೈನಿಕರನ್ನು ಎಂದಿಗೂ ನಿರಾಸೆಗೊಳಿಸದ ಕಾರಣ ಮಾತ್ರ ಇದು ಸಾಧ್ಯವಾಯಿತು. ಅವರು ಅನುಭವಿಸದ ಕಷ್ಟಕ್ಕೆ ಅವರು ತಮ್ಮ ಸೈನಿಕರನ್ನು ಎಂದೂ ಹಾಕಲಿಲ್ಲ. ಇಸ್ಲಾಮಿನ ಚರಿತ್ರೆಯಲ್ಲಿ ಪ್ರಥಮ ಖಲೀಫರಿಗೆ ಮಹತ್ವಪೂರ್ಣವಾದ ಸ್ಥಾನವಿರುವಂತೆಯೇ ಅವರ ಜೊತೆಗೆ ಸೈಯ್ಯದುನಾ ಹಝ್ರತ್ ಖಾಲಿದ್(ರ) ಪ್ರಸಿದ್ಧ ಸೇನಾ ನಾಯಕರಲ್ಲಿ ವಿದೇಶ ಪ್ರದೇಶಗಳನ್ನು ವಶಪಡಿಸಿಕೊಂಡವರಲ್ಲಿ ಪ್ರಥಮ ವಿಖ್ಯಾತ ಸೇನಾಧಿಪತಿಗಳಲ್ಲಿ ಪ್ರಥಮರಾಗಿದ್ದಾರೆ. ಅವರು ಲೋಕದ ರಾಜಕೀಯ ಮತ್ತು ಧಾರ್ಮಿಕ ನಕಾಶೆಗೆ ಹೊಸ ರೂಪ ನೀಡುವುದರಲ್ಲಿ ಹಝ್ರತ್ ಅಬೂಬಕರ್(ರ)ರವರ ಬಲಗೈಯಾಗಿದ್ದರು. ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಧಾರ್ಮಿಕ ಮತ್ತು ರಾಜಕೀಯ ನೇತೃತ್ವದಲ್ಲಿ ಹಾಗೂ ಹಝ್ರತ್ ಖಾಲಿದ್(ರ)ರವರ ಸೈನಿಕ ನೇತೃತ್ವದಲ್ಲಿ ಮುಸ್ಲಿಮರು ಇರಾಖ್ ದೇಶದ ಒಂದು ತುದಿಯಿಂದ ಇನ್ನೊಂದು ತುದಿಯ ತನಕ ವೇಗವಾಗಿ ಬೀಸುವ ತೂಫಾನಿನ ಹಾಗೆ ಆವರಿಸಿದರು. ಅವರು ಇನ್ನೊಂದು ಸಾಮ್ರಾಜ್ಯದ ಮೇಲೆ ಆಕ್ರಮಣ ಮಾಡುವವರಾಗಿದ್ದರು. ಅದು ಪೌರಾತ್ಯ ರೋಮನ್ ಸಾಮ್ರಾಜ್ಯವಾಗಿತ್ತು. (ಸೀರತ್ ಸಯ್ಯದುನಾ ಸಿದ್ದೀಖೆ ಅಕ್ಬರ್(ರ), ಅಬುನ್ನಸರ್ ಅನುವಾದಕರು, ಪುಟ–679–681)

ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಕಾಲಘಟ್ಟದ ವಿವರಣೆಯ ಸ್ವಲ್ಪ ಭಾಗ ಇನ್ನೂ ಬಾಕಿಯಿದೆ – ಇನ್‌ಶಾಅಲ್ಲಾಹ್ ಮುಂದೆ ವಿವರಿಸುವೆನು.

ಮುಂದಿನ ಶುಕ್ರವಾರ ಇನ್‌ಶಾಅಲ್ಲಾಹ್ ಬ್ರಿಟನಿನ ಜಲ್ಸ ಸಾಲಾನ ಪ್ರಾರಂಭವಾಗಲಿದೆ. ಈ ಜಲ್ಸ ಎಲ್ಲ ರೀತಿಗಳಲ್ಲೂ ಅನುಗ್ರಹಭರಿತವನ್ನಾಗಿ ಅಲ್ಲಾಹನು ಮಾಡಲಿ ಎಂದು ಪ್ರಾರ್ಥಿಸಿರಿ. ಈ ಜಲ್ಸದಲ್ಲಿ ಭಾಗವಹಿಸಲು ಆಗಮಿಸುವವರ ಪ್ರಯಾಣ ಸುಖಕರವಾಗಿರಲಿ. ಜಲ್ಸದಲ್ಲಿ ಡ್ಯೂಟಿಯಲ್ಲಿರುವವರಿಗೋಸ್ಕರ ಸಹ ಪ್ರಾರ್ಥಿಸಿರಿ. ಅವರೆಲ್ಲರೂ ಸರಿಯಾದ ರೀತಿಯಲ್ಲಿ ತಮ್ಮ ಹೊಣೆಗಾರಿಕೆಗಳನ್ನು ಈಡೇರಿಸಲು ಅವರಿಗೆ ಅಲ್ಲಾಹನು ಭಾಗ್ಯ ದಯಪಾಲಿಸಲಿ ಎಂದು ಪ್ರಾರ್ಥಿಸಿರಿ. ಹಿಂದಿನ ವರ್ಷ ಚಿಕ್ಕ ಪ್ರಮಾಣದಲ್ಲಿ ಜಲ್ಸ ಜರಗಿತ್ತಾದರೂ ಮೂರು ವರ್ಷಗಳ ನಂತರ ಪರಿಪೂರ್ಣ ರೂಪದಲ್ಲಿ ಜಲ್ಸ ಈ ವರ್ಷ ಜರಗುತ್ತಿದೆ. ಆದುದರಿಂದ ಕೆಲವು ಅಡಚಣೆಗಳು ಸಂಭವಿಸಬಹುದಾಗಿದೆ. ಜಲ್ಸದ ವ್ಯವಸ್ಥೆಯ ಕಷ್ಟಗಳು ಮತ್ತು ಇತರ ಯಾವುದೇ ರೀತಿಯ ಕಷ್ಟಗಳು ದೂರ ಸರಿಯುವಂತೆ ಅಲ್ಲಾಹನು ಮಾಡಲಿ – **ಆಮೀನ್.**

***********

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಕಷ್ಟವಾಗಬಹುದು. ನಾವು ಅವರಿಗೆ ಆ 70 ದಿನಗಳ ಸಾಕ್ಷ್ಯ ನೀಡುವುದು ಇವೆಲ್ಲಾ ಕಾರಣಗಳಿಂದಾಗಿ ನಾನು ಅಲ್ಲಾಹನಿಂದ ನೆರವು ಯಾಚಿಸುವುದೇ ಉಚಿತ ಎಂದು ಬಾವಿಸಿದೆ. ಒಂದು ಸರಳವಾದ ಖಸೀದ ಬರೆಯಲು ರೂಹುಲ್ ಕುದ್ದೂಸ್ (ಪವಿತ್ರಾತ್ಮ) ನಿಂದ ನನಗೆ ನೆರವು ನೀಡು. ಅದರಲ್ಲಿ ಖಸೀದ ಎಷ್ಟು ದಿನಗಳಲ್ಲಿ ಬರೆಯಲಾಗಿದೆ ಎಂದು ತಿಳಿಯಲು ಕಷ್ಟವಾಗದು. ಹಾಗೆ ನಾನು ಪ್ರಾರ್ಥಿಸಿದೆ. ಓ ಸರ್ವ ಸಾಮರ್ಥ್ಯವುಳ್ಳ ಅಲ್ಲಾಹನೇ! ನನಗೆ ದೃಷ್ಟಾಂತ ರೂಪದಲ್ಲಿ ಒಂದು ಖಸೀದ ಬರೆಯುವ ಭಾಗ್ಯ ದಯಪಾಲಿಸು. ಆ ಪ್ರಾರ್ಥನೆ ಸ್ವೀಕಾರವಾಯಿತು. ಪವಿತ್ರಾತ್ಮದಿಂದ ಪವಾಡ ಸದೃಶ್ಯ ರೂಪದಲ್ಲಿ ನನಗೆ ನೆರವು ದೊರೆಯಿತು ಮತ್ತು ಐದು ದಿನಗಳಲ್ಲಿಯೇ ಆ ಖಸೀದ ಬರೆದು ಮುಗಿಸಿದೆ. ಒಂದು ವೇಳೆ ಬೇರೆ ಕಾರ್ಯ ಅಡ್ಡಬರದೇ ಇರುತ್ತಿದ್ದರೇ ಆ ಖಸೀದ ಒಂದೇ ದಿನದಲ್ಲಿ ಮುಗಿಸುತ್ತಿದ್ದೆ. ಮುದ್ರಣಗೊಳ್ಳಲು ತಡವಾಗದಿರುತ್ತಿದ್ದರೆ 9 ನವೆಂಬರ್ 1902 ರಂದೇ ಆ ಖಸೀದ ಮುದ್ರಣಗೊಂಡು ಪ್ರಕಟವಾಗುತಿತ್ತು.

ಇದೊಂದು ಮಹೋನ್ನತವಾದ ದೃಷ್ಟಾಂತವಾಗಿದೆ. ಸ್ವಯಂ ಮೌಲ್ವಿ ಸನಾವುಲ್ಲಾ ಸಾಹಿಬ್ ಅದಕ್ಕೆ ಸಾಕ್ಷಿಯಾಗಿದ್ದಾರೆ. ಏಕೆಂದರೆ, ಖಸೀದವೇ ಸಾಕ್ಷಿಯಾಗಿದೆ. ಅದು ಅವರ ಚರ್ಚೆಯ ನಂತರ ಬರೆಯಲಾಗಿದೆ. ಚರ್ಚೆಯು 29, 30 ಅಕ್ಟೋಬರ್‌ನಲ್ಲಿ ನಡೆದಿತ್ತು. ನಮ್ಮ ಮಿತ್ರರಿಗೆ ಅಲ್ಲಿಂದ ಮರಳಿ ಬಂದು 9 ನವೆಂಬರ್ 1902 ರ ನಂತರ ಈ ಖಸೀದ ಬರೆಯಲು ಪ್ರಾರಂಭಿಸಲಾಗಿತ್ತು. 12, ನವೆಂಬರ್ 1902 ರಂದು ಉರ್ದು ಅನುವಾದದೊಂದಿಗೆ ಮುಗಿಸಲಾಗಿತ್ತು. ಹಾಗೆ ನಾನು ಮನಃ ಪೂರ್ವಕವಾಗಿ ಬಲ್ಲೆ ಅಲ್ಲಾಹನ ಪುಷ್ಟಿಯ ಅದೊಂದು ಬಹುದೊಡ್ಡ ದೃಷ್ಟಾಂತವಾಗಿದೆ. ಅದರ ಉದ್ದೇಶ ವಿರೋಧಿಗಳಿಗೆ ನಾಚುವಂತೆ ಮತ್ತು ನಿರುತ್ತರಗೊಳಿಸುವುದೇ ಆಗಿತ್ತು. ಆದುದರಿಂದ ಆ ದೃಷ್ಟಾಂತವನ್ನು ಹತ್ತು ಸಾವಿರ ರೂಪಾಯಿಗಳ ಬಹುಮಾನದೊಂದಿಗೆ ಮೌಲ್ವಿ ಸನಾವುಲ್ಲಾಹ್ ಮತ್ತು ಅವರ ಸಹವೃತ್ತಿಗಳ ಮುಂದೆ ಪ್ರಸ್ತುತಪಡಿಸುತ್ತಿದ್ದೇನೆ. ಅವರು ಅದೇ ಅವಧಿಯಲ್ಲಿ ಅಂದರೆ ಐದು ದಿನಗಳಲ್ಲಿ ಇಂತಹ ಖಸೀದ ಅದೇ ರೀತಿಯ ಉರ್ದು ಅನುವಾದದೊಂದಿಗೆ ರಚಿಸಿ ಪ್ರಕಟಿಸಿದರೆ ಅದುವೇ ಒಂದು ದೃಷ್ಟಾಂತವಾಗುವುದು ಆಗ ನಾನು ತಡವಿಲ್ಲದೇ ಹತ್ತು ಸಾವಿರ ರೂಪಾಯಿಗಳನ್ನು ಅವರಿಗೆ ಕೊಡುವೆನು. ಅದನ್ನು ಮುದ್ರಿಸಲು ಬೇಕಾದರೆ ಇನ್ನೊಂದು ವಾರದ ಅವಕಾಶ ನೀಡುವೆನು. ಒಟ್ಟು ಹನ್ನೆರಡು ದಿನಗಳಿವೆ ಮತ್ತು ಅಂಚೆಗೋಸ್ಕರವೇ ಅವರ ಹಕ್ಕಿದೆ. ಹಾಗೆ ಆ ತಾರೀಖಿನಿಂದ ಈ ಖಸೀದ ಮತ್ತು ಅದರ ಉರ್ದು ಅನುವಾದ ಅವರ ಬಳಿ ತಲುಪಬೇಕು. ಹದಿನಾಲ್ಕು ದಿನಗಳ ತನಕ ಅಷ್ಟೇ ಕವನ ಸಾಲುಗಳು ಸಾಹಿತ್ಯ ರೂಪದಲ್ಲಿ ಅಷ್ಟೇ ಪ್ರಮಾಣದಲ್ಲಿ ಮತ್ತು ಸಂಖ್ಯೆಯಲ್ಲಿ ಕಡಿಮೆ ಆಗದಂತೆ ಪ್ರಕಟಪಡಿಸಬೇಕು. ಆಗ ನಾನು ಅವರಿಗೆ ಹತ್ತು ಸಾವಿರ ರೂಪಾಯಿ ಬಹುಮಾನ ನೀಡುವೆನು. ಮೌಲ್ವಿ ಮುಹಮ್ಮದ್ ಹುಸೇನ್ ಸಾಹಿಬರಿಂದ ಅಥವಾ ಇತರರಿಂದ ಬೇಕಾದರೂ ಸಹಾಯ ಪಡೆಯಬಹುದು.

**ಸನಾವುಲ್ಲ ಮತ್ತು ಅವರ ಎಲ್ಲಾ ಮೌಲ್ವಿಗಳಿಂದ ಐದು ದಿನಗಳಲ್ಲಿ ಇಂತಹ ಖಸೀದ ಬರೆಯಲು ಎಂದೂ ಸಾಧ್ಯವಾಗಲಿಕ್ಕಿಲ್ಲ. ಏಕೆಂದರೆ ಅಲ್ಲಾಹನು ಅವರ ಲೇಖನಿಗಳನ್ನು ಮುರಿದುಹಾಕುವನು ಮತ್ತು ಅವರ ಹೃದಯಗಳನ್ನು ಮಂದಗೊಳಿಸುವನು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನನ್ನ ಒಂದು ಜಾಹೀರಾತಿನಲ್ಲಿ ವಾರ್ತೆ ನೀಡಲಾಗಿದೆ. ಡಿಸೆಂಬರ್ 1902 ರ ಕೊನೆಯ ಭಾಗದಲ್ಲಿ ಯಾವುದೋ ಒಂದು ಪವಾಡ ಸದೃಶ್ಯ ದೃಷ್ಟಾಂತ ಗೋಚರವಾಗುವುದು ಎಂಬ ಭವಿಷ್ಯವಾಣಿ ನೀಡಲಾಗಿದೆ. ಆ ದಿಸೆಯಿಂದಾದರೂ ಪ್ರಯತ್ನ ಮಾಡಬೇಕು. ಅದಾಗ್ಯೂ ಆ ದೃಷ್ಟಾಂತ ಬೇರೆ ರೂಪಗಳಲ್ಲಿ ಜಾಹೀರಾಗಿದೆ. ಆದರೆ ಮೌಲ್ವಿ ಸನಾವುಲ್ಲ ಮತ್ತು ಇತರ ಸಂಬಂಧಿಕರು ಈ ಅವಧಿಯ ಒಳಗೆ ಈ ಖಸೀದ ಮತ್ತು ಅದರ ಉರ್ದು ಅನುವಾದದ ಉತ್ತರ ಬರೆಯಲಿಲ್ಲ. ಅಥವಾ ಬರೆಸಲಾಗಲಿಲ್ಲ ಎಂದಾದರೆ ಆ ಮೂಲಕ ಈ ದೃಷ್ಟಾಂತ ಪೂರ್ಣಗೊಳ್ಳುವುದು. ಆದುದರಿಂದ ಅವರಿಗೆ ಅನಿವಾರ್ಯವೆಂದರೆ ಅವರು ನನ್ನ ಕಾರ್ಯಗಳನ್ನು ಮನುಷ್ಯನ ಕಾರ್ಯಗಳೆಂದು ಭಾವಿಸುವುದಾದರೆ ಅದರ ಎದುರು ಸ್ಪರ್ಧಿಸಿ ಈ ದೃಷ್ಟಾಂತವನ್ನು ಯಾವುದೇ ರೀತಿಯಲ್ಲಿ ತಡೆದು ತೋರಿಸಲಿ. ನೋಡಿರಿ. ನಾನು ಆಣೆ ಮಾಡಿ ಹೇಳುತ್ತೇನೆ. ಅವರು ಒಬ್ಬಂಟಿಗರಾಗಿ ಅಥವಾ ಇತರರ ಸಹಾಯಗಳೊಂದಿಗೆ ನಿಗದಿತ ಅವಧಿಯ ಒಳಗೆ ನನ್ನ ಖಸೀದ ಮತ್ತು ಉರ್ದು ಅನುವಾದ ಅನ್ವಯ, ಅದರ ಸಂಖ್ಯೆಗೆ ಅನುಗುಣವಾಗಿ ಖಸೀದ ಮುದ್ರಿಸಿ ಪ್ರಕಟಿಸಿದರೆ, ಪಡೆದ ತಾರೀಖಿನಿಂದ ಹನ್ನೆರಡು ದಿನಗಳ ಒಳಗೆ ಅಂಚೆಯ ಮೂಲಕ ನನ್ನ ಬಳಿ ಕಳುಹಿಸಿಕೊಟ್ಟರೆ, ಕೇವಲ ಹತ್ತು ಸಾವಿರ ರೂಪಯಿ ಬಹುಮಾನ ಅಷ್ಟೇ ನೀಡುವುದಲ್ಲ. ಬದಲು ಈ ವಿಜಯದಿಂದ ನನ್ನ ಸುಳ್ಳುಗಾರಿಕೆಯು ಸಾಬೀತಾಗುವುದು. ಈ ಪರಿಸ್ಥಿತಿಯಲ್ಲಿ ಮೌಲ್ವಿ ಸನಾವುಲ್ಲ ಸಾಹಿಬ್ ಮತ್ತು ಅವರ ಮಿತ್ರರಿಗೆ ವಿನಾಕಾರಣ ಸುಳ್ಳು ಹೇಳುವ ಅಗತ್ಯವಿರುವುದಿಲ್ಲ. ಮತ್ತು ಪುಕ್ಕಟೆಯಲ್ಲಿ ಅವರ ವಿಜಯ ಸಾಬೀತಾಗುವುದು. ಇಲ್ಲದಿದ್ದರೆ ಅವರಿಗೆ ಎಂದೂ ನನ್ನನ್ನು ಸುಳ್ಳುಗಾರ ಎಂದು ಹೇಳುವ ಹಕ್ಕು ಇರುವುದಿಲ್ಲ. ಅಥವಾ ನನ್ನ ದೃಷ್ಟಾಂತಗಳಿಗೆ ಧಿಕ್ಕರಿಸುವ ಹಕ್ಕು ಇರುವುದಿಲ್ಲ. ನೋಡಿರಿ. ನಾನು ಭೂಮ್ಯಾಕಾಶವನ್ನು ಸಾಕ್ಷಿಯನ್ನಾಗಿರಿಸಿ ಹೇಳುತ್ತೇನೆ. ಇಂದಿನ ತಾರೀಖಿನಿಂದ ಈ ದೃಷ್ಟಾಂತವನ್ನು ಮಾನದಂಡವಾಗಿ ಇರಿಸುತ್ತೇನೆ. ನಾನು ಸತ್ಯವಂತನೆಂದಾದರೆ ಮತ್ತು ಅಲ್ಲಾಹನು ಬಲ್ಲನು. ನಾನು ಸತ್ಯವಂತನೆಂದ ಮೇಲೆ ಮೌಲ್ವಿ ಸನಾವುಲ್ಲಾ ಮತ್ತು ಅವರ ಎಲ್ಲ ಮೌಲ್ವಿಗಳಿಗೆ ಐದು ದಿನಗಳಲ್ಲಿ ಇಂತಹ ಖಸೀದ ಬರೆಯಲು ಮತ್ತು ಉರ್ದು ಅನುವಾದದ ವಿರುದ್ಧ ಬರೆಯಲು ಎಂದೂ ಸಾಧ್ಯವಿಲ್ಲ. ಏಕೆಂದರೆ ಅಲ್ಲಾಹನು ಅವರ ಲೇಖನಿಗಳನ್ನು ಮುರಿದು ಹಾಕುವನು. ಮತ್ತು ಅವರ ಹೃದಯಗಳನ್ನು ಮಂದಗೊಳಿಸುವನು. (ಅದೇ ಪುಟ 145–148).

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅದೇ ಸವಾಲಿನ ಇನ್ನಷ್ಟು ವಿವರ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 01 September 2022, Issue No. 35

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)


## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಐರ್ಲ್ಯಾಂಡ್ನ ಪ್ರವಾಸ (ಸೆಪ್ಟೆಂಬರ್ 2014)*

(ಬದರ್ ಸಂಚಿಕೆ 34ರ ಉಳಿದ ಭಾಗ)

### 22 ಸೆಪ್ಟೆಂಬರ್ 2014 ಸೋಮವಾರ

ಹುಝೂರ್ ಅನ್ವರ್ ಮುಂಜಾನೆ 6 ಗಂಟೆಗೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ಫಜರ್ ನಮಾಝ್ ನಿರ್ವಹಣೆಯ ನಂತರ ಹುಝೂರೆ ಅನ್ವರ್ ವಸತಿ ಭಾಗಕ್ಕೆ ತೆರಳಿದರು. 11:30 ಗಂಟೆಗೆ ಹುಝೂರ್ ಅನ್ವರ್ ತನ್ನ ವಸತಿಗೃಹ ದಿಂದ ಹೊರಗೆ ಆಗಮಿಸಿದರು. ಸುಮಾರು 40 ನಿಮಿಷದವರೆಗೆ ತನ್ನ ಖುದ್ದಾಮರ ನಡುವೆ ಪ್ರವೇಶಿಸಿ ಮಾತನಾಡಿದರು. ಹುಝೂರೆ ಅನ್ವರ್ ಈ ನಡುವೆ ಕಡಲತೀರ ವಾಸಿಗರ ಸ್ಥಳವಾದ ಆ ಸುಂದರವಾದ ಕ್ಷೇತ್ರದ ಚಿತ್ರಗಳನ್ನು ತೆಗೆದುಕೊಂಡರು. ಮತ್ತು ತನ್ನ ಖುದ್ದಮರ ಜೊತೆ ವಿವಿಧ ಕಾರ್ಯಗಳ ಕುರಿತು ಚರ್ಚಿಸಿದರು. ವಿಶೇಷವಾಗಿ ಮೊಬೈಲ್ ಫೋನಿನಲ್ಲಿ ಆಗುತ್ತಿರುವ ಆಧುನಿಕ ತಂತ್ರಗಳ ಬಗ್ಗೆ ಹುಝೂರೆ ಅನ್ವರ್ ವಿವಿಧ ದೃಷ್ಟಿಕೋನದಿಂದ ಚರ್ಚಿಸಿದರು.

ಮಾನ್ಯ ಡಾ॥ ಅಬ್ದುಲ್ ಮೂಮೀನ್ ಜದ್ರಾನ್ ಸಾಹಿಬ್‌ರವರು ಖರೀದಿಸಿದ ಹೊಸ ವಾಹನ ಸಹ ಆ ತಂಡದಲ್ಲಿ ಸೇರಿತ್ತು. ಹುಝೂರೆ ಅನ್ವರ್ ಆತ್ಮೀಯತೆಯಿಂದ ಆ ವಾಹನದ ಬಳಿ ಬಂದು ಅದರಲ್ಲಿರುವ ಹೊಸ ಸಿಸ್ಟಮ್ ಮತ್ತು ಸವಲತ್ತುಗಳ ಕುರಿತು ವಿಚಾರಿಸಿದರು.

ನಂತರ ತನ್ನ ಕ್ಯಾಮರಾದಿಂದ ತಂಡದ ಸದಸ್ಯರು ಹಾಗೂ ಉಪಸ್ತಿತರ ಬಾವ ಚಿತ್ರಗಳನ್ನು ಪಡೆದರು. ಮತ್ತು ಕರ್ತವ್ಯಕ್ಕೆ ಹಾಜರಾದ ಖುದ್ದಾಮರಿಗೆ ಪ್ರೋತ್ಸಾಹ ನೀಡಿದರು. ಅನಂತರ ಸುಮಾರು 12 ಗಂಟೆಗೆ ತನ್ನ ವಸತಿನಿಲಯಕ್ಕೆ ತೆರಳಿದರು.

ನಂತರ ಕಾರ್ಯಕ್ರಮದನ್ವಯ ಇಲ್ಲಿಂದ ಹಡಗು ತಂಗುದಾಣಕ್ಕೆ ಪ್ರಯಾಣಿಸಬೇಕಾಗಿತ್ತು. ಇಲ್ಲಿಂದ ಅದು ಕೇವಲ 10 ನಿಮಿಷದ ದಾರಿ ಇತ್ತು.

12 ಗಂಟೆ 25 ನಿಮಿಷಕ್ಕೆ ಆಗಮಿಸಿದರು ಕರ್ತವ್ಯ ನಿರತ ಖುದ್ದಾಮರಿಗೆಲ್ಲ ಹಸ್ತಲಾಘವ ನೀಡಿದರು. ಖುದ್ದಾಮರು ತನ್ನ ನೇತಾರರ ಜೊತೆ ಸಾಮೂಹಿಕ ಭಾವಚಿತ್ರ ಪಡೆಯುವ ಭಾಗ್ಯ ಪಡೆದರು. ಅನಂತರ ಹುಝೂರ್ ದುಆ ನಿರ್ವಹಿಸಿ ತಂಡವು ಹಡಗುತಾಣದತ್ತ ಪಯಣಿಸಿತು.

12 ಗಂಟೆ 50 ನಿಮಿಷಕ್ಕೆ Holyhead port ಆಗಮಿಸಿದರು. ಅಲ್ಲಿ vip ಪ್ರೊಟೋಕೋಲ್ ಅನ್ವಯ ಪೋರ್ಟ್ ವ್ಯವಸ್ಥೆ ಪಡೆದು ತಂಡದ ಒಂದು ವಾಹನದ Ecort ನೊಂದಿಗೆ Ferry ಯ ಒಳಗೆ ಕರೆದುಕೊಂಡು ಹೋದರು. ಹೀಗೆ ತಂಡದ ವಾಹನಗಳು ಎಲ್ಲರಿಗಿಂತ ಮೊದಲು ಆ Irish Ferries ಮೇಲೆ ತಂಗಿದಂತಾಯಿತು. ಹಡಗಿನ ವಿಶೇಷ ಅಧಿಕಾರಿಗಳು ಹುಝೂರ್‌ರವರನ್ನು ಸ್ವಾಗತಿಸಿದರು ಮತ್ತು ಒಂದು ವಿಶಿಷ್ಟ ಅಪಾರ್ಟ್‌ನೊಂದಿಗೆ ಆಗಮಿಸಿದರು.

11 ಮಹಡಿಗಳನ್ನು ಒಳಗೊಂಡ ಈ ಹಡಗು ತನ್ನ ಸಮಯದ ಪ್ರಕಾರ 2 ಗಂಟೆ ಹತ್ತು ನಿಮಿಷಕ್ಕೆ ಬ್ರಿಟಾನಿಯಾದ Port holyhead ನಿಂದ ಐರ್ಲ್ಯಾಂಡ್‌ನ Port Dublin ನತ್ತ ಪ್ರಯಾಣಿಸಿತು. ಹಡಗಿನಲ್ಲಿ ಒಂದು ಕೋಣೆ ಪಡೆದು ನಮಾಝ್ ನಿರ್ವಹಣೆಯು ವ್ಯವಸ್ಥೆ ಮಾಡಿಕೊಂಡಿದ್ದರು. ಅಲ್ಲಿ ಝುಹರ್ ಅಸರ್ ನಮಾಝ್‌ಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು.

ಮುಂಜಾನೆ Ferry ಐರ್ಲ್ಯಾಂಡ್‌ನಿಂದ ಬ್ರಿಟಾನಿಯಾಕ್ಕೆ ಬರುತಿತ್ತು. ಆಗ ಐರ್ಲ್ಯಾಂಡ್‌ನವರು ತಮ್ಮ ಇಬ್ಬರು ಪ್ರತಿನಿಧಿಗಳಾದ ಮಲಿಕ್ ಮನ್ಸೂರ್ ಅಹ್ಮದ್ ನೆಷ್ನಲ್ ಸೆಕ್ರೆಟರಿ ಮಾಲ್ ಮತ್ತು ಅಸದ್ ಇಫ್ತಿಖಾರ್ ಸಾಹಿಬ್ ಮುಹತಮಿಮ್ ಮಾಲ್ ಖುದ್ದಾಮುಲ್ ಅಹ್ಮದಿಯಾ ಅವರುಗಳನ್ನು ಕಳುಹಿಸಿದ್ದರು. ಅವರು ಫೇರಿಯಿಂದ ಹೊರಟ ಮೇಲೆ ಮುಂದೆ Dublin ವರೆಗಿನ ಪ್ರಯಾಣದ ಪೈಕಿ ಕೆಲ ಕಾರ್ಯಗಳು ಫೇರಿಯಲ್ಲಿಯೇ ವ್ಯವಸ್ಥೆ ಮಾಡಿಕೊಳ್ಳಲು ಮತ್ತು ಅವರ ವಾಹನ ಫೇರಿಯಿಂದ ಹೊರಡುತ್ತಲೇ ತಂಡವನ್ನು Escort ಮಾಡಲು ಆ ಎರಡೂ ಸದಸ್ಯರು ಸಹ ಈ ಪ್ರಯಾಣದಲ್ಲಿ ಜೊತೆಗಿದ್ದರು. ಹುಝೂರೆ ಅನ್ವರ್ ಆತ್ಮೀಯವಾಗಿ ಆ ಇಬ್ಬರರೊಂದಿಗೆ ಮಾತನಾಡಿದರು.

ಸುಮಾರು ಮೂರು ಗಂಟೆ 20 ನಿಮಿಷದ ಪ್ರಯಾಣದ ನಂತರ Ferry ಐರ್ಲ್ಯಾಂಡ್‌ನ ಬಂದರು ಡಬ್ಲಾನ್ ತಲುಪಿದರು. ಮತ್ತು ವಿಶೇಷ ರಕ್ಷಣಾ ವ್ಯವಸ್ಥೆ ಅನ್ವಯ ಹುಝೂರೆ ಅನ್ವರ್ ಮತ್ತು ಅವರ ತಂಡಗಳ ವಾಹನಗಳು ಎಲ್ಲರಿಗಿಂತ ಮೊದಲು ಹಡಗಿನಿಂದ ಹೊರಗೆ ಬಂದರು. ಮತ್ತು ಡಬ್ಲೀನ್ ನಗರಕ್ಕೆ ಪ್ರಯಾಣ ಪ್ರಾರಂಭವಾಯಿತು.

ಬಂದರಿನಿಂದ ಹೊರಟ ನಂತರ ಆರು ಗಂಟೆ 20 ನಿಮಿಷಕ್ಕೆ ಹುಝೂರೆ ಅನ್ವರ್ Castlecknock ಹೋಟೆಲ್ ಆಗಮಿಸಿದರು.

ಈ ಹೋಟೆಲ್ ಬಂದರಿನಿಂದ ಹೊರಟ ನಂತರ ಡಬ್ಲಿನ್ ನಗರದ castknock ಕ್ಷೇತ್ರದಲ್ಲಿದೆ. ಡಬ್ಲಿನ್ ವಾಸದ ನಡುವೆ ಹುಝೂರ್ ಅನ್ವರ್ ಮತ್ತು ಅವರ ತಂಡದ ಸದಸ್ಯರು ವಾಸಿಸುವ ವ್ಯವಸ್ಥೆ ಅದೇ ಹೋಟೆಲ್‌ನಲ್ಲಿ ಮಾಡಲಾಗಿತ್ತು.

ಹುಝೂರ್ ಅನ್ವರ್ ವಾಹನದಿಂದ ಕೆಳಗಿಳಿಯುತ್ತಲೇ ಐರ್ಲ್ಯಾಂಡ್ ಜಮಾಅತಿನ ನ್ಯಾಷನಲ್ ಅಧ್ಯಕ್ಷರಾದ ಡಾ॥ ಅನ್ವರ್ ಅಹ್ಮದ್ ಮಲಿಕ್ ಸಾಹೇಬ್ ಮುಬಲ್ಲಿಗ್ ಇನ್‌ಚಾರ್ಜ್ ಐರ್ಲ್ಯಾಂಡ್ ಇಬ್ರಾಹಿಮ್ ನೂನನ್ ಸಾಹೇಬ್ ಮತ್ತು ಇನ್ನೋರ್ವ ಐರ್ಲ್ಯಾಂಡ್ ಜಮಾಅತಿನ ಮುಬಲ್ಲಿಗ್ ರಬೀಬ್ ಅಹ್ಮದ್ ಮಿರ್ಝಾ ಸಾಹೇಬ್ ಇವರುಗಳು ಹುಝೂರ್‌ರನ್ನು ಬರಮಾಡಿಕೊಂಡರು ಮತ್ತು ಹಸ್ತಲಾಘವ ಮಾಡುವ ಭಾಗ್ಯ ಪಡೆದರು. ಸದರ್ ಲಜ್ನ ಇಮಾವುಲ್ಲ ತಯ್ಯಬ ವಶ್‌ಹೂದ್ ಸಾಹಿಬ ಹಝ್ರತ್ ಬೇಗಂ ಸಾಹಿಬ ಅವರನ್ನು ಸ್ವಾಗತ ಕೋರಿದರು.

ಹೋಟೆಲ್‌ನ (ಹೊರ ವಲಯ) ಹೊರಾಂಗಣದಲ್ಲಿ ಡಬ್ಲಿನ್ ಮತ್ತು ಗಾಲ್‌ವೇ ಜಮಾಅತಿನಿಂದ ಬಂದ ಸದಸ್ಯರು ಅವರಲ್ಲಿ ಸ್ತ್ರೀ ಪುರುಷರು ಮಕ್ಕಳು, ವೃದ್ಧರೂ ಸೇರಿದ್ದರು. ಅವರೆಲ್ಲರೂ ತನ್ನ ಪ್ರೀತಿಯ ನೇತಾರರನ್ನು ಸ್ವಾಗತಿಸಲು ನೆರೆದಿದ್ದರು. ಬಾಲಕ ಮತ್ತು ಬಾಲಕಿಯರು ಪ್ರತ್ಯೇಕ ಗುಂಪುಗಳನ್ನು ಕಟ್ಟಿ (ನಜಂ) ಸ್ವಾಗತ ಗೀತೆಗಳನ್ನು ಪ್ರಸ್ತುತಪಡಿಸುತ್ತಿದ್ದರು. ಬಾಂಧವರೆಲ್ಲರೂ ತನ್ನ ಕೈಗಳನ್ನು ಬೀಸುತ್ತಾ ತನ್ನ ಪ್ರೀತಿಯ ನೇತಾರರನ್ನು ಸ್ವಾಗತ ಕೋರುತ್ತಿದ್ದರು.

ಹುಝೂರ್ ಅನ್ವರ್ (ಅಬಿಅ) ಅವರು ತನ್ನ ಕೈಯನ್ನು ಬೀಸುತ್ತ ಎಲ್ಲರಿಗೂ ಅಸ್ಸಲಾಮು ಅಲೈಕುಮ್ ಹೇಳಿದರು. ಮತ್ತು ಹೋಟೆಲ್‌ನಲ್ಲಿ ತನ್ನ ವಸತಿ ವಿಭಾಗದತ್ತ ತೆರಳಿದರು.

ಮಗರಿಬ್ ಇಷಾ ನಮಾಝುಗಳನ್ನು ನಿರ್ವಹಿಸುವ ವ್ಯವಸ್ಥೆ ಹೋಟೆಲ್‌ನ ಒಂದು ಸಭಾಂಗಣದಲ್ಲಿ ಮಾಡಲಾಗಿತ್ತು. ಏಳುಗಂಟೆ ಐವತ್ತ ಐದು ನಿಮಿಷಕ್ಕೆ ಹುಝೂರ್ ಅನ್ವರ್ ಅವರು ಆಗಮಿಸಿ ಮಗರಿಬ್ ಇಷಾ ನಮಾಝ್‌ಗಳನ್ನು ನಿರ್ವಹಿಸಿಕೊಟ್ಟರು. ನಮಾಝಿನ ನಿರ್ವಹಣೆಯ ನಂತರ ತಮ್ಮ ವಸತಿ ವಿಭಾಗಕ್ಕೆ ತೆರಳಿದರು.

**********

ಐರ್ಲ್ಯಾಂಡ್ ದೇಶವು ಯೂರೋಪ್ ಖಂಡದ ದೂರದ ವಾಯುವ್ಯದಲ್ಲಿರುವ ಪೆಸಿಫಿಕ್ ಸಾಗರದಲ್ಲಿರುವ ಒಂದು ದ್ವೀಪವಾಗಿದೆ. 70,273 ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿ ಹರಡಿರುವ ದೇಶವು ನಾಲ್ಕು ಪ್ರಾಂತ್ಯಗಳು ಮತ್ತು ಇಪ್ಪತ್ತಾರು ಕೌಂಟಿಗಳನ್ನು ಒಳಗೊಂಡಿದೆ. ಅದು 45 ಲಕ್ಷ ಮತ್ತು ಇಪ್ಪತ್ತಾರು ಕೌಂಟಿಗಳನ್ನು ಒಳಗೊಂಡಿದೆ. ಅದು 45 ಲಕ್ಷ ಜನಸಂಖ್ಯೆಯನ್ನು ಹೊಂದಿದೆ.

ಇಲ್ಲಿ Roman catholic ಧರ್ಮದಿಂದ ಸಂಬಂಧ ಹೊಂದಿದ ಜನರು ಬಹುಸಂಖ್ಯೆಯಲ್ಲಿದ್ದಾರೆ. ಉಳಿದ 5 Percentage ವಿವಿಧ ಧರ್ಮದವರಿದ್ದಾರೆ ಮತ್ತು ಸಮುದಾಯಗಳಿಗೆ ಸಂಬಂಧಿಸಿದೆ.

**(ಮುಂದುವರಿಯುವುದು)**


**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**


Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.